# ಅಧ್ಯಾಯ 12

# ಕ್ರೈಸ್ತ ಜೀವನ (ಭಾಗ 1)

ಅಧ್ಯಾಯ 1ರಿಂದ 8ರ ವರೆಗೆ ನಮ್ಮ ರಕ್ಷಣೆಯ ಮೂಲಾಧಾರದ ಕುರಿತಾಗಿ ಪೌಲನ ವ್ಯಾಖ್ಯೆಗಳಿದ್ದರೆ, 9ರಿಂದ 11 ಅಧ್ಯಾಯಗಳು "ಯೆಹೂದಿ ಸಮಸ್ಯೆ" ಬಗ್ಗೆ ಮಾತಾಡುತ್ತವೆ. ಅಂತಿಮ ಅಧ್ಯಾಯಗಳು ಇದುವರೆಗೂ ಅಪೊಸ್ತಲನು ಹೇಳಿದ್ದೆಲ್ಲವನ್ನು ಅಭ್ಯಾಸಪೂರ್ವಕವಾಗಿ ಅನ್ವಯಿಸಿಕೊಳ್ಳುವ ವಿಷಯದ ಸುತ್ತ ಕೇಂದ್ರಿಕೃತವಾಗಿರುತ್ತವೆ. ಪೌಲನು ದೈವಶಾಸ್ತ್ರಿಕ ವಿಚಾರದ ಅತ್ಯಂಥ ಎತ್ತರಕ್ಕೆ ಹಾರಬಲ್ಲವನಾಗಿದ್ದನು, ಆದರೆ ಆತನು ಯಾವಾಗಲೂ ಭೂಮಿಯ—ನಾವು ಜೀವಿಸುವ ಸ್ಥಳ—ಮೇಲೆ ತನ್ನ ಪಾದವನ್ನು ಭದ್ರವಾಗಿಡುವವನಾಗಿ ಅಂತ್ಯಗೊಳಿಸುತ್ತಿದ್ದನು. ಆತನು ನಂಬಿಕೆ ಮತ್ತು ನಡತೆ ಎರಡರ ಬಗ್ಗೆಯೂ ಕಳಕಳಿ ಹೊಂದಿದ್ದನು.[1] ಆತನು ಕಲಿಕೆ ಮೇಲೆ ಮಾತ್ರವೇ ಗಮನವನ್ನು ಕೊಡಲಿಲ್ಲ, ಆದರೆ ಜೀವನದ ಮೇಲೆ ಸಹ ಗಮನ ಕೊಟ್ಟನು—ಸಿದ್ಧಾಂತ ಮಾತ್ರವಲ್ಲ, ಆದರೆ ಕರ್ತವ್ಯದ ಮೇಲೆ ಸಹ.[2] R. C. Bell ರೋಮಾಪುರದವರಿಗೆ ಆರಂಭಿಕ ಅಧ್ಯಾಯಗಳನ್ನು "ಬೇರು," ಮತ್ತು ನಂತರ ಅಧ್ಯಾಯಗಳನ್ನು "ಫಲ" ಎಂದು ಕರೆಯುತ್ತಾನೆ.[3]

ಪತ್ರಿಕೆಯ ಅನ್ವಯಿಕೆ ವಿಭಾಗವು ಶಾಸ್ತ್ರಗಳಲ್ಲಿಯೇ ಅತ್ಯಂಥ ಶ್ರೇಷ್ಠವಾದ ಅಧ್ಯಾಯಗಳಲ್ಲೊಂದರಿಂದ ಆರಂಭಗೊಳ್ಳುತ್ತದೆ: ರೋಮಾ 12. ಈ ಪ್ರಿಯವಾದ ಅಧ್ಯಾಯದ ಕುರಿತಾಗಿ, J. D. Thomas ಹೀಗೆ ಹೇಳುತ್ತಾನೆ, "ಕ್ರೈಸ್ತ ಜೀವನದ ಕುರಿತ ಒಂದು ಉತ್ತಮವಾದ ಸಾರಾಂಶವು ನಿಮಗೆ ಬೈಬಲಿನಲ್ಲಿ ಬೇರೆ ಎಲ್ಲೂ ಸಿಕ್ಕುವದಿಲ್ಲ."[4]

## ದೇವರ ವಿಷಯದಲ್ಲಿನ ಧೋರಣೆ (12:1, 2)

**1ಆದದರಿಂದ ಸಹೋದರರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನಂದರೆ – ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು. 2ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.**

ಈ ವಚನಗಳು 12ರಿಂದ 16 ಅಧ್ಯಾಯಗಳಲ್ಲಿನ ಬುದ್ಧಿವಾದಗಳಿಗೆ ಒಂದು ವೇದಿಕೆಯನ್ನು ಸಿದ್ಧಗೊಳಿಸುತ್ತವೆ. ಪೌಲನು ರೊಮಾ 12:1, 2ರಲ್ಲಿ ಕ್ರೈಸ್ತರಿಗೆ

ಮಾಡಬೇಕೆಂದು ಕೇಳಿಕೊಂಡ ಸಂಗತಿಗಳನ್ನು ನಾವು ಮಾಡುವದಾದರೆ, 12:3-16:27ರಲ್ಲಿ ಕೇಳಿಕೊಳ್ಳಲಾದ ಯಾವದೇ ಬೇಡಿಕೆಯನ್ನು ನೆರವೇರಿಸುವದಕ್ಕೆ ಅಷ್ಟೇನೂ ಕಷ್ಟವಾಗದು.

**ವಚನ 1.** ಅಧ್ಯಾಯವು **ಆದದರಿಂದ** (οὖν, *oun*) ಎಂದು ಆರಂಭಗೊಳ್ಳುತ್ತದೆ. ಪೌಲನು ಅನೇಕ ಸಾರಿ ಒಂದು ಹೊಸ ವಿಭಾಗವನ್ನು "ಆದದರಿಂದ" ಎಂಬದಾಗಿ ಆರಂಭಿಸುತ್ತಾನೆ (ನೋಡಿರಿ 1:24; 2:1; 5:1, 12; 6:12; 7:4, 13; 8:1[5]), ಹೀಗೆ ತಾನು ಈಗಷ್ಟೇ ಪೂರ್ತಿಗೊಳಿಸಿದ ವಿಚಾರಗಳಿಗೆ ಮುಂದೆ ಹೇಳಲು ಹೊರಟಿರುವದನ್ನು ಜೋಡಣೆಗೊಳಿಸುತ್ತಾನೆ. 12:1ರಲ್ಲಿನ "ಆದದರಿಂದ" ಪ್ರತ್ಯಯವು ರೋಮಾಪುರದವರಿಗೆ ಪತ್ರಿಕೆಯ ಕಡೇ ಭಾಗದಲ್ಲಿನ ಅನ್ವಯಿಕೆಯನ್ನು ಪತ್ರಿಕೆಯ ಮೊದಲ ಭಾಗದಲ್ಲಿರುವ ಉಪದೇಶದೊಂದಿಗೆ ಜೋಡಣೆ ಮಾಡುತ್ತದೆ. ಕ್ರೈಸ್ತರು ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದಾರೆ ಎಂಬುದನ್ನು ಪೌಲನು ಒತ್ತಿ ಹೇಳಿದ್ದನು. ಇಲ್ಲಿ, ಆತನು ನಂಬಿಕೆಯಿಂದ ನೀತಿವಂತನೆಂದು ನಿರ್ಣಯಿಸಲ್ಪಟ್ಟಿರುವ ಒಬ್ಬ ವ್ಯಕ್ತಿಯು ಹೇಗೆ ಜೀವಿಸತಕ್ಕದ್ದು ಎಂಬ ವಿವರಣೆಯನ್ನು ಕೊಡುತ್ತಾನೆ.

ಪೌಲನು ಹೀಗೆ ಹೇಳುತ್ತಾನೆ, **ನಿಮ್ಮನ್ನು ಬೇಡಿಕೊಳ್ಳುವದೇನಂದರೆ.** KJVಯಲ್ಲಿ "ಕೇಳಿಕೊಳ್ಳುತ್ತೇನೆ" ಎಂದಿದೆ. NEB ಯಲ್ಲಿ "ಮೊರೆಯಿಡುತ್ತೇನೆ" ಎಂದಿದೆ. ಹಲವಾರು ತರ್ಜುಮೆಗಳಲ್ಲಿ "ಅಂಗಲಾಚಿಸುತ್ತೇನೆ" ಎಂದಿರುತ್ತದೆ (Phillips; McCord; JB). ಪೌಲನು ತನ್ನ ವಾಚಕರಿಗೆ ಆಜ್ಞಾಪಿಸುವದರ ಬದಲಾಗಿ, ಆತನು ಅವರನ್ನು ಬೇಡಿಕೊಂಡನು, ಕೇಳಿಕೊಂಡನು, ಮೊರೆಯಿಟ್ಟನು, ಅಂಗಲಾಚಿಸಿದನು. ಬಹುಶಃ ದೇವರಿಗೆ ಒತ್ತಾಯದ ಯಜ್ಞವು ಇಷ್ಟವಿಲ್ಲ, ಆದರೆ ಒಂದು ಮನಃಪೂರ್ವಕ ಯಜ್ಞವನ್ನು ಬಯಸುತ್ತಾನೆ ಎಂಬ ಕಾರಣಕ್ಕಾಗಿ ಆತನು ಹೀಗೆ ಮಾಡಿದ್ದಿರಬೇಕು.

"ಬೇಡಿಕೊಳ್ಳುವದೇನಂದರೆ" ಎಂಬುದು παρακαλέω (*parakaleō*) ಎಂಬ ಪದದ ಅನುವಾದವಾಗಿದೆ, ಅದರ ಅಕ್ಷರಶಃ ಅರ್ಥವು "ಒಬ್ಬನ ಪಕ್ಕಕ್ಕೆ ಬರುವಂತೆ ಕರೆಯುವದು" ಎಂದಾಗಿದೆ.[6] ಅದು καλέω (*kaleō*, "ಕರೆ") ಎಂಬುದರ ಜೊತೆಗೆ παρά (*para*, "ಜೊತೆಯಲ್ಲಿ") ಎಂಬ ಪದದ ಸಂಯೋಜನೆಯಾಗಿರುತ್ತದೆ. ಸಾದೃಶ್ಯವು ಏನೆಂದರೆ ಒಬ್ಬ ಮಿತ್ರನನ್ನು ಪಕ್ಕದಲ್ಲಿರುವಂತೆ ಕರೆಯುವದು, ಬಹುಶಃ ಆತನು ಭುಜದ ಸುತ್ತ ಬಾಹುವನ್ನು ಹಾಕಿ, ಆತನ ಕಣ್ಣುಗಳನ್ನು ದೃಷ್ಟಿಸಿ, "ಸಹೋದರನೇ, ಇದನ್ನು ಮಾಡುವಂತೆ ನಿನ್ನನ್ನು ನನ್ನ ಸಕಲ ಶಕ್ತಿಯಿಂದ ನಿನ್ನನ್ನು ಪ್ರೋತ್ಸಾಹಿಸುತ್ತೇನೆ" ಎಂದು ಹೇಳುವ ರೀತಿಯಲ್ಲಿರುತ್ತದೆ. Dale Hartman ಹೀಗೆ ವ್ಯಾಖ್ಯಾನಿಸುತ್ತಾನೆ, "ಪೌಲನು ಒತ್ತು ಕೊಡುವದಕ್ಕಾಗಿ ಅಡಿರೇಖೆಯನ್ನು ಉಪಯೋಗಿಸಿದ್ದರೆ, ಆತನು ಆ ಮಾತುಗಳನ್ನು ಮತ್ತು ಅವುಗಳ ತಕ್ಷಣ ಬರುವ ಮಾತುಗಳನ್ನು ಅಡಿಯಲ್ಲಿ ಗೆರೆಹಾಕಿರುತ್ತಿದ್ದನು."[7] ಪೌಲನು ರೋಮಾಪುರದವರಿಗೆ ಪತ್ರಿಕೆಯನ್ನು ಓದಿದ ಒಬ್ಬ ವ್ಯಕ್ತಿ ಏನು *ಮಾಡತಕ್ಕದ್ದು* ಎಂಬುದನ್ನು ಪ್ರಕಟಗೊಳಿಸಲಿದ್ದನು.

ಪೌಲನು **ಸಹೋದರರೇ** ಎಂಬ ಮಾತಿನ ಮೂಲಕ ತನ್ನ ಹೃತ್ಪೂರ್ವಕ, ವೈಯಕ್ತಿಕವಾದ ಮಾತಿನ ಶೈಲಿಯನ್ನು ಮುಂದುವರೆಸುತ್ತಾನೆ. ಇಲ್ಲಿಂದ ಮೊದಲ್ಗೊಂಡು ಪತ್ರಿಕೆಯ ಅಂತ್ಯದ ವರೆಗೆ, ಆತನು ಯೆಹೂದ್ಯರಾಗಲಿ ಅಥವಾ ಅನ್ಯಜನರಾಗಲಿ, ರೋಮಾಪುರದಲ್ಲಿನ ತನ್ನ *ಎಲ್ಲಾ* ಆತ್ಮೀಕ ಸಹೋದರ ಮತ್ತು ಸಹೋದರಿಯರನ್ನು ಉದ್ದೇಶಿಸಿ ಮಾತಾಡುತ್ತಾನೆ.

ಪೌಲನು ತನ್ನ ಸಹೋದರರರನ್ನು **ದೇವರ ಕನಿಕರವನ್ನು ನೆನಪಿಗೆ ತಂದು** ಬೇಡಿಕೊಳ್ಳುತ್ತಾನೆ. ಕೆಲವು ತರ್ಜುಮೆಗಳು "ಕನಿಕರ" (ಏಕವಚನ) ಎಂದು ಹೊಂದಿವೆ, ಆದರೆ ಆ ಪದವು ಗ್ರೀಕ್ ವಾಕ್ಯದಲ್ಲಿ ಬಹುವಚನವಾಗಿರುತ್ತದೆ. ಆ ಪದದ ಕೋಶಾರ್ಥದ ರೂಪವು οἰκτιρμός (*oiktirmos*) ಆಗಿದೆ. ಹೊಸ ಒಡಂಬಡಿಕೆಯಲ್ಲಿ "ಕನಿಕರ" ಎಂಬುದರ ಅತ್ಯಂಥ ಸಾಮಾನ್ಯ ಪದವು ἔλεος (*eleos*). ಗ್ರೀಕ್.ನ ಈ ಎರಡು ಪದಗಳು 9:15ರಲ್ಲಿ ಪರ್ಯಾಯವಾಗಿ ಉಪಯೋಗಿಸಲ್ಪಟ್ಟಿವೆ, ಅಲ್ಲಿ *eleos* "ಕರುಣೆ" *ಎಂದು* v*ಮತ್ತು oiktirmos* "ಕನಿಕರ" *ಎಂದು ಅನುವಾದಿಸಲ್ಪಟ್ಟಿದೆ.*

"ದೇವರ ಕನಿಕರಗಳು" ಎಂಬುದು ಮುಂಚಿನ ಅಧ್ಯಾಯಗಳಲ್ಲಿ ಮುಂದಿಡಲ್ಪಟ್ಟ ಕನಿಕರದ ಅನೇಕ ಕ್ರಿಯೆಗಳಾಗಿವೆ: ನಮ್ಮನ್ನು ರಕ್ಷಿಸುವದರಲ್ಲಿ ದೇವರ ಕನಿಕರ, ನಮಗೆ ಕ್ರೈಸ್ತ ಜೀವಿತಗಳನ್ನು ನಡಿಸುವಂತೆ ಸಹಾಯ ಮಾಡುವದರಲ್ಲಿನ ಆತನ ಕನಿಕರ, ಮತ್ತು ಹೀಗೆ ಅನೇಕ ರೀತಿಯಲ್ಲಿ. "ಆತನ ಕನಿಕರವನ್ನು ದೃಷ್ಟಿಯಲ್ಲಿಟ್ಟುಕೊಂಡು" (NIV), ಆತನು ನಮಗೆ ಮಾಡುವಂತೆ ಹೇಳುವ ಯಾವದನ್ನೇ ಆಗಲಿ ಮಾಡುವದಕ್ಕೆ ಸಿದ್ಧರಾಗಿರಬೇಕು. "ಆತನು ನಮಗೆ ಮಾಡಿರುವದನ್ನು ಯೋಚಿಸಿದಾಗ, ಇದು ಅತಿಯಾದ ಬೇಡಿಕೆ ಎನ್ನಿಸುತ್ತದೋ?" (NLT).

ಪೌಲನು ಕ್ರಿಸ್ತನಲ್ಲಿ ತನ್ನ ಸಹೋದರ ಮತ್ತು ಸಹೋದರಿಯರಿಗೆ ಏನನ್ನು ಮಾಡಬೇಕೆಂದು ಮೊರೆಯಿಟ್ಟನು? ಆತನು ಮೊದಲು ಅವರನ್ನು [ಅವರ] **ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ** ಎಂದು ಕೇಳಿಕೊಂಡನು. ಈ ಮಾತುಗಳು ಇಂದು ನಮಗಿಂತಲೂ ಮೊದಲ ಶತಮಾನದ ವಾಚಕರಿಗೆ ಹೆಚ್ಚು ಅರ್ಥಪೂರ್ಣವಾಗಿದ್ದವು. ಶತಮಾನಗಳಿಂದಲೂ, ಯೆಹೂದ್ಯರು ದೇವಾಲಯಕ್ಕೆ ಪ್ರಾಣಿ ಯಜ್ಞಗಳನ್ನು ತರುತ್ತಿದ್ದರು. ಅನ್ಯದೇವರಾಧನೆಯಲ್ಲಿ ಸಹ ಯಜ್ಞಗಳನ್ನು ಅರ್ಪಿಸಲಾಗುತ್ತಿತ್ತು. ಪೌಲನು ಕ್ರೈಸ್ತರಿಗೆ ನೀಡುವ ಕರೆಯು ಪ್ರಾಣಿ ಯಜ್ಞದೊಂದಿಗೆ ಹೋಲಿಕೆ ಹಾಗೂ ತದ್ವಿರುದ್ಧತೆ ಎರಡನ್ನೂ ಒಳಗೊಂಡಿರುತ್ತದೆ—ವಿಶೇಷವಾಗಿ ಯೆಹೂದಿ ಧರ್ಮದ ಯಜ್ಞಗಳ ವಿಷಯದಲ್ಲಿ. ಈ ಅಧ್ಭುತವಾದ ಕರೆಕೊಡುವಿಕೆಯ ಬಗ್ಗೆ ವಿವರವಾಗಿ ನೋಡೋಣ:

"ಅರ್ಪಿಸಿರಿ"—"ಅರ್ಪಿಸಿರಿ" ಎಂಬುದು παρίστημι (*paristēmi*) ಎಂಬ ಪದದಿಂದ ಬಂದಿರುತ್ತದೆ ಮತ್ತು ಮೂಲಭೂತವಾಗಿ "ಪಕ್ಕದಲ್ಲಿಡು" ಎಂಬರ್ಥವನ್ನು ಕೊಡುತ್ತದೆ. ಆ ಪದವು ἵστημι (*histēmi*, "ಇಡು") ಎಂಬುದರ ಜೊತೆಗೆ παρά (*para*, "ಜೊತೆಯಲ್ಲಿ") ಎಂಬ ಪದಗಳನ್ನೊಂಡು ರೂಪಗೊಂಡಿರುತ್ತದೆ. ಇದು ಕರ್ತನ ಮುಂದೆ ಒಂದು ಕಾಣಿಕೆ ಇಡುವದನ್ನು ಸೂಚಿಸುವದಾಗಿತ್ತು. ಅದು "ಯಾಜಕತ್ವದ ಬಲಿಗಳನ್ನು ಮತ್ತು ಕಾಣಿಕೆಗಳನ್ನು ಅರ್ಪಿಸುವದನ್ನು ಸೂಚಿಸುವ ತಾಂತ್ರಿಕ ಪದವಾಗಿತ್ತು."[8]

"ನಿಮ್ಮ ನಿಮ್ಮ ದೇಹಗಳನ್ನು"—ನೀವು *ನಿಮ್ಮನ್ನೇ* ಅರ್ಪಿಸತಕ್ಕದ್ದು. ಯಾವ ಪ್ರಾಣಿಯು ಸಹ ಎಂದಿಗೂ ದೇವಾಲಯೊಳಕ್ಕೆ ಬಂದು "ಇಗೋ, ನಾನಿಲ್ಲಿದ್ದೇನೆ! ನನ್ನನ್ನು ಯಜ್ಞ ಮಾಡಿರಿ" ಎಂದು ಹೇಳಿದ್ದಿಲ್ಲ. ಹೇಗೂ, ತತ್ಪರಿಣಾಮವಾಗಿ, ಅದನ್ನೆ ಒಬ್ಬ ಕ್ರೈಸ್ತನು ಮಾಡುತ್ತಾನೆ. ಈ ವಿಷಯದಲ್ಲಿ, ಒಬ್ಬ ಕ್ರೈಸ್ತನು ಯಾಜಕ ಹಾಗೂ ಯಜ್ಞ ಎರಡೂ ತಾನೇ ಆಗಿರುತ್ತಾನೆ.

"ನಿಮ್ಮ ನಿಮ್ಮ ದೇಹಗಳನ್ನು"—ಪ್ರಾಣಿಗಳನ್ನು ಯಜ್ಞ ಮಾಡುವದರ ಬದಲಾಗಿ, ಕ್ರೈಸ್ತರು ತಮ್ಮ ದೇಹಗಳನ್ನು, ತಮ್ಮ ಜೀವಿತಗಳನ್ನು ದೇವರಿಗೆ ಅರ್ಪಿಸುವವರಾಗಿದ್ದಾರೆ.

"ಸಜೀವಯಜ್ಞವಾಗಿ"—ಸತ್ತ ಪ್ರಾಣಿಗಳನ್ನು ಅರ್ಪಿಸುವದರ ಬದಲಾಗಿ, ಕ್ರೈಸ್ತರು ಒಂದು ಸಜೀವ ಯಜ್ಞವನ್ನು ಅರ್ಪಿಸುವರು. ಕೆಲವು ಬರಹಗಾರರು "ಸಜೀವ" ಎಂಬುದು ಕ್ರೈಸ್ತರು ಆತ್ಮೀಕವಾಗಿ ಜೀವಂತವಾಗಿದ್ದಾರೆಂಬುದನ್ನು ಸೂಚಿಸುತ್ತದೆಂದು ಭಾವಿಸುತ್ತಾರೆ. ದೀಕ್ಷಾಸ್ನಾನದ ನಂತರ, ನಾವು "ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳುತ್ತೇವೆ" (6:4).

"ಮೀಸಲಾಗಿಯೂ"—ಕರ್ತನಿಗೆ ಅರ್ಪಿಸಿದ ಯಜ್ಞಗಳು ಮೀಸಲಾಗಿರಬೇಕಾಗಿತ್ತು (ಆತನಿಗೋಸ್ಕರ ಪ್ರತ್ಯೇಕಿಸಲ್ಪಟ್ಟ ವುಗಳು) ಮತ್ತು ದೋಷವಿಲ್ಲದ್ದು ಆಗಿರಬೇಕಿತ್ತು (ಯಾಜ 1:3; ಮಲಾಕಿ 1:8; 1 ಪೇತ್ರ 1:19). ಕ್ರೈಸ್ತರು ಯಾವಾಗಲೂ ತಮ್ಮ ಅತ್ಯುತ್ತಮವಾದದ್ದನ್ನೇ ದೇವರಿಗೆ ಅರ್ಪಿಸಬೇಕಾಗಿರುತ್ತದೆ.

"ಯಜ್ಞವಾಗಿ"—F. F. Bruce ಪ್ರಕಾರವಾಗಿ, "ಹಿಂದಿನ ದಿನಗಳ ಪ್ರಾಣಿ ಯಜ್ಞಗಳು ಕ್ರಿಸ್ತನ ಸ್ವಯಜ್ಞದ ಮೂಲಕ ಸದಾಕಾಲಕ್ಕೂ ತ್ಯಜಿಸಲ್ಪಟ್ಟಿರುತ್ತವೆ, ಆದರೆ ವಿಧೇಯ ಹೃದಯಗಳ ಮೂಲಕ ಅರ್ಪಿಸುವ ಆರಾಧನೆಗೆ ಯಾವಾಗಲೂ ಸ್ಥಳಾವಕಾಶ ಇದ್ದೇ ಇರುತ್ತದೆ."[9] ಪೇತ್ರನು ಕ್ರೈಸ್ತರಿಗೆ ಹೀಗೆ ಬರೆಯುತ್ತಾನೆ, "ಆತ್ಮಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ಮತ್ತು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯಯಜ್ಞಗಳನ್ನು ಸಮರ್ಪಿಸುವದಕ್ಕೆ ಪವಿತ್ರ ಯಾಜಕವರ್ಗದವ ರಾಗಿದ್ದೀರಿ" (1 ಪೇತ್ರ 2:5). ಇಬ್ರಿಯ ಪುಸ್ತಕದ ಬರಹಗಾರನು ಯೇಸುವಿನ ಪ್ರತಿಯೊಬ್ಬ ಹಿಂಬಾಲಕನಿಗೆ ಈ ಕರೆಯನ್ನು ಕೊಡುತ್ತಾನೆ: "ಆದದರಿಂದ ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ. ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆಮಾಡುವದೇ ನಾವು ಅರ್ಪಿಸುವ ಯಜ್ಞವಾಗಿದೆ. ಇದಲ್ಲದೆ ಪರೋಪಕಾರವನ್ನೂ ಧರ್ಮಮಾಡುವದನ್ನೂ ಮರೆಯಬೇಡಿರಿ; ಇವೇ ದೇವರಿಗೆ ಸಮರ್ಪಕವಾದ ಯಜ್ಞಗಳು" (ಇಬ್ರಿಯ 13:15, 16).

"ದೇವರಿಗೆ . . . ಮೆಚ್ಚಿಗೆಯಾಗಿಯೂ"—"ಮೆಚ್ಚಿಗೆಯಾಗಿಯೂ" ಎಂದು ಅನುವಾದಿಸಲ್ಪಟ್ಟಿರುವ εὐάρεστος (*euarestos*) ಎಂಬ ಪದದ ಅಕ್ಷರಶಃ ಅರ್ಥವು "ಉತ್ತಮ-ಮೆಚ್ಚಿಕೆಯಾದ" ಎಂದಾಗಿರುತ್ತದೆ. ಅದು εὐ (*eu*, "ಉತ್ತಮ") ಮತ್ತು ἀρεστός (*arestos*, "ಮೆಚ್ಚಿಕೆಯಾದ") ಎಂಬ ಪದಗಳಿಂದ ರಚನೆಯಾಗಿರುತ್ತದೆ. ಹಳೆಯ ಒಡಂಬಡಿಕೆಯ ಕಾಲದಲ್ಲಿ, ದೇವರು ನಿರ್ದೇಶಿಸಿದ ಪ್ರಕಾರ ಪ್ರಾಣಿಗಳನ್ನು ಯಜ್ಞ ಮಾಡುವ ವೇಳೆ, ಹೊಗೆಯು ಮೇಲಕ್ಕೆ ಏರಿ "ಯೆಹೋವನಿಗೆ ಸುವಾಸನೆಯನ್ನುಂಟುಮಾಡುತ್ತಿತ್ತು" (ಅರಣ್ಯ 15:3; NIV). ಅದೇ ರೀತಿಯಲ್ಲಿ, ನಾವು ಚರ್ಚಿಸುತ್ತಿರುವಂಥ ಆತ್ಮೀಕ ಯಜ್ಞದ ವಿಧವು ದೇವರಿಗೆ ಮೆಚ್ಚಿಕೆಯಾಗಿರುತ್ತದೆ ಮತ್ತು ಅಂಗೀಕಾರವಾಗುತ್ತದೆ.

ರೋಮಾಪುರದವರಿಗೆಯಲ್ಲಿ ಈ ಮುಂಚೆ, ಪೌಲನು ತನ್ನ ವಾಚಕರಿಗೆ ಈ ಕೆಳಗಿನಂತೆ ಕರೆಕೊಡುವದಕ್ಕೆ "ಸಮರ್ಪಿಸಿರಿ" (*paristēmi*) ಮತ್ತು "ದೇಹದ" σῶμα (*sōma*) ಎಂಬ ಪದಗಳನ್ನು ಉಪಯೋಗಿಸಿದನು,

> . . . ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ *ಒಪ್ಪಿಸುವವರಾಗಿದ್ದು* ದುಷ್ಟತ್ವವನ್ನು ನಡಿಸುವ ಸಾಧನಗಳಾಗಮಾಡಬೇಡಿರಿ; ಆದರೆ ಸತ್ತವರೊಳಗಿಂದ ಜೀವಿತರಾಗಿರಲಾಗಿ ನಿಮ್ಮನ್ನು

ದೇವರಿಗೆ ಒಪ್ಪಿಸಿಕೊಟ್ಟು ನಿಮ್ಮ ಅಂಗಗಳನ್ನು [ನಿಮ್ಮ *ದೇಹದ* ಅಂಗಗಳು] ನೀತಿಕೃತ್ಯಗಳನ್ನು ನಡಿಸುವ ಸಾಧನಗಳನ್ನಾಗಿ ಆತನಿಗೆ *ಸಮರ್ಪಿಸಿರಿ* (6:13; ಒತ್ತಿ ಹೇಳಿದ್ದು ನನ್ನದು).

ಅನೇಕ ಬರಹಗಾರರು ಮತ್ತು ಅನುವಾದಕರು 12:1ರಲ್ಲಿರುವ "ದೇಹಗಳನ್ನು" ಎಂಬ ಪದವನ್ನು "ನಮ್ಮ ಪೂರ್ಣ ಜೀವಿತ" ಎಂದು ಅರ್ಥನಿರೂಪಿಸುತ್ತಾರೆ. ನಮ್ಮನ್ನೆಲ್ಲಾ ಮತ್ತು ನಮಗಿರುವದನ್ನೆಲ್ಲಾ ನಾವು ದೇವರಿಗೆ ಅರ್ಪಿಸಬೇಕು, ಆದರೆ ಪೌಲನು "ದೇಹಗಳನ್ನು" ಎಂದು ಉಪಯೋಗಿಸುವದರಲ್ಲಿ ಬಹುಶಃ ಒಂದು ಕಾರಣವನ್ನು ಹೊಂದಿರಬಹುದಾಗಿದೆ. ರೋಮಾಪುರವದರಿಗೆ ಬರೆದ ತನ್ನ ಪತ್ರಿಕೆಯುದ್ದಕ್ಕು, ಪೌಲನು ಆತ್ಮೀಕ ಕೇಡುಗಳಿಗೆ ಶಾರೀರಾಧೀನ ಸ್ವಭಾವವೇ ಪ್ರಮುಖ ಮೂಲಕಾರಣ ವಾಗಿರುತ್ತದೆ ಎಂಬುದನ್ನು ಒತ್ತಿಹೇಳುತ್ತಾನೆ. ದೇಹರ ಬಲಹೀನತೆಯ ಕಾರಣದಿಂದ, ನಾವು ಪಾಪದ ನಿಯಮಕ್ಕೆ ಸೇವೆ ಮಾಡುತ್ತೇವೆ (7:25). ನಮಗೆ ಯಾವ ಸಹಾಯವೂ ಇಲ್ಲವಾದಲ್ಲಿ, ಶಾರೀರಧೀನ ಸ್ವಭಾವದ ಕೆಳಕ್ಕೆ ಎಳೆಯುವ ಸೆಳೆತವು ನಮ್ಮನ್ನು ಸೋಲಿಸಿ ಬಿಡುವದು (7:5, 18, 23, 24). ಹೇಗೂ, 8ನೇ ಅಧ್ಯಾಯದಲ್ಲಿ ಪೌಲನು ಘೋಷಿಸಿದ್ದೇನೆಂದರೆ, ನಾನು ಪವಿತ್ರಾತ್ಮನ ಸಹಾಯದಿಂದ "ದೇಹದ ದುರಭ್ಯಾಸಗಳನ್ನು" ನಾಶ ಮಾಡಬಲ್ಲೆವು ಎಂಬದೆ (8:13). ಈ ಹಂತದಲ್ಲಿ, ಆತನು ಒಂದು ಕಾಲದಲ್ಲಿ ಅನೀತಿಗೆ ಸಾಧನವಾಗಿದ್ದ ಈ ದೇಹವು, ಈಗ "ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವಯಜ್ಞವಾಗಿ" ಅರ್ಪಿಸಲ್ಪಡಬಲ್ಲದು ಎಂದು ಹೇಳುತ್ತಾನೆ.

ಕ್ರೈಸ್ತತ್ವವು ದೇಹಕ್ಕೆ ಅದಕ್ಕೆ ಸೂಕ್ತವಾದ ಘನತೆ ಹಾಗೂ ಗೌರವವನ್ನು ಕೊಡುವ ಒಂದು ಧರ್ಮವೆಂಬದಾಗಿ ಗುರುತಿಸಲ್ಪಟ್ಟಿರುತ್ತದೆ.[10] "ಗ್ರೀಕ್. ರಿಗಾದರೋ, . . . ದೇಹವು ಒಂದು ಸೆರೆಮನೆಯಂತಿತ್ತು, ಅದು ಹೇಸಿಕೊಳ್ಳಬಹುದಾದ ಮತ್ತು ನಾಚಿಕೆಪಟ್ಟುಕೊಳ್ಳಬಹುದಾದ ಸಂಗತಿಯೆಂದು ಸಹ ಪರಿಗಣಿಸಲ್ಪಟ್ಟಿರುತ್ತದೆ."[11] ಅದಕ್ಕೆ ತದ್ವಿರುದ್ಧವಾಗಿ, ಒಬ್ಬ ಕ್ರೈಸ್ತನು ತನ್ನ ದೇಹವು "ಪವಿತ್ರಾತ್ಮನಿಗೆ ಗರ್ಭಗುಡಿ" ಆಗಿದೆಯೆಂಬುದನ್ನು ಗುರುತಿಸುತ್ತಾನೆ (1 ಕೊರಿಂಥ 6:19). ಆತನ ತನ್ನ ದೇಹದಲ್ಲಿ ದೇವರನ್ನು ಮಹಿಮೆ ಪಡಿಸಬಲ್ಲನು ಮತ್ತು ಕ್ರಿಸ್ತನನ್ನು ಘನ ಪಡಿಸಬಲ್ಲನು (1 ಕೊರಿಂಥ 6:20; ಫಿಲಿಪ್ಪಿ 1:20).

ದೇಹವನ್ನು ದೇವರಿಗೆ ಒಂದು ಯಜ್ಞವಾಗಿ ಅರ್ಪಿಸುವಂತದ್ದು ಏನನ್ನು ಒಳಗೊಂಡಿರುತ್ತದೆ? ಇಬ್ರಿಯ 13:15, 16 ವಚನಗಳು ದೇವರನ್ನು ಸ್ತುತಿಸುವದು, ಪರೋಪಕಾರ ಮಾಡುವದು ಮತ್ತು ಹಂಚಿಕೊಳ್ಳುವದರ ಬಗ್ಗೆ ಮಾತಾಡುತ್ತಾ ಇದರ ಬಗ್ಗೆ ಒಂದು ಸುಳಿವು ನೀಡುತ್ತದೆ. ಕರ್ತನಿಗೆ ಸಂತೋಷವನ್ನುಂಟು ಮಾಡುವ ಯಜ್ಞಗಳಿರುತ್ತವೆ. ನಾವು ನಮ್ಮ ದೇಹ ಸಾಮರ್ಥ್ಯಗಳನ್ನು ಮತ್ತು ಅಂಗಗಳನ್ನು ಉಪಯೋಗಿಸುವ ಮೂಲಕ ದೇವರಿಗೆ ನಮ್ಮ ದೇಹಗಳನ್ನು ಯಜ್ಞಗಳಾಗಿ ಅರ್ಪಿಸುವವರಾಗಿರುತ್ತೇವೆ. ನಮ್ಮ ದೇಹಗಳನ್ನು ಕರ್ತನಿಗೆ ಅರ್ಪಿಸುವಾಗ ಏನು ಸಂಭವಿಸುತ್ತದೆ ಎಂಬದರ ಬಗ್ಗೆ John R. W. Stott ಹೀಗೆ ಬರೆಯುತ್ತಾನೆ:

ನಮ್ಮ ಪಾದಗಳು ಆತನ ದಾರಿಯನ್ನು ಹಿಡಿಯುವವು, ನಮ್ಮ ತುಟಿಗಳು

> ಸತ್ಯವನ್ನಾಡುವವು ಮತ್ತು ಸುವಾರ್ತೆಯನ್ನು ಪ್ರಸರಿಸುವವು, ನಮ್ಮ ನಾಲಿಗೆಗಳು ಸೌಖ್ಯವನ್ನುಂಟು ಮಾಡುವವು, ನಮ್ಮ ಕೈಗಳು ಬಿದ್ದುಹೋದವರನ್ನು ಮೇಲಕ್ಕೆತ್ತುವವು, ಮತ್ತು ಅನೇಕ ದೈನಂದಿನ ಕೆಲಸಗಳನ್ನು ನಡಿಸುವವು . . . ಉದಾಹರಣೆಗೆ ಅಡುಗೆ ಮತ್ತು ಸ್ವಚ್ಛಗೊಳಿಸುವದು, ಟೈಪಿಂಗ್ ಮತ್ತು ಸರಿಪಡಿಸುವದು; ನಮ್ಮ ಬಾಹುಗಳು ಏಕಾಂಗಿಗಳನ್ನು ಮತ್ತು ಪ್ರೀತಿಪಾತ್ರರಲ್ಲದವರನ್ನು ಅಪ್ಪಿಕೊಳ್ಳುವವು; ನಮ್ಮ ನಮ್ಮ ಕಿವಿಗಳು ಸಂಕಷ್ಟದಲ್ಲಿರುವವರ ಕೂಗನ್ನು ಕೇಳಿಸಿಕೊಳ್ಳುವವು, ಮತ್ತು ನಮ್ಮ ಕಣ್ಣುಗಳು ದೀನತೆಯಿಂದಲೂ ತಾಳ್ಮೆಯಿಂದಲೂ ದೇವರ ಕಡೆಗೆ ದೃಷ್ಟಿಸುವವು.[12]

ದೇಹವನ್ನು ಅರ್ಪಿಸುವದು **ನಿಮ್ಮ ವಿವೇಕಪೂರ್ವಕವಾದ ಆರಾಧನೆಯು** ಎಂದು ಪೌಲನು ಹೇಳುತ್ತಾನೆ. ಈ ಪದಗುಚ್ಛವು ಎರಡು ದ್ವಂದ್ವಾರ್ಥದ ಪದಗಳನ್ನೊಳಗೊಂಡಿರುತ್ತದೆ. ಮೊದಲ ಪದವು "ಆತ್ಮೀಕವಾದ" ಎಂಬದರ ಅನುವಾದಿತ ಪದ: λογικός (*logikos*). *Logikos,* ಇದೊಂದು ಅಭೌತಿಕ ಪದವಾಗಿದ್ದು λόγος (*logos*, "ವಾಕ್ಯ") ಎಂಬದರಿಂದ ಬಂದದ್ದಾಗಿದೆ ಮತ್ತು ಅದು "logic" (ವಿವೇಚನೆ) ಎಂಬದರ ಮೂಲವಾಗಿರುತ್ತದೆ. W. E. Vine ಹೇಳುವದೇನೆಂದರೆ *logikos* "ತರ್ಕಿಸುವ ಅಂಗಕ್ಕೆ" ಸೇರಿದ್ದಾಗಿದೆ ಮತ್ತು "ವಿವೇಕಪೂರ್ವಕವಾದ" ಅಥವಾ "ತಾರ್ಕಿಕವಾದ" ಎಂಬ ಅರ್ಥವನ್ನು ಕೊಡುತ್ತದೆ.[13] ಬಹುಪಾಲು ಆಧುನಿಕ ತರ್ಜುಮೆಗಳು 1ನೇ ವಚನದಲ್ಲಿ "ಆತ್ಮೀಕವಾದ" ಎಂಬುದಕ್ಕೆ ಆದ್ಯತೆ ಕೊಡುತ್ತವೆ, ಆದರೆ ಗ್ರೀಕ್.ನ ಒಂದು ಬೇರೆಯಾದ ಗುಣವಾಚಕ ಪದವು ನಿರ್ದಿಷ್ಟವಾಗಿ "ಆತ್ಮೀಕವಾದ" (πνευματικός, *pneumatikos*) ಎಂಬ ಅರ್ಥವನ್ನು ಕೊಡುತ್ತದೆ. "ವಿವೇಕಪೂರ್ವಕವಾದ" ಅಥವಾ "ತಾರ್ಕಿಕತೆಯ" ಎಂಬುದು ಈ ನಿರ್ದಿಷ್ಟವಾದ ವಚನದಲ್ಲಿ *logikos* ಎಂಬುದಕ್ಕೆ ಹೆಚ್ಚು ಸಹಜವಾದ ಆಯ್ಕೆಯೆಂದು ತೋರುತ್ತದೆ.

ನಮ್ಮ ದೇಹಗಳನ್ನು ದೇವರಿಗೆ ಯಜ್ಞವಾಗಿ ಅರ್ಪಿಸುವದನ್ನು ಯಾವ ವಿಧದಲ್ಲಿ "ವಿವೇಕಪೂರ್ವಕ" ಎಂದು ಪರಿಗಣಿಸಲ್ಪಡಬಹುದು? ಆರಂಭದಲ್ಲಿ, ದೇವರು ನಮಗೆ ಮಾಡಿರುವದನ್ನೆಲ್ಲಾ ಆಲೋಚಿಸಿಕೊಳ್ಳುವಾಗ ಇದೊಂದು ವಿವೇಕಪೂರ್ವಕವಾದ ಮನವಿಯಾಗಿರುತ್ತದೆ. ಅಷ್ಟುಮಾತ್ರವಲ್ಲದೆ, ನಾವು ದೇವರ ಪ್ರೀತಿಗೆ ವಿವೇಕಪೂರ್ವಕರಾದ, ತಾರ್ಕಿಕತೆಯುಳ್ಳ ಜೀವಿಗಳಾಗಿ ಪ್ರತಿಸ್ಪಂದಿಸುತ್ತೇವೆ. ಅದು ಮಾತ್ರವಲ್ಲದೆ, ನಾವು ಈ ಯಜ್ಞವನ್ನು ಅರ್ಪಿಸಿದ ಹಾಗೆ, ನಾವು ಅದನ್ನು ಲಕ್ಷ್ಯವಿಟ್ಟು, ಅಲೋಚನೆಯುಳ್ಳ ರೀತಿಯಲ್ಲಿ ಮಾಡುತ್ತೇವೆ.

ಎರಡನೆಯ ದ್ವಂದ್ವಾರ್ಥದ ಪದವು NASBಯ ತರ್ಜುಮೆಯಲ್ಲಿರುವ "ಆರಾಧನೆಯ ಸೇವೆ": λατρεία (*latreia*). *Latreia* ಎಂಬುದು λατρεύω (*latreuō*) ಎಂಬ ಕ್ರಿಯಾಪದದ ನಾಮಪದವಾಗಿರುತ್ತದೆ.

> ಮೂಲತಃ [*latreuō*] ದ ಅರ್ಥವು *ಬಾಡಿಗೆ ಅಥವಾ ಸಂಬಳಕ್ಕೆ ಕೆಲಸಮಾಡು* ಎಂದಾಗಿತ್ತು. . . . ನಂತರ ಅದು ಸಾಮಾನ್ಯವಾದ *ಸೇವೆಮಾಡು* ಎಂಬ ಅರ್ಥವನ್ನು ಪಡೆದುಕೊಂಡಿತು. . . . ಅಂತಿಮವಾಗಿ, ಅದು ವಿಶಿಷ್ಟವಾಗಿ *ದೇವರುಗಳಿಗೆ ಮಾಡುವ ಸೇವೆ*ಯನ್ನು ಸೂಚಿಸುವದಕ್ಕೆ ಉಪಯೋಗಿಸುವ ಪದವಾಗಿ ಮಾರ್ಪಟ್ಟಿತು. ಬೈಬಲಿನಲ್ಲಿ ಅದು ಎಂದಿಗೂ ಮಾನವ ಸೇವೆ ಎಂಬ ಅರ್ಥವನ್ನು ಕೊಡುವದಿಲ್ಲ; ಅದು ಯಾವಾಗಲೂ

ದೇವರ ಸೇವೆ ಮತ್ತು ಆತನಿಗೆ ಮಾಡುವ ಆರಾಧನೆಯನ್ನು ಸೂಚಿಸಲು ಉಪಯೋಗಿಸಲ್ಪಟ್ಟಿದೆ.[14]

"ಸೇವೆ" ಮತ್ತು "ಆರಾಧನೆ" ಎರಡೂ *latreia* ಎಂಬುದನ್ನು ಅನುವಾದಿಸುವನ್ಯಾಯಯುತವಾದ ಪದಗಳಾಗಿರುತ್ತದೆ. KJV ಸೇರಿದಂತೆ, ಹಲವಾರು ತರ್ಜುಮೆಗಳು "ಸೇವೆ" ಎಂದು ಹೊಂದಿರುತ್ತವೆ. NIVಯಂತಹ ಇನ್ನು ಅನೇಕ ತರ್ಜುಮೆಗಳು, "ಆರಾಧನೆ" ಎಂಬ ಪದವನ್ನು ಹೊಂದಿರುತ್ತವೆ. ಈ ಎರಡು ಪದಗಳ ನಡುವೆ ಆಯ್ಕೆ ಮಾಡಿಕೊಳ್ಳುವದರ ಬದಲಾಗಿ, NASB ತರ್ಜುಮೆಗಾರರು "ಆರಾಧನೆಯ ಸೇವೆ" ಎಂದು ಎರಡೂ ಪದಗಳನ್ನು ಸೇರ್ಪಡೆಗೊಳಿಸಿರುತ್ತಾರೆ.[15] (ಹೆಚ್ಚಿನ ಮಾಹಿತಿಗಾಗಿ, ನೋಡಿರಿ *ಅನ್ವಯಿಸುವಿಕೆ: "ಸೇವೆಯೋ" ಅಥವಾ "ಆರಾಧನೆಯೋ"?* ಪುಟಗಳು 40-41.)

**ವಚನ 2. ಮತ್ತು** ಎಂಬ ಪ್ರತ್ಯಯವು ಈ ವಚನವನ್ನು ಹಿಂದಿನದರೊಂದಿಗೆ ಜೋಡಿಸುತ್ತದೆ. ಪೌಲನು ಕರ್ತನಿಗೆ ಸಮರ್ಪಿತರಾಗಿರುವದರ ಕುರಿತ ತನ್ನ ಚರ್ಚೆಯನ್ನು ಮುಂದುವರೆಸಲಿದ್ದನು. ಒಬ್ಬರು ಒಮ್ಮೆ ಹೀಗೆ ಕೇಳಿದರು, "ಸಜೀವಯಜ್ಞದ ವಿಷಯದಲ್ಲಿರುವ ಪ್ರಮುಖ ಸಮಸ್ಯೆಯೇನೆಂದರೆ ಅದು ಯಜ್ಞವೇದಿಯ ಮೇಲಿಂದ ತೆವಳುತ್ತಲೇ ಇರುತ್ತದೆ."[16] ಆದ್ದರಿಂದ ಪೌಲನು ಈಗಷ್ಟೆ ದೇವರಿಗೆ ಸಮರ್ಪಿತ ಜೀವನವನ್ನು ನಡಿಸಬೇಕೆಂದು ಮಾಡಿದ ಮನವಿಯನ್ನು ಮತ್ತಷ್ಟು ಒತ್ತಿಹೇಳುವದರ ಅಗತ್ಯವಿದೆಯೆಂದು ಕಂಡನು.

*ನಿಷೇಧಾರ್ಥಕ.* ಪೌಲನು ಮೊದಲು ಒಂದು ನಿಷೇಧಾರ್ಥಕವಾದ ಆಜ್ಞೆಯನ್ನು ಕೊಟ್ಟನು: **ಇಹಲೋಕದ ನಡವಳಿಕೆಯನ್ನು ಅನುಸರಿಸದೆ.** "ಅನುಸರಿಸದೆ" ಎಂಬುದು συσχηματίζω (*suschēmatizō*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ. ಈ ಧೀರ್ಘವಾದ ಪದದ ಹೃದಯಭಾಗದಲ್ಲಿ σχῆμα (*schēma*) ಎಂಬ ಪದವಿರುತ್ತದೆ, "ರೂಪ"[17] ಎಂಬುದಕ್ಕಾಇರುವ ಒಂದು ಪದ, ಇದರ ಮುಂದುಗಡೆಯಲ್ಲಿ σύν (*sun*, "ದೊಂದಿಗೆ") ಪದವಿರುತ್ತದೆ. "ಇಹಲೋಕದ" ಎಂಬುದು αἰών (*aiōn*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, ಅದು "ಯುಗ" ಎಂಬುದಕ್ಕಾಗಿರುವ ಪದವಾಗಿದೆ. *Aiōn* ಎಂಬುದು ಪ್ರಾಕೃತ ಜಗತ್ತನ್ನು (ಉದಾಹರಣೆಗೆ ಬಂಡೆಗಳು, ಮರಗಳು, ಮತ್ತು ಹೂಗಳು) ಸೂಚಿಸುವದಿಲ್ಲ, ಆದರೆ ಬೇರೊಂದು ಕಡೆಯಲ್ಲಿ ಪೌಲನು ಕರೆದಂಥ "ಈಗಿನ ದುಷ್ಟಯುಗ [*aiōn*]" ಎಂಬುದನ್ನು ಸೂಚಿಸುತ್ತದೆ (ಗಲಾತ್ಯ 1:4). ಪೌಲನ ಈ ಬುದ್ಧಿವಾದವನ್ನು ವಿವಿಧ ತರ್ಜುಮೆಗಳು ಮತ್ತು ಭಾವಾನುವಾದಗಳು ಹೇಗೆ ವ್ಯಕ್ತಪಡಿಸುತ್ತೇವೆಂಬುದಕ್ಕೆ ಈ ಕೆಳಗೆ ಕೆಲವು ಉದಾಹರಣೆಗಳಿರುತ್ತವೆ:

> ಇನ್ನು ಮೇಲೆ ನಿಮ್ಮನ್ನು ಈ ಯುಗದ ರೀತಿಯಲ್ಲಿ ಹೊಂದಿಸಿಕೊಳ್ಳದಿರಿ (NEB).
>
> ಈ ಲೋಕದ ನಡವಳಿಕೆ ಮತ್ತು ಪದ್ಧತಿಗಳನ್ನು ನಕಲು ಮಾಡದಿರಿ (NLT).
>
> ನಿಮ್ಮ ಸುತ್ತಲಿನ ಲೋಕಕ್ಕೆ ನಿಮ್ಮನ್ನು ತನ್ನ ಆಕೃತಿಯಲ್ಲಿ ಒತ್ತುವಂತೆ ಬಿಡದಿರಿ (Phillips).
>
> ನೀವು ನಿಮ್ಮ ಸಂಸ್ಕೃತಿಯಲ್ಲಿ ಯೋಚಿಸಿದೆಯೇ ಸರಿಹೊಂದುವಂತೆ ಅದರಲ್ಲಿ

ಅಷ್ಟೊಂದು ಉತ್ತಮವಾಗಿ ಹೊಂದಿಕೆಯಾಗಿ ಬಿಡಬೇಡಿರಿ (MSG).

*ಸಕಾರಾತ್ಮಕ.* ಪೌಲನು ನಿಷೇಧಾರ್ಥಕಕ್ಕೆ ನಿಂತುಬಿಡಲಿಲ್ಲ; ಆತನೊಂದು ಸಕಾರಾತ್ಮಕ ಟಿಪ್ಪಣಿಯನ್ನು ಸೇರಿಸುತ್ತಾನೆ: **ಪರಲೋಕಭಾವದವರಾಗಿರಿ.** "ಪರಲೋಕಭಾವದವರಾಗಿರಿ" ಎಂಬುದು μεταμορφόω (*metamorphoō*) ಎಂಬುದರ ಅನುವಾದವಾಗಿದೆ. ಈ ಪದದ ಜೀವಾಳವು μορφή (*morphē,* "ರೂಪ" ಎಂಬದರ ಇನ್ನೊಂದು ವಿಧ) ಪದದಿಂದ ಬಂದದ್ದಾಗಿದ್ದು, ಅದು μετά (*meta,* "ಯೊಂದಿಗೆ" ಎಂಬುದಕ್ಕಿರುವ ಇನ್ನೊಂದು ಪದ) ಎಂಬ ಪೂರ್ವಪ್ರತ್ಯಯ ಹೊಂದಿರುತ್ತದೆ. ಈ ಪದದಿಂದಲೇ ನಮಗೆ ''metamorphosis'' (ರೂಪಾಂತರಣ) ಎಂಬ ಪದವು ಬಂದಿರುತ್ತದೆ, ಅದು ಒಂದು ಬದಲಾವಣೆಯನ್ನು—ಅನೇಕ ಸಾರಿ ಒಂದು ನಾಟಕೀಯ ಬದಲಾವಣೆಯನ್ನು—ಸೂಚಿಸುತ್ತದೆ.[18] ಹೆಚ್ಚಾಗಿ ಉಪಯೋಗಿಸಲ್ಪಡುವ ಒಂದು ದೃಷ್ಟಾಂತವೆಂದರೆ ಕಂಬಳಿ ಹುಳುವು ಒಂದು ಚಿಟ್ಟೆಯಾಗಿ ರೂಪಾಂತರಣಗೊಳ್ಳುವಿಕೆ. ಅಂತಹ ಶಾರೀರಿಕವಾದ ರೂಪಾಂತರಣ ಅಷ್ಟೊಂದು ಗಮನಾರ್ಹವಾಗಿರಲಾಗಿ, ಒಬ್ಬನು ಕ್ರಿಸ್ತನ ಬಳಿಗೆ ಬರುವಾಗ ಅದಕ್ಕಿಂತಲೂ ಆಶ್ಚರ್ಯಕರವಾಗಿ ಆತ್ಮೀಕ ರೂಪಾಂತರಣ ಸಾಧ್ಯವಿರುತ್ತದೆ.

"ಪರಲೋಕಭಾವದವರಾಗಿರಿ" (ರೂಪಾಂತರಗೊಂಡವರಾಗಿರ್ರಿ) ಎಂಬುದು ಕರ್ಮಣಿ ಪ್ರಯೋಗದಲ್ಲಿದೆಯೆಂದು ಅನೇಕ ಬರಹಗಾರರು ಹೇಳುತ್ತಾರೆ. ಇದರಿಂದ ಅದು *ನಮ್ಮಿಂದ ಮಾಡಲ್ಪಟ್ಟ* ಒಂದು ಸಂಗತಿಯಿಂದಲ್ಲ, ಬದಲಾಗಿ *ನಮಗೆ ಮಾಡಲ್ಪಟ್ಟ* ಒಂದು ಸಂಗತಿಯಿಂದಾಗುವ ಬದಲಾವಣೆ ಎಂಬ ಅರ್ಥಬರುತ್ತದೆ. ಹಲವಾರು ತರ್ಜುಮೆಗಳು ಮತ್ತು ಭಾವಾನುವಾದಗಳು "ದೇವರು ನಿಮ್ಮನ್ನು ರೂಪಾಂತರಗೊಳಿಸಲಿ" ಅಥವಾ ಅದನ್ನು ಹೋಲುವಂತಹ ಮಾತುಗಳನ್ನು ಹೊಂದಿರುತ್ತವೆ (TEV; CEV; NLT; Phillips). "ನಡವಳಿಕೆಯನ್ನು ಅನುಸರಿಸದೆ" ಮತ್ತು "ಪರಲೋಕಭಾವದವರಾಗಿರಿ" (ರೂಪಾಂತರಗೊಂಡವರಾಗಿರ್ರಿ) ಎಂದು ಅನುವಾದಿಸಲ್ಪಟ್ಟಿರುವ ಗ್ರೀಕ್ ಕ್ರಿಯಾಪದಗಳು ಅದೇ ರೀತಿ ಮುಕ್ತಾಯಗೊಳ್ಳುತ್ತವೆ, ಇನ್ನು ಕೆಲವು, ಇರುವದಾದಲ್ಲಿ, "ಪರಲೋಕಭಾವದವರಾಗಿರಿ" ಎಂಬುದು ನಾವು ಮಾಡುವಂಥ ಒಂದು ಸಂಗತಿಯಲ್ಲ, ಆದರೆ ನಮಗೆ ಮಾಡಲ್ಪಡುವಂಥ ಸಂಗತಿ ಎಂಬದಾಗಿ ವ್ಯಾಖ್ಯಾನಕಾರರು ವಾದಿಸುತ್ತಾರೆ. ಎರಡೂ ಪದಗಳ ಮುಕ್ತಾಯವು ಒಂದು ಕರ್ಮಣಿ ಪ್ರಯೋಗವಾಗಿರಬಲ್ಲದು (ನಮಗೆ ಮಾಡಲ್ಪಡುವಂತದ್ದು) ಅಥವಾ ಮಧ್ಯರೂಪವಾಗಿರುತ್ತದೆ (ನಮಗೆ ಅಥವಾ ನಮಗಾಗಿ ಮಾಡಿಕೊಳ್ಳುವದು).[19] ಪೌಲನು ಈ ವಿಭಾಗವನ್ನು "ಸಹೋದರರೇ, *ನಿಮ್ಮನ್ನು* . . . ಬೇಡಿಕೊಳ್ಳುವದೇನಂದರೆ" ಎಂದು ಆರಂಭಿಸಿದನಾದ್ದರಿಂದ, *ನಾವು* ಏನು ಮಾಡತಕ್ಕದ್ದು ಎಂಬುದರ ಮೇಲೆ ಒತ್ತು ಇರುತ್ತದೆ. ಹೇಗಿದ್ದರೂ, ನಾವು ದೇವರ ಸಹಾಯವಿಲ್ಲದೆ, ಎರಡರಲ್ಲಿ ಯಾವ ಆಜ್ಞೆಗೂ—"ನಡವಳಿಕೆಯನ್ನು ಅನುಸರಿಸದೆ" ಅಥವಾ "ಪರಲೋಕಭಾವದವರಾಗಿರಿ" (ರೂಪಾಂತರಗೊಂಡವರಾಗಿರ್ರಿ)—ವಿಧೇಯರಾಗುವದಕ್ಕೆ ಸಾಧ್ಯವಾಗುವದಿಲ್ಲ. 7 ಮತ್ತು 8 ಅಧ್ಯಾಯಗಳು ಅದನ್ನು ಸ್ಪಷ್ಟಗೊಳಿಸುತ್ತವೆ. ಕರ್ತನಿಲ್ಲದೆ ನಾವು ಅಸಹಾಯಕರು.

ನಾವು ಹೇಗೆ "ಪರಲೋಕಭಾವದವರಾಗಿ" (ರೂಪಾಂತರಗೊಂಡವರಾಗಿರ್ರಿ) ಆಗಬಲ್ಲೆವು? ಅಪೊಸ್ತಲನು ಅದನ್ನು ನಮಗೆ ತಿಳಿಸುವದಕ್ಕೆ ಮುಂದುವರೆಯುತ್ತಾನೆ:

**ನೂತನಮನಸ್ಸನ್ನು ಹೊಂದಿಕೊಂಡು**. "ನೂತನಮನಸ್ಸು" ಎಂಬುದು ἀνακαίνωσις (*anakainōsis*) ಎಂಬದರಿಂದ ಬರುತ್ತದೆ, ಅದು καινός (*kainos*, "ಹೊಸ") ಮತ್ತು ἀνά (*ana*, "ಪುನಃ") ಎಂಬ ಪದಗಳ ಸಂಯೋಜನೆಯಾಗಿರುತ್ತದೆ. "ಮನಸ್ಸು" ಎಂಬುದು νοῦς (*nous*) ಎಂಬ ಪದದ ಅನುವಾದವಾಗಿದೆ, ಅದು ಒಬ್ಬನ "ಧೋರಣೆ" ಅಥವಾ "ಮನೋಭಾವ"ವನ್ನು ಸೂಚಿಸುತ್ತದೆ. ರೂಪಾಂತರವು *ಒಳಗಡೆಯಿಂದ* ಬರುವದಾಗಿದೆ. ಒಳಗಡೆಯಲ್ಲಿ ಬದಲಾಗದೆ ಹೊರಗೆ ಮಾತ್ರ ಬದಲಾಗುವದೆಂದರೆ ಕೆಸರಿನಲ್ಲಿ ಆಟವಾಡುವ ಹುಡುಗನಿಗೆ ಶುಭ್ರಬಟ್ಟೆಯನ್ನು ತೊಡಿಸಿದ ರೀತಿಯಲ್ಲಿರುತ್ತದೆ. ಹೊರಗೆ ಬದಲಾಗಬೇಕೆಂದರೆ, ನಾವು ಮೊದಲು ಒಳಗಡೆಯಲ್ಲಿ ಬದಲಾಗತಕ್ಕದ್ದು. ಒಬ್ಬನು "ತನ್ನ ಒಳಗಿನ ಯೋಚನೆಯಂತೆಯೇ ಇದ್ದಾನೆ" (ಜ್ಞಾನೋಕ್ತಿ 23:7).

ನಮ್ಮ ಮನಸ್ಸುಗಳನ್ನು ನೂತನಪಡಿಸಿಕೊಳ್ಳುವದು ನಮಗೆ ಏಕೆ ಪ್ರಾಮುಖ್ಯವಾಗಿರುತ್ತದೆ? ಪೌಲನು 2ನೇ ವಚನದ ಅಂತ್ಯದಲ್ಲಿ ಒಂದು ಕಾರಣವನ್ನು ಕೊಡುತ್ತಾನೆ: **ಹೀಗಾದರೆ ದೇವರ ಚಿತ್ತಾನುಸಾರವಾದದ್ದು**[20] **ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.** "ಉತ್ತಮವಾದದ್ದೂ" (ἀγαθός, *agathos*), "ಮೆಚ್ಚಿಕೆಯಾದದ್ದೂ" (εὐάρεστος, *euarestos*, "ಬಹು-ಸಂತೋಷಕರ"), ಮತ್ತು "ದೋಷವಿಲ್ಲದ್ದೂ" (τέλειος, *teleios*, "ಸಂಪೂರ್ಣವಾದದ್ದು, ಪರಿಪಕ್ವವಾದದ್ದು") ಎಂಬುವುಗಳೆಲ್ಲಾ ದೇವರ ಚಿತ್ತವನ್ನು ಬಣ್ಣಿಸುವದಕ್ಕೆ ತಕ್ಕದಾದ ಪದಗಳಾಗಿರುತ್ತವೆ. ಆ ವಾಕ್ಯಭಾಗದಲ್ಲಿ ನಮ್ಮ ವಿಚಾರಶಕ್ತಿಯನ್ನು ಸವಾಲುಗೊಳಿಸುವ ಪದವೆಂದರೆ "ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ" (δοκιμάζω, *dokimazō*) ಎಂಬದೆ.

*Dokimazō* ಎಂಬ ಪದವು ಒಂದು ಲೋಹದ ನೈಜತೆಯನ್ನು ಪರೀಕ್ಷಿಸುವ ಕ್ರಿಯೆಯನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಡುತ್ತಿತ್ತು. ಅದರ ಅರ್ಥವು "ಪರೀಕ್ಷೆಗೆಯೊಡ್ಡು, ಪರಿಶೀಲಿಸು" ಎಂದಾಗಲಿ ಅಥವಾ "ಪ್ರಮಾಣೀಕರಿಸು, ಅನುಮೋದಿಸು" (ಒಂದು ಯಶಸ್ವಿ ಪರೀಕ್ಷೆಯ ಫಲಿತವಾಗಿ) ಎಂದಾಗಲಿ ಆಗಿರುತ್ತದೆ.[21] NIVಯು ತನ್ನ ತರ್ಜುಮೆಯಲ್ಲಿ ಈ ಎರಡೂ ಆಲೋಚನೆಗಳನ್ನು ಸೇರ್ಪಡೆಗೊಳಿಸುತ್ತದೆ: "ಆಗ ನೀವು ದೇವರ ಚಿತ್ತ ಏನೆಂದು *ಪರೀಕ್ಷಿಸಿ ಅನುಮೋದಿಸುವದಕ್ಕೆ* ಶಕ್ತರಾಗುವಿರಿ" (ಒತ್ತಿ ಹೇಳಿದ್ದು ನನ್ನದು). ಪ್ರಶ್ನೆಯು ಏನೆಂದರೆ, ಪೌಲನು 2ನೇ ವಚನದಲ್ಲಿ *dokimazō* ಎಂಬ ಪದವನ್ನು ಉಪಯೋಗಿಸುವಾಗ ಮನಸ್ಸಿನಲ್ಲಿ ಏನನ್ನು ಹೊಂದಿದ್ದನು?

ಯಾವದೇ ಪರಿಸ್ಥಿತಿಯಲ್ಲಿ ದೇವರ ಚಿತ್ತವೇನೆಂಬುದನ್ನು *ತಿಳಿಯಲು* ನಾವು ಶಕ್ತರಾಗುವ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯುತ್ತಾನೆಂದು ಅನೇಕ ಬರಹಗಾರರು ಯೋಚಿಸುತ್ತಾರೆ. McCord ತರ್ಜುಮೆಯಲ್ಲಿ "ಹೀಗೆ ನೀವು ದೇವರ ಉತ್ತಮ ಮತ್ತು ಸ್ವೀಕಾರರ್ಹವಾದ ಮತ್ತು ಸಂಪೂರ್ಣ ಚಿತ್ತವನ್ನು ಕಂಡುಕೊಳ್ಳುವಿರಿ" ಎಂದಿರುತ್ತದೆ. JB ಯಲ್ಲಿ ಹೀಗಿರುತ್ತದೆ, "ದೇವರ ಚಿತ್ತವನ್ನು ಕಂಡುಕೊಳ್ಳುವದಕ್ಕೆ ಮತ್ತು ಯಾವದು ಉತ್ತಮ, ದೇವರು ಬಯಸುವದೇನು, ಮಾಡುವದಕ್ಕೆ ಯಾವದು ಪರಿಪೂರ್ಣವಾದ ಕಾರ್ಯ ಎಂಬುದನ್ನು ತಿಳಿಯುವದಕ್ಕೆ ಇದೊಂದೆ ದಾರಿಯಾಗಿರುತ್ತದೆ." ನಮ್ಮ ಮನಸ್ಸನ್ನು ನೂತನಪಡಿಸಿಕೊಳ್ಳುವದಕ್ಕಾಗಿ ಸಲಹೆಮಾಡಲಾಗಿರುವ ಈ ಆತ್ಮೀಕ ಅಭ್ಯಾಸಗಳು ನಮಗೆ

ಒಂದು ನಿರ್ದಿಷ್ಟವಾದ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂದು ದೇವರು ಬಯಸುತ್ತಾನೆಂಬ ವಿಷಯದಲ್ಲಿ ದೇವರ ವಾಕ್ಯದ ಜ್ಞಾನವನ್ನು ಕೊಡುವದರ ಜೊತೆಗೆ ಆತ್ಮೀಕ ವಿವೇಚನಾಶಕ್ತಿಯನ್ನು ಸಹ ಒದಗಿಸುತ್ತವೆ.

ಇನ್ನು ಕೆಲವು ಬರಹಗಾರರು "ಪರೀಕ್ಷಿಸು" ಅಥವಾ "ಪರಿಶೀಲಿಸು" ಎಂಬುದರ ಮೇಲೆ ಹೆಚ್ಚು ಒತ್ತು ಕೊಡುತ್ತಾರೆ. William Barclay ಯಲ್ಲಿ "ನಿಮ್ಮ ಸ್ವಜೀವನದಲ್ಲಿ, ದೇವರ ಚಿತ್ತವು ಉತ್ತಮವಾದದ್ದು ಮತ್ತು ಹೆಚ್ಚು-ಸಂತೋಷಕರವಾದ್ದು ಮತ್ತು ದೋಷವಿಲ್ಲದ್ದು ಎಂಬದನ್ನು ಪ್ರಮಾಣೀಕರಿಸುವಂತಾಗಲಿ."[22] ಅದನ್ನು ಸ್ವತಃ *ನಿಮಗೇ* ಪ್ರಮಾಣೀಕರಿಸಿಕೊಳ್ಳುವಿರಿ; ನೀವು "ಹೌದು, ದೇವರ ಚಿತ್ತವು ಉತ್ತಮವಾದದ್ದೆಂದು ನನಗೆ ದೃಢನಿಶ್ಚಯವುಂಟು" ಎಂದು ಹೇಳುವದಕ್ಕೆ ಶಕ್ತರಾಗುವಿರಿ. ನಂತರ, ನೀವು ನಿಮ್ಮ ಜೀವನದಲ್ಲಿ ದೇವರ ಚಿತ್ತವನ್ನು ತೋರ್ಪಡಿಸುವಾಗ, ಅದು ನಿಜಕ್ಕೂ ಉತ್ತಮವಾದದ್ದೇ ಎಂಬುದನ್ನು ನೀವು *ಬೇರೆಯವರಿಗೆ* ಸಹ ಪ್ರಮಾಣೀಕರಿಸುವಿರಿ.

## ಸಹೋದರರ ವಿಷಯದಲ್ಲಿನ ಧೋರಣೆ (12:3-13)

ದೇವರ ವಿಷಯದಲ್ಲಿ ಸಹೋದರರಿಗೆ ಇರಬೇಕಾದ ಧೋರಣೆ ಬಗ್ಗೆ ಮಾತಾಡಿದ ಬಳಿಕ, ಪೌಲನು ಅವರಲ್ಲಿ ಪರಸ್ಪರರ ವಿಷಯದಲ್ಲಿ ಇರಬೇಕಾದ ಧೋರಣೆ ವಿಷಯಕ್ಕೆ ಬದಲಾಗುತ್ತಾನೆ. ಆತನು ಅವರಲ್ಲಿ ದೀನತೆ (12:3-8) ಮತ್ತು ಸಹೋದರ ಪ್ರೀತಿಯ (12:9-13) ಅಗತ್ಯವಿದೆ ಎಂಬುದನ್ನು ಒತ್ತಿಹೇಳುತ್ತಾನ

### ದೀನತೆ (12:3-8)

**3ದೇವರು ನನಗೆ ಕೃಪೆಮಾಡಿದ ಸೇವೆಯನ್ನು ನಡಿಸಿ ನಿಮ್ಮಲ್ಲಿ ಒಬ್ಬೊಬ್ಬನಿಗೂ ಹೇಳುವದೇನಂದರೆ ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸ ಬಲವನ್ನು ಕೊಟ್ಟನೋ ಅದಕ್ಕೆ ತಕ್ಕ ಹಾಗೆ ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಿಕೊಳ್ಳಬೇಕು. 4ಯಾಕಂದರೆ ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಆ ಎಲ್ಲಾ ಅಂಗಗಳಿಗೆ ಹೇಗೆ 5ಒಂದೇ ಕೆಲಸ ಇರುವದಿಲ್ಲವೋ ಹಾಗೆಯೇ ನಾವೆಲ್ಲರು ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ. 6ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ. 7ಅದು ಸಭಾಸೇವೆಯ ರೂಪವಾಗಿದ್ದರೆ ಸಭಾಸೇವೆಯನ್ನು ಮಾಡುತ್ತಾ ಇರೋಣ. 8ಬೋಧಿಸುವವನು ಬೋಧಿಸುವದರಲ್ಲಿಯೂ ಬುದ್ಧಿಹೇಳುವವನು ಬುದ್ಧಿಹೇಳುವದರಲ್ಲಿಯೂ ನಿರತನಾಗಿರಲಿ. ದಾನಕೊಡುವವನು ಯಥಾರ್ಥಮನಸ್ಸಿನಿಂದ ಕೊಡಲಿ. ಹಿರೀತನ ನಡಿಸುವವನು ಆಸಕ್ತಿಯಿಂದ ನಡಿಸಲಿ. ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವವನು ಸಂತೋಷವಾಗಿ ಮಾಡಲಿ.**

ಅಪೊಸ್ತಲನು ತನ್ನ ವಾಚಕರಲ್ಲಿ ಆತ್ಮೀಕ ದೀನತೆಯಿರಬೇಕೆಂದು, ಒಬ್ಬನು ಯಾವ ವರವನ್ನು ಹೊಂದಿದ್ದರೂ ಅದು ದೇವರಿಂದಲೇ ಅನುಗ್ರಹಿಸಲ್ಪಟ್ಟಿರುತ್ತದೆಂಬುದನ್ನು ಅವರು

ಗುರುತಿಸಿಕೊಳ್ಳಬೇಕೆಂದು ಇಚ್ಛಿಸಿದ್ದನು. ಸಭೆಯನ್ನು ಕಟ್ಟುವದಕ್ಕೆ ಇವುಗಳೆಲ್ಲಾ ಅವಶ್ಯಕವಾಗಿದ್ದವು.

**ವಚನ 3. ನನಗೆ ಕೃಪೆಮಾಡಿದ** ಎಂಬುದು ಪೌಲನ ಅಪೊಸ್ತಲತ್ವವನ್ನು ಸೂಚಿಸುತ್ತದೆ, ಅದು ಆತನಿಗೆ ದೇವರ ಕೃಪೆಯಿಂದ ಅನುಗ್ರಹಿಸಲ್ಪಟ್ಟದ್ದಾಗಿತ್ತು (ನೋಡಿರಿ 1:5; 15:15, 16; ಗಲಾತ್ಯ 2:7-9). ತಾನು ವೈಯಕ್ತಿಕ ಅರ್ಹತೆಗಳ ಕಾರಣದಿಂದಲ್ಲ, ಆದರೆ ದೇವರ ಕೃಪಾವಂತಿಕೆಯಿಂದಲೇ ಅಪೊಸ್ತಲನಾಗಿದ್ದಾನೆಂಬುದನ್ನು ಪೌಲನು ಅರ್ಥಮಾಡಿಕೊಂಡಿದ್ದನು.

ಕೃಪೆಯಿಂದ ಅಪೊಸ್ತಲನಾಗಿ, ಪೌಲನು ಪ್ರತಿಯೊಬ್ಬ ವಾಚಕನನ್ನು **ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ . . . ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಿಕೊಳ್ಳಬೇಕು** ಎಂದು ಬೇಡಿಕೊಳ್ಳುತ್ತಾನೆ. ಪೌಲನು ಇಲ್ಲಿ ಶಬ್ದಾಡಂಬರವನ್ನು ಉಪಯೋಗಿಸುತ್ತಾನೆ, ಅದು ಆಂಗ್ಲದಲ್ಲಿ ಅಷ್ಟು ಸ್ಪಷ್ಟವಾಗಿರುವದಿಲ್ಲ. "ಭಾವಿಸಿಕೊಳ್ಳದೆ" (φρονέω, *phroneō*) ಎಂಬುದಕ್ಕಾಗಿರುವ ಪದದ ವಿಧಗಳು ಈಗಷ್ಟೇ ಉಲ್ಲೇಖಿಸಿದ ವಿಭಾಗದಲ್ಲಿ ನಾಲ್ಕು ಸಾರಿ ಕಾಣಿಸಿಕೊಳ್ಳುತ್ತವೆ. *Phroneō* ಎಂಬುದು ಎರಡು ಸಾರಿ ಉಪಯೋಗಿಸಲ್ಪಟ್ಟಿದೆ. ಅದರ ಜೊತೆಯಲ್ಲಿ, ಪೌಲನು ὑπερφρονέω (*huperphroneō*) ಎಂಬ ಪದವನ್ನು ಉಪಯೋಗಿಸಿದನು, ಅದು ὑπέρ (*huper*, "ಮೇಲ್ಗಡೆ" ಅಥವಾ "ಮೇಲೆ") ಎಂಬುದನ್ನು ಆ ಪದಕ್ಕೆ ಜೋಡಿಸುತ್ತದೆ; ಅದು "ತನ್ನ ಬಗ್ಗೆ ಅಧಿಕ ಉನ್ನತವಾಗಿ ಯೋಚಿಸಿಕೊಳ್ಳುವದು" ಎಂಬ ಅರ್ಥವನ್ನು ಕೊಡುತ್ತದೆ. ಅಂತಿಮವಾಗಿ, ಆತನು σωφρονέω (*sōphroneō*) ಎಂಬ ಪದವನ್ನು ಉಪಯೋಗಿಸಿದನು, ಅದು σῶς (*sōs*, "ಸ್ವಸ್ಥ") ಎಂಬುದನ್ನು ಪದದ ಆರಂಭದಲ್ಲಿ ಸೇರಿಸುತ್ತದೆ; ಅದು "ಸ್ವಸ್ಥ ತೀರ್ಪು ಹೊಂದಿರುವದು," "ಸ್ವಸ್ಥ [ಆರೋಗ್ಯಕರ] ಮನಸ್ಸು" ಹೊಂದಿರುವದು ಎಂಬ ಅರ್ಥವನ್ನು ಕೊಡುತ್ತದೆ.[23] ವಾಕ್ಯಭಾಗದ ಈ ವಿಭಾಗವನ್ನು ಹೀಗೆ ಅನುವಾದಿಸಬಹುದಾಗಿದೆ, "ಉನ್ನತವಾಗಿ [ನಿಮ್ಮನ್ನು ಕುರಿತಾಗಿ] ಆಲೋಚನೆಗಳನ್ನು ಮಾಡಬೇಡಿರಿ, ಆದರೆ ಆರೋಗ್ಯಕರವಾದ [ನಿಮ್ಮಕುರಿತಾಗಿ] ಆಲೋಚನೆಗಳನ್ನು ಮಾಡಿಕೊಳ್ಳಿರಿ." CJB ಯಲ್ಲಿ ಹೀಗಿರುತ್ತದೆ, "ನಾನು ನಿಮಗೆ ಹೇಳುತ್ತೇನೆ . . . ನಿಮ್ಮ ಸ್ವಂತ ಪ್ರಾಮುಖ್ಯತೆಯ ಕುರಿತು ಉತ್ಪ್ರೇಕ್ಷೆಯ ಆಲೋಚನೆಗಳನ್ನು ಮಾಡಿಕೊಳ್ಳಬೇಡಿರಿ. ಬದಲಾಗಿ, ನಿಮ್ಮ ಕುರಿತಾಗಿ ಸಂಯಮದ ಅಭಿಪ್ರಾಯವನ್ನು ಇಟ್ಟುಕೊಳ್ಳಿರಿ."

ದೇವರು ನಮ್ಮನ್ನು ಯಶಸ್ಸು ನೀಡಿ ಆಶೀರ್ವದಿಸುವದಾದರೆ, ನಾವು ಗರ್ವದಿಂದ ತುಂಬಿಕೊಳ್ಳುವ ಅಪಾಯವನ್ನು ಎದುರಿಸುತ್ತೇವೆ. ನಾವು ನಮ್ಮ ವರಗಳನ್ನು ಉಪಯೋಗಿಸುವದರಲ್ಲಿ ಮಿಕ್ಕವರಿಗಿಂತ "ಹೆಚ್ಚು ಶ್ರದ್ಧೆಯಿಂದ" ಇದ್ದೇವೆಂಬ ವಿಚಾರದಲ್ಲಿ ಸಹ ಗರ್ವದಿಂದ ತುಂಬಿರಬಹುದಾಗಿದೆ. ನಮ್ಮನ್ನ ಕುರಿತು ಯೋಗ್ಯತೆಗೆ ಮೀರಿ ಉನ್ನತವಾಗಿ ಯೋಚಿಸಿಕೊಳ್ಳದಂತೆ ಇರುವ ಹಾಗೆ ಸಹಾಯ ಮಾಡುವದಕ್ಕೆ ನಮಗೆ ಯಾವ ದೈವಿಕ ಸುರಕ್ಷತೆಯ ಅಗತ್ಯವಿರುತ್ತದೆ? **ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸಬಲವನ್ನು ಕೊಟ್ಟನೋ** ಅದರಂತೆ ಇರುತ್ತದೆಂಬುದನ್ನು ನಾವು ಅರ್ಥಮಾಡಿಕೊಳ್ಳುವ ಅಗತ್ಯವಿರುತ್ತದೆ. ಕರ್ತನೇ ಮಹಿಮೆಗೆ ಯೋಗ್ಯನು; ನಾವು ಯೋಗ್ಯರಲ್ಲ.

"ಎಂಥೆಂಥ ವಿಶ್ವಾಸಬಲವನ್ನು" ಎಂಬ ಪದವು ಒಂದು ರೀತಿ ಅಸ್ಪಷ್ಟವಾಗಿರುತ್ತದೆ. "ಎಂಥೆಂಥ" ಎಂಬುದು μέτρον (*metron*) ಎಂಬದರಿಂದ ಬಂದಿರುತ್ತದೆ, ಅದು "ಒಂದು ಅಳತೆಮಾಡುವ ಸಾಧನ"ವನ್ನು ಅಥವಾ "ಅಳತೆಮಾಡಿರುವ ಒಂದು ಪಾಲ"ನ್ನು ಸೂಚಿಸಬಹುದಾಗಿದೆ.[24] ಪೌಲನು ಮನಸ್ಸಿನಲ್ಲಿ ಮೊದಲನೆಯ ಅರ್ಥನಿರೂಪಣೆಯನ್ನು, ಒಂದು ಮಾನದಂಡವನ್ನು ಹೊಂದಿದ್ದನೆಂದು ಕೆಲವರು ಯೋಚಿಸುತ್ತಾರೆ. ದೇವರು ನಮಗೊಂದು ನಂಬಿಕೆಯ ಮಾನದಂಡವನ್ನು ಕೊಟ್ಟಿರುತ್ತಾನೆ, ಅದರಿಂದ ನಾವು ನಮ್ಮನ್ನು ಅಳೆಯತಕ್ಕದ್ದು. ನಾವು ಅಳತೆಯ ಸಾಧನವನ್ನು ಉಪಯೋಗಿಸುವಾಗ, ನಾವು ನಮ್ಮ ವಿಷಯದಲ್ಲಿ ಪ್ರಾಮಾಣಿಕರಾಗಿರುವದಾದಲ್ಲಿ, ನಾವೆಷ್ಟರ ಮಟ್ಟಿಗೆ ಕೊರತೆಯಾಗಿದ್ದೇವೆಂಬುದನ್ನು ಅರಿತುಕೊಳ್ಳುವೆವು. ಆಗ ಗರ್ವವು ಪರಾಭವಗೊಳಿಸಲ್ಪಡುವದು. ಹೇಗೂ, ಎರಡನೆಯ ಅರ್ಥನಿರೂಪಣೆಯು–ಒಂದು ಪಾಲು–ಸನ್ನಿವೇಶದೊಂದಿಗೆ ಉತ್ತಮವಾಗಿ ಹೊಂದಿಕೊಳ್ಳುತ್ತದೆ ಎಂದು ಬಹುತೇಕರು ನಂಬುತ್ತಾರೆ. ದೇವರು ಪ್ರತಿಯೊಬ್ಬ ಕ್ರೈಸ್ತನಿಗೆ ತನ್ನ ಆಶೀರ್ವಾದಗಳಲ್ಲಿ ಇಂಥಿಷ್ಟು ಪಾಲು ಎಂದು ಕೊಟ್ಟಿರುತ್ತಾನೆ. ಇದು 6ನೇ ವಚನಕ್ಕೆ ತಕ್ಕದಾಗಿ ಸರಿಹೊಂದುವದು: "ದೇವರು ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊದಿದ್ದೇವೆ."

ನಂತರ "ವಿಶ್ವಾಸ" (πίστις, *pistis*) ಎಂಬ ಪದವಿದೆ. ಈ ಪದವು ಪತ್ರಿಕೆಯಲ್ಲಿ ಪ್ರಧಾನವಾಗಿರುತ್ತದೆ, ಆದರೆ ಇಲ್ಲಿ ಒಂದು ರೀತಿಯಲ್ಲಿ ವ್ಯತ್ಯಾಸವಾಗಿ ಉಪಯೋಗಿಸಲ್ಪಟ್ಟಿರುವಂತೆ ಕಾಣುತ್ತದೆ. ಈ ವಾಕ್ಯಭಾಗದಲ್ಲಿ "ವಿಶ್ವಾಸ" ಎಂಬುದು ನಾವು ಸುವಾರ್ತೆಗೆ ನೀಡುವ ನಮ್ಮ ವೈಯಕ್ತಿವಾದ ಪ್ರತಿಸ್ಪಂದನೆಯ ರೀತಿಯಂತಿರುವದಿಲ್ಲ (1:16, 17; 10:17), ಅದು ದೇವರ ಕೃಪೆಯ ವ್ಯಕ್ತಪಡಿಸುವಿಕೆಯಂತಿರುತ್ತದೆ. ದೇವರ ವರಗಳು ವಿಶ್ವಾಸದಿಂದ ಉಪಯೋಗಿಸಲ್ಪಡುತ್ತವಾದ್ದರಿಂದ, 3ನೇ ವಚನದಲ್ಲಿನ "ವಿಶ್ವಾಸ" ಎಂಬುದು ನಮ್ಮ ವರಗಳನ್ನು ಚಲಾಯಿಸುವದಕ್ಕೆ ನಮಗೆ ಅಗತ್ಯವಾಗಿರು*ವದನ್ನೆಲ್ಲಾ* (ವಾಕ್ಯವೂ ಸೇರಿದಂತೆ) ದೇವರು ಒದಗಿಸುವದನ್ನು ಸೂಚಿಸುತ್ತದೆಂಬದಾಗಿ ನಾವು ಯೋ ಚಿಸಿಕೊಳ್ಳಬಹುದು. ಅದೇ ರೀತಿಯಲ್ಲಿ, ಪೇತ್ರನು ಆತ್ಮೀಕ ವರಗಳ ಪಟ್ಟಿಯನ್ನು ನೀಡುವಾಗ, ಆತನು ಹೀಗೆ ಹೇಳುತ್ತಾನೆ, "ಒಬ್ಬನು ಸಭೆಯ ಸೇವೆ ಮಾಡುವವನಾದರೆ *ದೇವರಿಂದ ಶಕ್ತಿಯನ್ನು ಹೊಂದಿದವನಾಗಿ* ಮಾಡಲಿ" (1 ಪೇತ್ರ 4:11; ಒತ್ತಿ ಹೇಳಿದ್ದು ನನ್ನದು).

ನಾವು "ಎಂಥೆಂಥ ವಿಶ್ವಾಸ ಬಲ" ಎಂಬ ಪದಗುಚ್ಛದ ಅರ್ಥದ ವಿಷಯದಲ್ಲಿ ಅಧಿಕವಾಗಿ ಒದ್ದಾಡಕೂಡದು. ಪೌಲನ ಅದನ್ನು ಹೇಳಿದ ತಾತ್ಪಾರ್ಯವು ಏನೇ ಆಗಿದ್ದರೂ, ಆತನು ಹೇಳಬಯಸಿದ್ದೇನೆಂದರೆ *ದೇವರೇ* ಅದನ್ನು ನಮಗೆ ಇಂಥಿಷ್ಟು ಎಂದು ಕೊಡುತ್ತಾನೆ, ಆದ್ದರಿಂದ ವೈಯಕ್ತಿಕ ಗರ್ವಕ್ಕೆ ಅಲ್ಲಿ ಅವಕಾಶವೇ ಇಲ್ಲ ಎಂಬುದೆ. ಬಹುಶಃ ದೇವರ ರಾಜ್ಯಕ್ಕಾಗಿ ಪೌಲನಿಗಿಂತಲೂ ಅಧಿಕವಾದ ಸಾಧನೆಗಳನ್ನು ಮಾಡಿರುವವವರ ಮತ್ತೊಬ್ಬರಿರುವದಿಲ್ಲವೆನೋ; ಆದರೆ ಆತನು ಹೀಗೆ ಹೇಳಿದನು, "ಆದರೆ ನಾನು ಎಂಥವನಾಗಿದ್ದೇನೋ ದೇವರ ಕೃಪೆಯಿಂದಲೇ ಅಂಥವನಾಗಿದ್ದೇನೆ" (1 ಕೊರಿಂಥ 15:10).

3ನೇ ವಚನದಲ್ಲಿ ಪೌಲನ ನಿರ್ದಿಷ್ಟವಾದ ಕಳಕಳಿಯು ಕ್ರೈಸ್ತರು ತಮ್ಮನ್ನು ಯೋಗ್ಯತೆಗಿಂತಲೂ ಅಧಿಕವಾಗಿ ಭಾವಿಸಿಕೊಳ್ಳುತ್ತಿದ್ದದ್ದೇ ಆಗಿತ್ತು. ಹೇಗೂ, "ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು [ತನ್ನ ಬಗ್ಗೆ] ಭಾವಿಸಿಕೊಳ್ಳಲಿ" ಎಂಬ ಬುದ್ಧಿವಾದವು ಅದಕ್ಕೆ

ವಿರುದ್ಧವಾದ ಅತಿರೇಕವನ್ನು ಖಂಡಿಸುತ್ತದೆ: ಒಬ್ಬ ಕ್ರೈಸ್ತನು ತನ್ನ *ಬಹಳ ಕೀಳಾದ* ಅಭಿಪ್ರಾಯ ಹೊಂದಿರುವದು. ಯಾವ ಸದಸ್ಯನು ಸಹ ತನ್ನನ್ನು ಬೇರೆಯವರಿಗಿಂತ ಉತ್ತಮನೆಂದು ಭಾವಿಸಿಕೊಳ್ಳಕೂಡದು, ಆದರೆ ಯಾವ ಕ್ರೈಸ್ತನೇ ಆಗಲಿ ತನ್ನನ್ನು ಯೋಗ್ಯವಲ್ಲದವನೆಂದು ಸಹ ಭಾವಿಸಿಕೊಳ್ಳಕೂಡದು. ಪೌಲನು "ದೇವರು *ಒಬ್ಬೊಬ್ಬನಿಗೆ* ಎಂಥೆಂಥ ವಿಶ್ವಾಸಬಲವನ್ನು ಕೊಟ್ಟನೋ" ಎಂಬದಾಗಿ ಹೇಳುತ್ತಾನೆ. ಕರ್ತನು ಯಾರೊಬ್ಬರನ್ನೂ ಹೊರಗಿಡಲಿಲ್ಲ; ಆತನು ತನ್ನ *ಎಲ್ಲಾ* ಮಕ್ಕಳಿಗೆ ವರಗಳನ್ನು ಕೊಟ್ಟಿರುತ್ತಾನೆ. ನಾವು ಅಸಭ್ಯವಾದ ಗರ್ವದ ಬಗ್ಗೆ ಜಾಗ್ರತೆಯುಳ್ಳವರಾಗಿರಬೇಕು, ಆದರೆ ದೇವರು ನಮಗೆ ಅನುಗ್ರಹಿಸಿರುವ ವರಗಳನ್ನು ಉಪಯೋಗಿಸುವದಕ್ಕೆ ಅಡ್ಡಿಯಾಗುವ ಮಿಥ್ಯ ದೀನತೆಯಿಂದ ಸಹ ನಾವು ದೂರವಿರತಕ್ಕದ್ದು.

**ವಚನಗಳು 4, 5.** ಪೌಲನು ತನ್ನ ಬುದ್ಧಿವಾದಗಳ ಬಳಿಕ ತಾನು ಆಗಾಗ್ಗೆ ಉಪಯೋಗಿಸುವ ಒಂದು ದೃಷ್ಟಾಂತವನ್ನು ನೀಡುತ್ತಾನೆ, ಸಭೆಯನ್ನು ಒಂದು ಮಾನವ ದೇಹಕ್ಕೆ ಹೋಲಿಸುತ್ತಾನೆ. **ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ** ಎಂದು ಹೇಳುತ್ತಾನೆ (ನೋಡಿರಿ 1 ಕೊರಿಂಥ 12:14, 20). ಅಂಥ "ಅಂಗಗಳಲ್ಲಿ" ಕೈಗಳು, ಕಾಲುಗಳು, ಕಣ್ಣುಗಳು, ಕಿವಿಗಳು, ಮತ್ತು ದೇಹದ ಇತರೆ ಭಾಗಗಳು (1 ಕೊರಿಂಥ 12:15-19, 21-26). ಮಾನವ ದೇಹಕ್ಕೆ ಬಹಳಷ್ಟು ಅಂಗಗಳಿದ್ದಾಗ್ಯೂ, **ಎಲ್ಲಾ ಅಂಗಗಳಿಗೆ ಹೇಗೆ ಒಂದೇ ಕೆಲಸವಿರುವದಿಲ್ಲ**. ಬದಲಾಗಿ, ಅವುಗಳು ದೇಹಕ್ಕೆ ಅತ್ಯಂಥ ಒಳಿತನ್ನು ಮಾಡುವಂತಹ ವಿಶೇಷಜ್ಞತೆಯ ಪಾತ್ರಗಳನ್ನು ಹೊಂದಿರುತ್ತವೆ. ಅದೇ ರೀತಿಯಲ್ಲಿಯೇ, **ನಾವೆಲ್ಲರು ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ.** ಇಲ್ಲಿ ಬಣ್ಣನೆಯು ಸಭೆಯಾಗಿರುವ ಆತ್ಮೀಕ ದೇಹದಲ್ಲಿ ಅಂಗಗಳಾಗಿರುವಂಥ ಕ್ರೈಸ್ತರ ಕುರಿತಾಗಿರುತ್ತದೆ (ಎಫೆಸ 1:22, 23; ಕೊಲೊಸ್ಸೆ 1:18, 24). ಪ್ರತಿಯೊಂದು ಅಂಗವು ಪರಸ್ಪರ ಅಂತರ ಸಂಬಂಧ ಹೊಂದಿರುತ್ತವೆ ಮತ್ತು ಆತ್ಮೀಕ ದೇಹದಲ್ಲಿ ಒಂದು ಜೀವಧಾರಕವಾದ ಕ್ರಿಯೆಯನ್ನು ಮಾಡುತ್ತದೆ (1 ಕೊರಿಂಥ 12:27).

**ವಚನಗಳು 6-8.** ಪೌಲನು ತನ್ನ ವಾಚಕರಿಗೆ ದೇವರು ತಮಗೆ ನೀಡಿದ ವರಗಳನ್ನು ಉಪಯೋಗಿಸಬೇಕೆಂದು ಬುದ್ಧಿವಾದ ಹೇಳುತ್ತಾನೆ: **ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ.** NASB ಅನುವಾದಕರು "ಅದರ ಪ್ರಕಾರವಾಗಿ ನಾವೊಬ್ಬೊಬ್ಬರು ಅವುಗಳನ್ನು ಉಪಯೋಗಿಸಬೇಕು" ಎಂಬದನ್ನು ಸೇರ್ಪಡೆಗೊಳಿಸಿರುತ್ತಾರೆ. ಅದರು ಏಕೆ ಆ ಉದ್ದವಾದ ಪದಗುಚ್ಛವನ್ನು ಸೇರ್ಪ ಡೆಗೊಳಿಸಿದರು? ಯಾಕೆಂದರೆ ನಮ್ಮ ವರಗಳನ್ನು ಉಪಯೋಗಿಸುವ ಅಗತ್ಯತೆಯು ಇಡೀ ವಾಕ್ಯಭಾಗದ ಒಳಗೆ ವ್ಯಾಪಿಸಿರುತ್ತದೆ (12:3, 6), ಅವುಗಳನ್ನು ನಾವು ಅವುಗಳನ್ನು ಉಪಯೋಗಿ ಸುತ್ತೇವೋ ಇಲ್ಲವೋ ಎಂಬುದು ಮನೆವಾರ್ತೆಗಾರಿಕೆಯ ವಿಚಾರವಾಗಿರುತ್ತದೆ.

ಪೌಲನು ಏಳು ವರಗಳ ವಿವರಣಾಪಟ್ಟಿಯನ್ನು ನೀಡುತ್ತಾನೆ: ಪ್ರವಾದಿಸುವದು, ಸೇವೆಮಾಡುವದು, ಬೋಧಿಸುವದು, ಬುದ್ಧಿಹೇಳುವದು, ದಾನಕೊಡುವದು, ಹಿರೀತನ ನಡಿಸುವದು, ಮತ್ತು ಉಪಕಾರ ಮಾಡುವದು. ಬೈಬಲಿನ ಬಹುತೇಕ ಪಟ್ಟಿಗಳ ಹಾಗೆಯೇ, ಇದು ಸಮಗ್ರವಾದದ್ದಲ್ಲ. "ಅಸಾಧಾರಣ" (ಅದ್ಭುತಕರವಾದ) ಮತ್ತು "ಸಾಧಾರಣ" (ಅದ್ಭುತಕರವಲ್ಲದ) ಎರಡೂ ವರಗಳ ಪಟ್ಟಿಗಳು 1 ಕೊರಿಂಥ 12:8-10, 28; ಎಫೆಸ 4:11;

ಮತ್ತು 1 ಪೇತ್ರ 4:11ರಲ್ಲಿ ಸಿಕ್ಕುತ್ತವೆ.

ನಾವು 12:6-8ರಲ್ಲಿನ ಏಳು ವರಗಳ ಬಗ್ಗೆ ಚರ್ಚಿಸುವ ಮುನ್ನ, ನಾವು ವರಗಳ ಸ್ವಭಾವದ ಕುರಿತು ಆಲೋಚಿಸತಕ್ಕದ್ದು. ಮೊದಲನೆಯದು (ಪ್ರವಾದಿಸುವದು) ಒಂದು "ಅಸಾಧಾರಣ"ವಾದ (ಅದ್ಭುತಕರವಾದ) ವರವಾಗಿದೆ. ಬಹುಶಃ ಮಿಕ್ಕವುಗಳು "ಸಾಧಾರಣ" (ಅದ್ಭುತಕರವಲ್ಲದ) ವರ್ಗಕ್ಕೆ ಸೇರುತ್ತವೆ.[25] ಮೊದಲ ಶತಮಾನದ ಬರಹಗಾರರು ಸಾಮಾನ್ಯವಾಗಿ ಅದ್ಭುತಕರವಾದ ವರಗಳು ಹಾಗೂ ಅದ್ಭುತಕರವಲ್ಲದ ವರಗಳ ನಡುವೆ ಒಂದು ತೀಕ್ಷ್ಣವಾದ ವ್ಯತ್ಯಾಸವನ್ನು ಮಾಡಲಿಲ್ಲ, ಏಕೆಂದರೆ ಅವುಗಳೆಲ್ಲಾ ದೇವರಿಂದ ಬಂದವುಗಳಾಗಿದ್ದವಷ್ಟೆ. ದೇವರು ಬಹುಶಃ ಆಯಾ ಕ್ಷೇತ್ರಗಳಲ್ಲಿ ಸ್ವಾಭಾವಿಕವಾದ ಸಹಜ ಒಲವು ಹೊಂದಿದ್ದ ಜನರಿಗೆ ಅದ್ಭುತಕರವಾದ ವರಗಳನ್ನು ಕೊಟ್ಟನೆಂದು Bell ಅಭಿಪ್ರಾಯ ಪಡುತ್ತಾನೆ. ನಂತರ, ಒಮ್ಮೆ ಅವರು ಸಂಪೂರ್ಣ ವಾಕ್ಯವನ್ನು ಪಡೆದುಕೊಂಡರೆಂದರೆ, ಅದ್ಭುತಗಳಿಲ್ಲದೆಯೇ ಸಭೆಯ ಕೆಲಸವನ್ನು ನಡಿಸಿಕೊಂಡು ಹೋಗಬಹುದಾಗಿತ್ತು.[26] ನಾವು ಅದ್ಭುತಗಳ ಯುಗದಲ್ಲಿ ಜೀವಿಸುವವರಾಗಿರುವದಿಲ್ಲ, ಆದರೆ ಆಗಲೂ ನಾವು ನಮ್ಮ ಅದ್ಭುತಕರವಲ್ಲದ ವರಗಳು ಸಹ ಮೇಲಣಿಂದ ಬಂದವುಗಳೆಂಬುದನ್ನು ಗುರುತಿಸಿಕೊಳ್ಳುತ್ತೇವೆ (ಯಾಕೋಬ 1:17). ಈಗ ನಾವು ಏಳು ವರಗಳ ಕುರಿತು ಕ್ಲುಪ್ತವಾಗಿ ಕಲಿಯೋಣ:

1. ಪ್ರವಾದಿಸುವ ವರ. "ಪ್ರವಾದಿ" (προφήτης, *prophētēs*) ಎಂಬ ಪದದ ಅರ್ಥವು "ಮತ್ತೊಬ್ಬನಿಗೋಸ್ಕರ ಒಬ್ಬ ವಕ್ತಾರನು" ಎಂದಾಗಿರುತ್ತದೆ. ಅದು φημί (*phēmi*, "ಹೇಳುವದು") ಮತ್ತು πρό (*pro*, "ಮುಂದೆ") ಎಂಬ ಪದಗಳನ್ನೊಳಗೊಂಡಿದೆ.[27] ಹೊಸ ಒಡಂಬಡಿಕೆಯ ಕಾಲದಲ್ಲಿ, ಪ್ರವಾದಿಗಳು ದೇವರಿಗೋಸ್ಕರ ಪ್ರೇರಿತರಾದ ವಕ್ತಾರರಾಗಿರುತ್ತಿದ್ದರು (ಅಪೊಸ್ತಲರ ಕೃತ್ಯಗಳು 11:27; 13:1; 15:32; 1 ಕೊರಿಂಥ 12:28; ಎಫೆಸ 2:20; 3:5; 4:11). ಅವರ ಸಂದೇಶವು **ಪ್ರವಾದನೆ** (προφητεία, *prophēteia*) ಎಂದು ಕರೆಯಲ್ಪಡುತ್ತಿತ್ತು. ಇಂದು ನಮಗೆ ಪ್ರೇರಿತರಾದ ಪ್ರವಾದಿಗಳಿರುವದಿಲ್ಲ, ಆದರೆ ದೇವರು ಅವರ ಸಂದೇಶಗಳ ಸಾರಭೂತ ಭಾಗವನ್ನು ಹೊಸ ಒಡಂಬಡಿಕೆಯಲ್ಲಿ ಸಂರಕ್ಷಿಸಿಟ್ಟಿದ್ದಾನೆ.

ಪ್ರವಾದಿಸುವವನು ತನ್ನ **ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ** ಹೇಳಬೇಕಾಗಿತ್ತು. "ತಕ್ಕ ಹಾಗೆ" ಎಂಬುದು ἀναλογία (*analogia*) ಎಂಬ ಪದದ ಅನುವಾದವಾಗಿದೆ, ಆ ಪದದಿಂದಲೇ ನಮಗೆ "analogy" ಎಂಬ ಪದ ಬಂದಿರುತ್ತದೆ. *Analogia* ಎಂದರೆ "ವಿಶ್ಲೇಷಣೆ, ಅನುಪಾತ, ಪಾಲು" ಎಂದರ್ಥವಾಗಿರುತ್ತದೆ.[28] "ವಿಶ್ವಾಸ ವರಕ್ಕೆ" (ಅಕ್ಷರಶಃ, "ವಿಶ್ವಾಸ") ಎಂಬುದು 3ನೇ ವಚನಕ್ಕೆ ಒಂದು ಸಂಬಂಧಿತ ಉಲ್ಲೇಖವಾಗಿರುವ ಸಂಭಾವ್ಯವಿದೆ: ದೇವರು ಪ್ರತಿಯೊಬ್ಬ ಕ್ರೈಸ್ತನಿಗೆ "ಎಂಥೆಂಥ ವಿಶ್ವಾಸ ಬಲ"ವನ್ನು ಕೊಟ್ಟಿದ್ದಾನೋ ಅದನ್ನು ಸೂಚಿಸುತ್ತದೆ. "ಇದು ದೇವರು ಏನನ್ನು ಕೊಟ್ಟಿದ್ದಾನೋ ಅದನ್ನು ದಾಟಿಕೊಂಡು ಹೋಗುವದರ ವಿರುದ್ಧ ಒಂದು ಎಚ್ಚರಿಕೆ" ಆಗಿರುತ್ತದೆಂದು W. E. Vine ಬರೆಯುತ್ತಾನೆ.[29] ಒಬ್ಬ ಪ್ರವಾದಿಯು ತನಗೆ ದೇವರು ಕೊಟ್ಟಿರುವ ಸಂದೇಶವನ್ನು ಮಾತ್ರವೇ ಮಾತಾಡಬೇಕಿತ್ತು. ಪೇತ್ರನು ಹೀಗೆ ಹೇಳಿದನು, "ಒಬ್ಬನು ಬೋಧಿಸುವವನಾದರೆ ದೈವೋಕ್ತಿಗಳನ್ನು ನುಡಿಯುವವನಾಗಿ ಬೋಧಿಸಲಿ" (1 ಪೇತ್ರ 4:11).

Stott ನಿಂದ ಇನ್ನೊಂದು ಆಯ್ಕೆಯು ಸಲಹೆ ಮಾಡಲ್ಪಟ್ಟಿರುತ್ತದೆ, ಆತನು ಹೇಳಿದ್ದೇನೆಂದರೆ, "ನಾವು ಪದಗುಚ್ಛವನ್ನು 'ವಿಶ್ವಾಸದೊಂದಿಗೆ ಒಮ್ಮತದಲ್ಲಿರುವದಾಗಿ' ಎಂದು ಅನುವಾದಿಸಬೇಕು. ಅಂದರೆ, 'ಪ್ರವಾದಿಯು ತನ್ನ ಸಂದೇಶ ಯಾವ ರೀತಿಯಲ್ಲೂ ಕ್ರೈಸ್ತ ವಿಶ್ವಾಸಕ್ಕೆ ವಿರುದ್ಧವಾಗಿರದಂತೆ ಜಾಗ್ರತೆ ವಹಿಸಬೇಕು'."[30]

2. ಸಭಾಸೇವೆಯ ವರ. ಪೌಲನ ಮುಂದಿನ ಪದ, διακονία (*diakonia*), ಅದರರ್ಥವು **ಊಳಿಗ** ಅಥವಾ "ಸೇವೆ" ಎಂಬುದು. ಅದಕ್ಕೆ ಸಂಬಂಧಿತ ಪದಗಳಲ್ಲಿ διάκονος (*diakonos,* "ಆಳು" ಅಥವಾ "ಸೇವಕ") ಮತ್ತು διακονέω (*diakoneō*, "ಊಳಿಗ ಮಾಡು" ಅಥವಾ "ಸೇವೆ ಮಾಡು") ಎಂಬ ಪದಗಳು ಸೇರಿರುತ್ತವೆ. ಈ ಪದಗಳು ಕೆಲವು ಸಾರಿ ಸಭಾ ಸೇವಕರಂತಹ, ಸಭೆಯಲ್ಲಿ ಮಾಡಲ್ಪಡುವ ವಿಶೇಷ ಸೇವೆಯನ್ನು ಸೂಚಿಸುತ್ತವೆ (1 ತಿಮೊಥೆ 3:10, 13) ಅಥವಾ ಸುವಾರ್ತಿಕರನ್ನು ಸೂಚಿಸುತ್ತವೆ (1 ತಿಮೊಥೆ 4:6; 2 ತಿಮೊಥೆ 4:5). ಹೇಗೂ, ಬಹಳಷ್ಟು ಸಮಯಗಳಲ್ಲಿ, ಆ ಪದಗಳು ಮತ್ತೊಬ್ಬರಿಗೆ ಮಾಡುವ ಯಾವದೇ ಸೇವೆಯನ್ನು ಸೂಚಿಸುತ್ತವೆ (ಅಪೊಸ್ತಲರ ಕೃತ್ಯಗಳು 19:22; ರೋಮಾ 15:25; 2 ತಿಮೊಥೆ 1:18; ಫಿಲೆಮೋನ 13; ಇಬ್ರಿಯ 6:10). 1 ಕೊರಿಂಥ 12:5ರ ಪರಿಭಾಷೆಯನ್ನೇ ಉಪಯೋಗಿಸುವದಾದರೆ, "ಸೇವೆಗಳಲ್ಲಿ ಬೇರೆ ಬೇರೆ ವಿಧಗಳುಂಟು" (NIV). ಕೆಲವರಿಗೆ ಏನು ಮಾಡಲ್ಪಡುವ ಅಗತ್ಯವಿದೆಯೆಂಬುದನ್ನು ಹುಡುಕಿ ತಿಳಿದು (ಅದು ಏನೇ ಆಗಿರಬಹುದು) ಅದನ್ನು ಮಾಡಿ ಮುಗಿಸುವ ಜಾಣ್ಮೆಯಿರುತ್ತದೆ.

3. ಬೋಧಿಸುವ ವರ. **ಬೋಧಿಸುವವನು** ಎಂಬುದು διδάσκω (*didaskō*) ಎಂಬ ರೂಪದ ಪದದಿಂದ ಬಂದದ್ದಾಗಿದೆ, ಅದೊಂದು ಕ್ರಿಯಾಪದವಾಗಿದ್ದು ಅದರರ್ಥವು "ಬೋಧನೆ ಕೊಡು" ಎಂದಾಗಿರುತ್ತದೆ.[31] ಕೆಲವರು ಇತರರಿಗೆ ಮಾಹಿತಿಯನ್ನು ವಿಶದಪಡಿಸುವದರಲ್ಲಿ ನಿಪುಣರಾಗಿರುತ್ತಾರೆ. ಅವರು ದೇವರ ಸತ್ಯವನ್ನು ಸುಲಭವಾಗಿ ಅರ್ಥಮಾಡಿಕೊಳ್ಳತಕ್ಕ ರೀತಿಯಲ್ಲಿ ತಿಳಿಯಪಡಿಸುವರು.

4. ಬುದ್ಧಿಹೇಳುವ ವರ. **ಬುದ್ಧಿಹೇಳುವವನು** (παρακαλέω, *parakaleō* ಎಂಬದರಿಂದ ಬಂದದ್ದು) ಎಂಬ ಪದವು ಅಗಾಧವಾದ ಅರ್ಥವನ್ನು ಹೊಂದಿದೆ. ಅದೊಂದು ಸಂಯುಕ್ತ ಪದವಾಗಿದ್ದು παρά (*para*, "ಪಕ್ಕದಲ್ಲಿ") ಎಂಬುದನ್ನು καλέω (*kaleō,* "ಕರೆಯುವದು") ಎಂಬ ಪದದೊಂದಿಗೆ ಒಂದುಗೂಡಿಸುವದಾಗಿದೆ. ಇಲ್ಲಿ ಚಿತ್ರಣವು ಸಹಾಯಕ್ಕಾಗಿ "ಮತ್ತೊಬ್ಬನನ್ನು ಪಕ್ಕದಲ್ಲಿ ಕರೆಯುವದು" ಆಗಿರುತ್ತದೆ. *Parakaleō* ಎಂಬುದು "ಬುದ್ಧಿವಾದ," "ಪ್ರೋತ್ಸಾಹಿಸು," "ಆಲೋಚನೆ ಹೇಳು," ಅಥವಾ "ಬಲಪಡಿಸು" ಎಂದು ಸಹ ಅನುವಾದಿಸಲ್ಪಡಬಹುದಾಗಿದೆ. ಕೆಲವು ವ್ಯಕ್ತಿಗಳಿಗೆ ಮತ್ತೊಬ್ಬರನ್ನು ಪ್ರೋತ್ಸಾಹಿಸಿ ಸ್ಫೂರ್ತಿಗೊಳಿಸುವ ಪ್ರತಿಭೆ ಇರುತ್ತದೆ.

5. ದಾನಕೊಡುವ ವರ. ಪೌಲನು ನಂತರ **ದಾನಕೊಡುವವನು** ಕುರಿತು ಮಾತಾಡುತ್ತಾನೆ. ಇಲ್ಲಿ ಉಪಯೋಗಿಸಲ್ಪಟ್ಟಿರುವ ಪದವು μεταδίδωμι (*metadidōmi*) ಎಂಬುದರಿಂದ ಬಂದಿರುತ್ತದೆ, ಅದು δίδωμι (*didōmi*, "ಕೊಡು") ಮತ್ತು μετά (*meta*, "ಯೊಂದಿಗೆ") ಎಂಬ ಪದಗಳ ಸಂಯೋಜನೆಯಾಗಿರುತ್ತದೆ. ಅದರ ಅರ್ಥವು "ಹಂಚಿಕೊಳ್ಳುವದು" ಎಂದಾಗಿರುತ್ತದೆ.[32] NIV ಯಲ್ಲಿ "ಇತರರ ಅಗತ್ಯತೆಗಳಿಗೆ ಕೊಡುಗೆ ನೀಡುವದು" ಎಂದಿರುತ್ತದೆ. ಕೊಡುವದನ್ನು ಒಂದು ವರವೆಂದು ಆಲೋಚಿಸುವದು ಸ್ವಲ್ಪ

ವಿಚಿತ್ರವೇನಿಸಬಹುದು, ಆದರೆ ಸನ್ನಿವೇಶವು ಹಾಗೆ ಮಾಡುವದಕ್ಕಾಗಿ ದೇವರು ನಮಗೆ ಸಾಮರ್ಥ್ಯವನ್ನು ಕೊಟ್ಟಿದ್ದಾನೆ ಎಂಬುದರ ಕುರಿತಾಗಿರುತ್ತದೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಒಬ್ಬನು ಕೊಡುವದಕ್ಕೆ ಶಕ್ತನಾಗಿದ್ದಲ್ಲಿ, ಅದರರ್ಥವು ದೇವರು ಆತನಿಗೆ ಹಣ ಅಥವಾ ಸ್ವತ್ತುಗಳನ್ನು ಅನುಗ್ರಹಿಸಿದ್ದಾನೆಂದಾಗಿರುತ್ತದೆ. ಕೊಡುವ ವರವು ಹಣವನ್ನು ಮಾಡುವ ಸಾಮರ್ಥ್ಯವು ಮೊದಲೇ ಇದೆಯೆಂಬ ಭಾವನೆಯನ್ನು ಸೂಚಿಸುತ್ತದೆಂದು ಬಹುತೇಕ ಲೇಖಕರು ನಂಬುತ್ತಾರೆ. ಕೆಲವರು ಹಣವನ್ನು ಮಾಡುವ ಪ್ರತಿಭೆಯನ್ನು ಹೊಂದಿರುತ್ತಾರೆ, ಮತ್ತು ಕೆಲವರಿಗೆ ಅದು ಇರುವದಿಲ್ಲ. ನಾವು ಎಲ್ಲಿಯ ವರೆಗೆ ಹೆಚ್ಚು ಪ್ರಾಮುಖ್ಯವಾದ ಸಂಗತಿಗಳನ್ನು ನಿರ್ಲಕ್ಷಿಸುವದಿಲ್ಲವೋ ಮತ್ತು ಎಲ್ಲಿಯ ವರೆಗೆ ನಾವು ನಮ್ಮ ಹಣವನ್ನು ಸ್ವಾರ್ಥ ಉದ್ದೇಶಗಳಿಗಾಗಿ ಉಪಯೋಗಿಸುವದಿಲ್ಲವೋ ಅಲ್ಲಿಯ ವರೆಗೆ ಹಣ ಸಂಪಾದಿಸುವದರಲ್ಲಿ ಯಾವದೇ ತಪ್ಪಿಲ್ಲ (1 ತಿಮೊಥೆ 6:9, 10, 17-19).

ಒಬ್ಬನ ಕೊಡುವಿಕೆಯು **ಯಥಾರ್ಥಮನಸ್ಸಿನಿಂದ** ಕೂಡಿರಬೇಕು. Bauerನ ಶಬ್ದಕೋಶವು "ಯಥಾರ್ಥಮನಸ್ಸಿನಿಂದ" (ἁπλότης, *haplotēs*) ಎಂಬುದನ್ನು "ಸರಳತೆ, ಯಥಾರ್ಥ, ಪ್ರಾಮಾಣಿಕತೆ, ಮುಚ್ಚುಮರೆಯಿಲ್ಲದೆ" ಎಂಬ ಅರ್ಥನಿರೂಪಣೆ ನೀಡುತ್ತದೆ.[33] ಅದು ἁπλοῦς (*haplous*) ಎಂಬುದಕ್ಕೆ ಸಂಬಂಧಪಟ್ಟದ್ದಾಗಿದ್ದು, ಅದರರ್ಥವು "ಏಕ" ಅಥವಾ "ಉದ್ದೇಶದ ಏಕತ್ವ" ಎಂದಾಗಿದೆ.[34] *Haplotēs* ಎಂಬುದು ದಾರಾಳತನಕ್ಕೆ ನಡಿಸುವಂಥ "ಹೃದಯದ ಏಕತ್ವ" ಎಂದು ಸೂಚಿಸುತ್ತದೆ.[35] KJV ಯು ಈ ಪದದ ಮೂಲಭೂತ ಅರ್ಥವನ್ನು ಎತ್ತಿತೋರಿಸುತ್ತದೆ: "ಕೊಡುವವನು ಅದನ್ನು ಸರಳತೆಯೊಂದಿಗೆ ಕೊಡಲಿ." ಒಬ್ಬ ಕ್ರೈಸ್ತನು ಕೊಡುವಾಗ ಅದನ್ನು ಅನಾವಶ್ಯಕವಾಗಿ ದೊಡ್ಡದಾಗಿ ತೋರಿಸಿಕೊಳ್ಳಬಾರದು (ಮತ್ತಾಯ 6:2). NASB ಯು ಅಂತಿಮ ಫಲಿತದ ಮೇಲೆ ಒತ್ತು ಕೊಡುತ್ತದೆ: "ಉದಾರತ್ವದಿಂದ." CJB ಯು ಎರಡು ಭಾವನೆಗಳನ್ನು ಸೇರ್ಪಡೆಗೊಳಿಸುತ್ತದೆ: "ನೀವು ಕೊಡುವಂಥ ವ್ಯಕ್ತಿಯಾಗಿದ್ದರೆ, ಅದನ್ನು ಸರಳ ಹಾಗೂ ದಾರಳವಾಗಿ ಮಾಡು."

6. ಹಿರೀತನ ನಡಿಸುವ ವರ. **ಹಿರೀತನ** ಎಂಬುದಕ್ಕೆ ಗ್ರೀಕ್ ಪದವು προΐστημι (*proistēmi*) ಎಂಬುದರಿಂದ ಬಂದದ್ದಾಗಿದೆ, ಅದರರ್ಥವು "ಮುಂದೆ ನಿಲ್ಲು" ಎಂದಾಗಿದೆ. ಅದು ἵστημι (*histēmi*, "ನಿಲ್ಲು") ಮತ್ತು πρό (*pro*, "ಮುಂದೆ") ಎಂಬ ಪದಗಳ ಸಂಯೋಜನೆಯಾಗಿದೆ. *Proistēmi* ಯು "ನಡಿಸು," "ಆಳು," ಮತ್ತು "ನಿರ್ವಹಿಸು" ಎಂದು ಸಹ ಅನುವಾದಿಸಲ್ಪಟ್ಟಿರುತ್ತದೆ. ಕೆಲವರಿಗೆ ಜನರು ತಮ್ಮನ್ನು ಹಿಂಬಾಲಿಸುವಂತೆ ಮಾಡುವ ಸ್ವಾಭಾವಿಕವಾಗಿ ಬಂದ ಪ್ರತಿಭೆಯನ್ನು ಹೊಂದಿರುತ್ತಾರೆ. ಈ ರೀತಿಯ ವ್ಯಕ್ತಯನ್ನು ಆನೇಕ ಸಾರಿ "ಹುಟ್ಟಿನಿಂದಲೇ ಸಹಜ ನಾಯಕನು" ಎಂದು ಕರೆಯಲ್ಪಡುತ್ತಾನೆ. ಪೌಲನು ಬಹುಶಃ ಪ್ರಾಥಮಿಕವಾಗಿ ಸಭೆಯ ಹಿರಿಯರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದಾಗಿದೆ (ನೋಡಿರಿ 1 ತಿಮೊಥೆ 5:17). ನಾವು ಒಬ್ಬನನ್ನು ನಾಯಕನನ್ನಾಗಿ ಮಾಡುವದಕ್ಕಾಗಿ ಹಿರಿಯನೆಂದು ಆಯ್ಕೆ ಮಾಡುವದಿಲ್ಲ, ಆತನು ಆ ಸ್ಥಾನವನ್ನು ವಹಿಸಿಕೊಳ್ಳುವ ಮುಂಚೆ ಒಬ್ಬ ಗುರುತಿಸಲ್ಪಟ್ಟ ನಾಯಕನಾಗಿರಬೇಕು. ಹೇಗೂ, ಹಿರೀತನ ನಡಿಸುವ ಕುರಿತಾಗಿ ಪೌಲನು ನೀಡುವ ಬೋಧನೆಗೆ ವಿಶಾಲವಾದ ಅನ್ವಯಿಕೆ ಇರಬಹುದಾಗಿದೆ. *Proistēmi* ಯು ಒಬ್ಬ ತಂದೆಯು ತನ್ನ ಕುಟುಂಬವನ್ನು ನಡಿಸುವ ರೀತಿಯನ್ನು ಬಣ್ಣಿಸುವದಕ್ಕೆ ಸಹ

ಉಪಯೋಗಿಸಲ್ಪಡುತ್ತದೆ (1 ತಿಮೊಥೆ 3:4, 12).

ಹೀರಿತನ ನಡಿಸುವವರು **ಆಸಕ್ತಿಯಿಂದ ನಡಿಸಲಿ**. "ಆಸಕ್ತಿ" ಎಂಬುದಕ್ಕೆ ಇರುವ ಗ್ರೀಕ್ ಪದದ σπουδή (*spoudē*) ಅರ್ಥವು "ಶ್ರದ್ಧಾಪೂರ್ವಕ, ಅತ್ಯಾಸಕ್ತಿ."[36] ಕಾಲಕ್ರಮೇಣದಲ್ಲಿ, ಒಬ್ಬ ನಾಯಕನು ಬಳಲಿ ಹೋಗಬಹುದು ಮತ್ತು ತನ್ನ ಕರ್ತವ್ಯಗಳನ್ನು ನೆರವೇರಿಸುವದರಲ್ಲಿ ನಿರ್ಲಕ್ಷ ತೋರಬಹುದು. ನಾವು ಒಬ್ಬ ಹಿರಿಯನು ಸಭೆಯನ್ನು ನಡಿಸುವ ಬಗ್ಗೆ ಮಾತಾಡುತ್ತಿದ್ದೇವೋ ಅಥವಾ ತಂದೆಗಳು ಕುಟುಂಬಗಳನ್ನು ನಡಿಸುವ ಬಗ್ಗೆ ಮಾತಾಡುತ್ತಿದ್ದೇವೋ, ಅವರು "ಜವಾಬ್ದಾರಿಯನ್ನು ಗಂಭೀರವಾಗಿ ತೆಗೆದುಕೊಳ್ಳತಕ್ಕದ್ದು" (NLT).

7. ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವ ವರ. **ಉಪಕಾರ ಮಾಡುವವನು** ಎಂಬುದಕ್ಕಿರುವ ಪದವು ἐλεέω (*eleeō*) ಎಂಬ ಪದಿಂದ ಬಂದದ್ದಾಗಿದೆ, ಅದರರ್ಥವು "ಮತ್ತೊಬ್ಬನ . . . ಯೊಂದಿಗೆ ಕನಿಕರ ಪಡುವದು" ಮತ್ತು ನಂತರ ಅದನ್ನು ಕ್ರಿಯೆಯಲ್ಲಿ ತೋರಿಸುವದು ಎಂದಾಗಿರುತ್ತದೆ.[37] ಇದು ಬಹು-ಮುಖವುಳ್ಳ ವರವಾಗಿದೆ: ಜನರಿಗೆ ಯಾವಾಗ ಸಹಾಯದ ಅಗತ್ಯವಿದೆಯೆಂಬುದರ ಗ್ರಹಣಶಕ್ತಿ, ಯಾವ ರೀತಿಯ ಸಹಾಯವು ಅತ್ಯಂಥ ಸಹಾಯಕರವಾಗಿರುವದೆಂದು ತಿಳಿಯುವದು ಮತ್ತು ಆ ಸಹಾಯವನ್ನು ಗೋಪ್ಯವಾಗಿ ಯಾವದೇ ಸಡಗರವಿಲ್ಲದೆ ಒದಗಿಸುವದು. ಈ ವರದಷ್ಟು ಒಳ್ಳೇದನ್ನು ಕೆಲವೇ ವರಗಳು ಮಾಡುತ್ತವೆ, ಮತ್ತು ಹೀಗಿದ್ದರೂ ಇದು ಕನಿಷ್ಠ ಸಾರ್ವಜನಿಕ ಮನ್ನನೆಯನ್ನು ಪಡೆಯುತ್ತದೆ.

ಉಪಕಾರ ಕೃತ್ಯಗಳನ್ನು **ಸಂತೋಷವಾಗಿ** ಮಾಡಬೇಕು. "ಸಂತೋಷವಾಗಿ" ಎಂಬುದು ἱλαρότης (*hilarotēs*) ಎಂಬ ಪದದಿಂದ ಬಂದದ್ದು, ಈ ಪದದಿಂದಲೇ "ಖುಷಿ" ಮತ್ತು "ಉಲ್ಲಾಸಭರಿತ" ಎಂಬ ಪದಗಳು ಬಂದಿರುತ್ತವೆ. *Hilarotēs* ಎಂಬುದು "ಮನಸ್ಸಿನ ಸಿದ್ಧವಾಗಿರುವಿಕೆ, ಉಲ್ಲಾಸತನ, ಏನನ್ನಾದರೂ ಮಾಡುವದಕ್ಕೆ ತಕ್ಷಣ ತಯಾರಾಗುವದು [ತ್ವರೆ ಪಡುವದು]" ಎಂಬುದನ್ನು ಸೂಚಿಸುತ್ತದೆ.[38] ಇತತರಿಗೆ ಒಲ್ಲದಮನಸ್ಸಿನಿಂದ ಅಥವಾ ಮುಖ ಸಿಂಡರಿಕೊಂಡು ಸಹಾಯ ಮಾಡುವದರಿಂದ ಒಳಿತಿಗಿಂತಲೂ ಹಾನಿಯೇ ಹೆಚ್ಚು ಸಂಭವಿಸಬಲ್ಲದು. Petersonನ ಭಾವಾನುವಾದವು ಪೌಲನ ಬೋಧನೆಯನ್ನು ಹೀಗೆ ವಿಸ್ತರಿಸುತ್ತವೆ: "ನೀವು ಕಷ್ಟದಲ್ಲಿರುವವರೊಂದಿಗೆ ಕೆಲಸ ಮಾಡುವದಾದರೆ, ಅವರೊಂದಿಗೆ ಸಿಟ್ಟಿಗೇಳಬೇಡ ಅಥವಾ ಅವರಿಂದ ಹತಾಶಗೊಳ್ಳದಿರು. ನಿಮ್ಮ ಮುಖದಲ್ಲಿ ಯಾವಾಗಲೂ ಮುಗುಳ್ನಗು ಇರಲಿ" (MSG). D. Stuart Briscoe ಇದನ್ನು ಈ ರೀತಿಯಲ್ಲಿ ಹೇಳುತ್ತಾನೆ: "ನಿರ್ದಿಷ್ಟವಾಗಿ ಉಪಕಾರ ಮಾಡುವ ಸಾಮರ್ಥ್ಯವನ್ನು ಅನುಗ್ರಹಿಸಲ್ಪಟ್ಟವರು ಅವರ ಸುಂದರವಾದ ವರವು ಬಹಿರಂಗ ವಾಗುವಾಗ ಅವರ ಸಮಯ ಹಾಗೂ ಶಕ್ತಿಯ ಮೇಲೆ ಹೇರಲಾಗುವ ಭಾರವಾದ ಬೇಡಿಕೆಯಿಂದ ಅಸಂತುಷ್ಠರಾಗಬಾರದು."[39]

ಈ ಪಟ್ಟಿಯಲ್ಲಿರುವ ಕೆಲವು ವರಗಳು ಪ್ರಾಥಮಿಕವಾಗಿ ಮಾತಾಡುವದಕ್ಕೆ ಸಂಬಂಧಿಸಿವೆ (ಪ್ರವಾದಿಸುವದು, ಬೋಧಿಸುವದು, ಬುದ್ಧಿಹೇಳುವದು), ಅದೇ ವೇಳೆಯಲ್ಲಿ ಮಿಕ್ಕವುಗಳು ಸಹಾಯವನ್ನು ಒದಗಿಸುವದಕ್ಕೆ (ಸಭಾಸೇವೆ, ದಾನಕೊಡುವದು, ಹಿರೀತನ ನಡಿಸುವದು, ಉಪಕಾರ ಮಾಡುವದು) ಸೇರಿರುತ್ತವೆ. ಈ ಪಟ್ಟಿಯು ಸ್ಪಷ್ಟವಾಗಿ ವಿವಿಧ ವರಗಳನ್ನು ಹೊಂದಿರುವ ಬೈಬಲಿನ ಜನರ ಉದಾಹರಣೆಗಳನ್ನು ನೆನಪಿಗೆ ತರುತ್ತದೆ—

ಮತ್ತು ಈ ಸಾಮರ್ಥ್ಯಗಳನ್ನು ಹೊಂದಿರುವಂಥ ನಮಗೆ ವೈಯಕ್ತಿಕವಾಗಿ ಪರಿಚಯವಿರುವ ಜನರನ್ನು ಸಹ ನೆನಪಿಗೆ ತರಬಹುದಾಗಿದೆ. ಬೈಬಲಿನ ಕೆಲವು ಉದಾಹರಣೆಗಳು ಇಲ್ಲಿವೆ:

ಪ್ರವಾದಿಸುವ ವರ—ಅಗಬ (ಅಪೊಸ್ತಲರ ಕೃತ್ಯಗಳು 11:28; 21:10, 11).

ಬೋಧಿಸುವ ವರ—ಪೌಲನು, ಆತನು ರೋಮಾಯ ಸಾಮ್ರಾಜ್ಯದುದ್ದಕ್ಕೂ ಜನರಿಗೆ ಕ್ರಿಸ್ತನ ಕುರಿತು ಬೋಧಿಸಿದನು (ಅಪೊಸ್ತಲರ ಕೃತ್ಯಗಳು 11:25, 26; 19:8-10).

ಬುದ್ಧಿಹೇಳುವ ವರ—ಬಾರ್ನಬ, "ಧೈರ್ಯದಾಯಕ" (ಅಪೊಸ್ತಲರ ಕೃತ್ಯಗಳು 4:36).

ಸಭಾಸೇವೆಯ ವರ—ಫೋಯಿಬೆ, ಆಕೆಯು ಅನೇಕ ಸಾರಿ ಪೌಲನಿಗೆ ಸೇವೆಯಲ್ಲಿ ಸಹಾಯ ಮಾಡಿದ್ದಳು (ರೋಮಾ 16:1, 2).

ದಾನ ಕೊಡುವ ವರ—ಯೇಸು ಹಾಗೂ ಅಪೊಸ್ತಲರಿಗೆ ನೆರವು ಒದಗಿಸಿದ ಸ್ತ್ರೀಯರು (ಲೂಕ 8:1-3).

ಹಿರೀತನ ನಡಿಸುವ ವರ—ಯಾಕೋಬ, ಯೇಸುವಿನ ಸಹೋದರನಾಗಿದ್ದ ಈತನು ಯೆರೂಸಲೇಮಿನಲ್ಲಿನ ಸಭೆಯ ಸ್ತಂಭವಾಗಿದ್ದನು (ಅಪೊಸ್ತಲರ ಕೃತ್ಯಗಳು 15:13-21; ಗಲಾತ್ಯ 2:9).

ಉಪಕಾರ ಮಾಡುವ ವರ—ದೊರ್ಕ, ಆಕೆಯು ವಿಧವೆಯರಿಗೋಸ್ಕರ ಉಡುಪುಗಳನ್ನು ಮಾಡಿಕೊಡುತ್ತಿದ್ದಳು (ಅಪೊಸ್ತಲರ ಕೃತ್ಯಗಳು 9:36, 39).

## ಸಹೋದರರಂತೆ ಪ್ರೀತಿಸುವಿಕೆ (12:9-13)

**9ನಿಮ್ಮ ಪ್ರೀತಿಯು ನಿಷ್ಕಪಟವಾಗಿರಲಿ. ಕೆಟ್ಟತನಕ್ಕೆ ಹೇಸಿಕೊಂಡು ಒಳ್ಳೇದನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ. 10ಕ್ರೈಸ್ತ ಸಹೋದರರು ಅಣ್ಣತಮ್ಮಂದಿರೆಂದು ಒಬ್ಬರನ್ನೊಬ್ಬರು ಪ್ರೀತಿಸಿರಿ. ಮಾನಮರ್ಯಾದೆಯನ್ನು ತೋರಿಸುವದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರಿ. 11ಜಾಗ್ರತೆ ಬೇಕಾದಲ್ಲಿ ಆಲಸ್ಯವಾಗಿರದೆ ಆಸಕ್ತಚಿತ್ತರಾಗಿದ್ದು ಕರ್ತನ ಸೇವೆ ಮಾಡುವವರಾಗಿರ್ರಿ. 12ಕ್ರೈಸ್ತರು ನಿರೀಕ್ಷಿಸುವ ಮಹಾಪದವಿಯನ್ನು ನೆನಸಿ ಉಲ್ಲಾಸವಾಗಿರ್ರಿ. ಉಪದ್ರವದಲ್ಲಿ ಸೈರಣೆಯುಳ್ಳವರಾಗಿರ್ರಿ. ಬೇಸರಗೊಳ್ಳದೆ ಪ್ರಾರ್ಥನೆ ಮಾಡಿರಿ. 13ದೇವಜನರಿಗೆ ಕೊರತೆಬಂದಾಗ ಸಹಾಯ ಮಾಡಿರಿ. ಅಥಿತಿಸತ್ಕಾರ್ಯವನ್ನು ಅಭ್ಯಾಸಿಸಿರಿ.**

ಬೈಬಲ್ ಪಂಡಿತರು ಪ್ರೀತಿಯ ಅರ್ಥನಿರೂಪಣೆ ಮಾಡುವದಕ್ಕೆ ಪ್ರಯತ್ನಗಳನ್ನು ಮಾಡಿದ್ದಾರೆ, ಆದರೆ ಪೌಲ ಹಾಗೂ ಇತರ ಪ್ರೇರಿತ ಬರಹಗಾರರು ಪ್ರೀತಿಯ *ಅರ್ಥನಿರೂಣೆಯನ್ನು* ಅಷ್ಟಾಗಿ ಮಾಡದೆ ಬಣ್ಣಿಸುವದನ್ನು ಅಧಿಕವಾಗಿ ಮಾಡಿದ್ದಾರೆ. ಅವರು ನಮಗೆ ವಿವಿಧ ಪರಿಸ್ಥಿತಿಗಳಲ್ಲಿ ಪ್ರೀತಿಯು ಏನು ಮಾಡುತ್ತದೆ, *ಹೇಗೆ* ವರ್ತಿಸುತ್ತದೆ ಎಂಬ ಬಗ್ಗೆ ಹೇಳಿದ್ದಾರೆ. ಪೌಲನು 1 ಕೊರಿಂಥ 13ರಲ್ಲಿ ಅದನ್ನೇ ಮಾಡಿದನು; ಅದನ್ನೇ ಆತನು ರೋಮಾ 12:9-13ರಲ್ಲಿ ಸಹ ಮಾಡಿದ್ದಾನೆ.

**ವಚನ 9.** ಈ ವಚನವು **ನಿಮ್ಮ ಪ್ರೀತಿಯು ನಿಷ್ಕಪಟವಾಗಿರಲಿ** ಎಂದು ಆರಂಭಗೊಳ್ಳುತ್ತದೆ. "ಪ್ರೀತಿ" ಎಂಬುದಕ್ಕೆ ಉಪಯೋಗಿಸಲ್ಪಟ್ಟಿರುವ *ἀγάπη* (*agapē* ಪದವು). *Agapē* ಯು ಅತ್ಯುನ್ನತ ವಿಧವಾದ ಪ್ರೀತಿ ಆಗಿರುತ್ತದೆ, ಅದು ಪ್ರೀತಿಸಲ್ಪಡುವವರಿಗೆ ಅತ್ಯುತ್ತಮವಾದದ್ದನ್ನೇ ಕೋರುವಂಥ ಪ್ರೀತಿ, ಅದು ಸ್ವತಃ ದೇವರ ಗುಣವನ್ನೇ ಸೂಚಿಸುವ ಪ್ರೀತಿಯಾಗಿದೆ (1 ಯೋಹಾನ 4:8). ರೋಮಾಪುರದವರಿಗೆ ಪತ್ರಿಕೆಯಲ್ಲಿ ಈ ಹಂತದ ವರೆಗೆ, *agapē* ಯು ಕೇವಲ ದೇವರಿಗೆ ಮಾತ್ರವೇ ಅನ್ವಯಿಸಲ್ಪಟ್ಟಿರುತ್ತದೆ (5:5, 8; 8:35, 39). ಇಲ್ಲಿ, ನಾವು ಒಬ್ಬರಿಗೊಬ್ಬರು ಪರಸ್ಪರ ಈ ವಿಧವಾದ ಪ್ರೀತಿಯನ್ನೇ ಹೊಂದಿರಬೇಕೆಂದು ಪೌಲನು ಹೇಳುತ್ತಾನೆ. Anders Nygren ಹೀಗೆ ಬರೆಯುತ್ತಾನೆ, "ಪ್ರೀತಿಯು . . . ಕ್ರಿಸ್ತನ ದೇಹದಲ್ಲಿ ರಕ್ತಪರಿಚಲನೆಯಂತಿರುತ್ತದೆ, ಅದರ ಮೂಲಕ ಆ ದೇಹದ ಎಲ್ಲಾ ಅಂಗಗಳು ತಕ್ಷಣವೇ ಒಂದಕ್ಕೊಂದು ಸಂಬಂಧ ಹೊಂದಿಕೊಂಡು ಒಟ್ಟಾಗಿ ಏಕತೆಯ ಬಂಧದಲ್ಲಿ ಸೇರಿಸಲ್ಪಡುತ್ತಾರೆ."[40]

*Agapē* ಪ್ರೀತಿಯು ಹೇಗಿರುತ್ತದೆ? ಅದು "ನಿಷ್ಕಪಟವಾಗಿರಲಿ" ಎಂದು ಪೌಲನು ಹೇಳುತ್ತಾನೆ. ಗ್ರೀಕ್ ವಾಕ್ಯದಲ್ಲಿ, "ನಿಷ್ಕಪಟವಾಗಿರಲಿ" ಎಂಬುದು ἀνυπόκριτος (*anupokritos*) ಎಂಬ ಪದದಿಂದ ಬಂದದ್ದಾಗಿದೆ. ಅದು "ಕಪಟಿ" (ὑποκριτής, *hupokritēs*) ಎಂಬುದಕ್ಕಾಗಿರುವ ಪದವಾಗಿದ್ದು ಅದರ ಮುಂದುಗಡೆ ನಿಷೇಧಾರ್ಥಕ (α, *a*) ಪದವನ್ನು ಹೊಂದಿರುತ್ತದೆ. ಪೌಲನ ಕಾಲದಲ್ಲಿ, *hupokritēs* ಎಂಬ ಪದವನ್ನು ವೇದಿಕೆಯಲ್ಲಿ ಒಂದು ಮುಖವಾಡವನ್ನು ಧರಿಸಿಕೊಂಡು ತಾನಲ್ಲದ ಒಬ್ಬ ವ್ಯಕ್ತಿಯಂತೆ ನಟನೆ ಮಾಡುತ್ತಿದ್ದ ಒಬ್ಬ ನಟನನ್ನು ಬಣ್ಣಿಸುವದಕ್ಕೆ ಬಳಸಲಾಗುತ್ತಿತ್ತು.[41] JB *ತರ್ಜುಮೆಯಲ್ಲಿ* "ನಿಮ್ಮ ಪ್ರೀತಿಯು ಒಂದು ನಟನೆಯಾಗಿರದಿರಲಿ." ಒಂದು "ನಟನೆಯ (ತೋರಿಕೆ) ಪ್ರೀತಿಗೆ" ಗಮನ ಸೆಳೆಯುವ ಉದಾಹರಣೆಯೆಂದರೆ ಯೇಸುವಿಗೆ ಕೆನ್ನೆಯ ಮೇಲೆ ಮುತ್ತಿಟ್ಟು ಹಿಡಿದುಕೊಟ್ಟ ಯೂದನು (ಲೂಕ 22:47, 48). ಕೆಲವು ವ್ಯಕ್ತಿಗಳು ಪ್ರೀತಿಸುವ ಜನರೆಂದು ಪರಿಚಿತರಾಗಿರುವದಕ್ಕೆ ಇಚ್ಛೆಸುತ್ತಾರೆ, ಆದ್ದರಿಂದ ಅವರು ಹೃದಯಗಳು ಸ್ಪರ್ಶಿಸಲ್ಪಡದೆಯೇ ಉಳಿದಾಗ್ಯೂ ಹೊರಗೆ ಮಾತ್ರ ಪ್ರೀತಿಯ "ಮುಖವಾಡವನ್ನು ಧರಿಸಿಕೊಳ್ಳುವರು." ಆ ರೀತಿಯಲ್ಲಿರಕೂಡದು ಎಂದು ಪೌಲನು ತನ್ನ ವಾಚಕರಲ್ಲಿ ವಿನಂತಿಸಿಕೊಳ್ಳುತ್ತಾನೆ. "[ನಿಮ್ಮ] ಪ್ರೀತಿಯು ಕೇವಲ ಹೊರಗಿನ ಪ್ರದರ್ಶನವಾಗಿರದಿರಲಿ" (CJB).

ಅಪ್ಪಟವಾದ ಪ್ರೀತಿಯನ್ನು ಹೊಂದಿರುವದೆಂದರೆ ಏನರ್ಥವಾಗಿದೆ? ಪೌಲನು ಅದಕ್ಕೊಂದು ಉದಾಹರಣೆಯನ್ನು ಕೊಟ್ಟನು: **ಕೆಟ್ಟತನಕ್ಕೆ ಹೇಸಿಕೊಂಡು ಒಳ್ಳೇದನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ.** ವರ್ಷಗಳ ಹಿಂದೆ, ಆಮೋಸನು ಹೀಗೆ ಬರೆದಿದ್ದನು, "ಕೆಟ್ಟದ್ದನ್ನು ದ್ವೇಷಿಸಿರಿ, ಒಳ್ಳೇದನ್ನು ಪ್ರೀತಿಸಿರಿ" (ಆಮೋಸ 5:15). ಪೌಲನು *ಪ್ರೀತಿಸಿರಿ* ಎಂಬ ಬುದ್ಧಿವಾದ ನಂತರ *ದ್ವೇಷಿಸಿರಿ* ಎಂಬದಾಗಿ ಹೇಳಿದ್ದು ಕೆಲವರಿಗೆ ಆಶ್ಚರ್ಯವನ್ನುಂಟು ಮಾಡುವದು. ಹೇಗೂ, ಒಬ್ಬರು ಒಮ್ಮೆ ಹೇಳಿರುವಂತೆ, ನಿಜ ಪ್ರೀತಿಯು "ಕೇವಲ ಅತಿಭಾವುಕತೆ" ಆಗಿರುವದಿಲ್ಲ. ನಾವು ವಿರುದ್ಧವಾದದ್ದನ್ನು ದ್ವೇಷಿಸುವ ಹೊರತು ಒಂದನ್ನು ನಿಜವಾಗಿಯೂ ಪ್ರೀತಿಸಲಾರೆವು. ಪ್ರಾಮಾಣಿಕವಾದ ಪ್ರೀತಿಯು ಒಳ್ಳೇದನ್ನು ಹಿಡಿದುಕೊಂಡು ಕೆಟ್ಟದ್ದನ್ನು ಹೇಸಿಕೊಳ್ಳುವದಾಗಿರುತ್ತದೆ.

"ಹೇಸಿಕೊಂಡು" ಮತ್ತು "ಹಿಡಿದುಕೊಳ್ಳಿರಿ" ಎಂಬವುಗಳ ಗ್ರೀಕ್ ಅನುವಾದದ ಪದಗಳು ಬಹಳ ಬಲವಾದ ಪದಗಳಾಗಿರುತ್ತವೆ. "ಹೇಸಿಕೊಂಡು" ಎಂಬುದು ἀποστυγέω (*apostugeō*) ಎಂಬ ಪದದಿಂದ ಬಂದಿದೆ, ಅದು "ದ್ವೇಷಿಸು" (στυγέω, *stugeō*) ಎಂಬುದಕ್ಕಾಗಿರುವ ಪದವಾಗಿದ್ದು ἀπό (*apo*) ಎಂಬದರಿಂದ ತೀವ್ರಗೊಳಿಸಲ್ಪಡುತ್ತದೆ.[42] *Apostugeō* ಎಂದರೆ "ದ್ವೇಷಿಸು, ಅಸಹ್ಯಿಸು, ಜಿಗುಪ್ಸೆ ಪಡು, ಓಕರಿಕೆಯಿಂದ ಮುಖ ತಿರುಗಿಸಿಕೋ" ಎಂಬ ಅರ್ಥವನ್ನು ಕೊಡುತ್ತದೆ. Jim McGuigganನು "ಪವಿತ್ರ ದ್ವೇಷ" ಮತ್ತು ದೈವಿಕ ಅಸಹ್ಯಿಸುವಿಕೆ" ಎಂಬ ಪದಗುಚ್ಛಗಳನ್ನು ಬಳಸುತ್ತಾನೆ.[43] ಕೆಟ್ಟತನವು ಬಹಳವಾಗಿ ಪರಿಚಿತವಾಗಿ ಬಿಟ್ಟು ನಾವು ಅದರಿಂದ ಆಘಾತಗೊಳ್ಳುವದನ್ನು ನಿಲ್ಲಿಸಿ ಬಿಡುವ ಸಾಧ್ಯತೆಯಿರುತ್ತದೆ. ತತ್ಪರಿಣಾಮವಾಗಿ, ಪೌಲನು ಹೇಳುತ್ತಾನೆ, "ಅದು ನಿಮಗೆ ಸಂಭವಿಸುವಂತೆ ಅವಕಾಶ ಕೊಡಬೇಡಿರಿ!"[44]

ನಾವು ಏಕೆ ಕೆಟ್ಟದ್ದನ್ನು ದ್ವೇಷಿಸಬೇಕು? ಏಕೆಂದರೆ ಕಟ್ಟದ್ದು ದೇವರಿಗೆ ಮತ್ತು ಆತನ ಚಿತ್ತಕ್ಕೆ ವಿರುದ್ಧವಾಗಿರುತ್ತದೆ; ಏಕೆಂದರೆ ಕೆಟ್ಟತನವು ಲೆಕ್ಕಿಸಲಾಗದಷ್ಟು ಸಾವಿರಾರು ಜನರ ಜೀವಿತಗಳನ್ನು ನಾಶಗೊಳಿಸುತ್ತದೆ; ಏಕೆಂದರೆ ಕೆಟ್ಟತನವು ಜನಸಮೂಹಗಳನ್ನು ನರಕಕ್ಕೆ ಕಳುಹಿಸುವದಾಗಿದೆ. ಕೆಟ್ಟದ್ದನ್ನು ದ್ವೇಷಿಸುವ ನಮ್ಮ ಪ್ರಯತ್ನದಲ್ಲಿ, ಹೇಗೂ, ನಾವು ಜನರನ್ನು ದ್ವೇಷಿಸದಂತೆ ಜಾಗರೂಕತೆಯಿಂದ ಇರತಕ್ಕದ್ದು (ಯೂದನು 23). ಯೇಸು ಹೀಗೆ ಹೇಳಿದನು, "ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ" (ಮತ್ತಾಯ 5:44). ಒಬ್ಬ ವೈದ್ಯನು ಕ್ಯಾನ್ಸರ್.ನ್ನು ದ್ವೇಷಿಸುತ್ತಾನೆ, ಆದರೆ ಕ್ಯಾನ್ಸರ್ ಹೊಂದಿರುವ ತನ್ನ ರೋಗಿಗಳನ್ನು ಆತನು ದ್ವೇಷ ಮಾಡುವದಿಲ್ಲ.

ಅಷ್ಟುಮಾತ್ರವಲ್ಲದೆ, ನಾವು "ಒಳ್ಳೇದನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕು." "ಹಿಡಿದುಕೊಳ್ಳಿರಿ" ಎಂಬುದು κολλάω (*kollaō*) ಎಂಬದರಿಂದ ಬಂದಿದೆ, ಅದರರ್ಥವು "ಒಟ್ಟಾಗಿ ಗಟ್ಟಿಯಾಗಿ ಕೂಡಿಕೊಳ್ಳುವದು, ಅಂಟಿಕೋ, ಬಂಧಕಗೊಳಿಸು . . . (*kolla*, 'ಅಂಟು' ಎಂಬ ಪದದಿಂದ ಬಂದದ್ದು)."[45] CEV ತರ್ಜುಮೆಯಲ್ಲಿ "ಯಾವದು ಒಳ್ಳೇಯದೋ ಅದೆಲ್ಲವನ್ನೂ ಬಿಗಿಯಾಗಿ ಹಿಡಿದುಕೊಳ್ಳಿರಿ" ಎಂದಿರುತ್ತದೆ. ಕೆಟ್ಟದ್ದನ್ನು ದ್ವೇಷಿಸುವದು ಮತ್ತು ಒಳ್ಳೇದನ್ನು ಪ್ರೀತಿಸುವದು ಒಂದೇ ನಾಣ್ಯದ ಎರಡು ಮುಖಗಳು. ಪುನಃ, ನಾವು ಪ್ರೀತಿಸುವಂಥದ್ದರ ವಿರುದ್ಧವಾಗಿರುವದನ್ನು ಮತ್ತು ಅದನ್ನು ನಾಶಮಾಡುವ ಸಂಗತಿಯನ್ನು ದ್ವೇಷಿಸುವ ಹೊರತು ನಾವು ನಿಜವಾಗಿಯೂ ಪ್ರೀತಿಯನ್ನು ಮಾಡುವವರೇ ಆಗಿರುವದಿಲ್ಲ.

ಅನೇಕ ಸಾರಿ "ಪ್ರೀತಿಯು ಕುರುಡಾದದ್ದು" ಎಂದು ಹೇಳಲಾಗುತ್ತದೆ. ಪ್ರೀತಿಯು ಪ್ರೀತಿಸಲ್ಪಟ್ಟವರಲ್ಲಿನ ತಪ್ಪುಗಳನ್ನು ಕಂಡರೂ ಕಾಣದಂತಿರುವದರಲ್ಲಿ ಕುರುಡು ಆಗಿರಬಹುದು (1 ಪೇತ್ರ 4:8), ಆದರೆ ನಿಜವಾದ ಪ್ರೀತಿಯ ಯಾವದು ಕೆಟ್ಟದ್ದು ಮತ್ತು ಯಾವುದ ಒಳ್ಳೇದು ಎಂಬ ವಿಷಯದಲ್ಲಿ ಕುರುಡು ಆಗಿರುವದಿಲ್ಲ. ಲೋಕವು ಕೆಟ್ಟದ್ದು ಮತ್ತು ಒಳ್ಳೇದರ ನಡುವಿನ ಯಾವದೇ ವ್ಯತ್ಯಾಸವನ್ನು ಅಳಿಸಿ ಹಾಕುವದಕ್ಕೆ ಪ್ರಯತ್ನಿಸುತ್ತದೆ, ಆದರೆ *agapē* ಪ್ರೀತಿಯು ಹಾಗೆ ಮಾಡುವದಿಲ್ಲ. ಅದು ಕೆಟ್ಟದ್ದನ್ನು ಹುರುಪಿನಿಂದ ವಿರೋಧಿಸುತ್ತದೆ ಮತ್ತು ಒಳ್ಳೇದನ್ನು ಪಟ್ಟುಬಿಡದೆ ಹಿಡಿದುಕೊಳ್ಳುತ್ತದೆ.

**ವಚನ 10.** ಪೌಲನು ಇತರ ಕ್ರೈಸ್ತರಿಗೆ ಪ್ರೀತಿಯು ಹೇಗೆ ಸಂಬಂಧಿಸುತ್ತದೆಂಬ ಬಗ್ಗೆ ತಿಳಿಸಲು ತಿರಿಗಿಕೊಳ್ಳುತ್ತಾನೆ: **ಅಣ್ಣತಮ್ಮಂದಿರೆಂದು ಒಬ್ಬರನ್ನೊಬ್ಬರು ಪ್ರೀತಿಸಿರಿ.** ನಾವು

ಸ್ವಾರ್ಥದಿಂದ ಕೂಡಿರಬೇಕೆಂಬದು ದೇವರ ಇಷ್ಟವಲ್ಲ, ಆದರೆ ಇತರರ ಬಗ್ಗೆ ಚಿಂತಿಸುವವರಾಗಿರಬೇಕೆಂದು ಇಷ್ಟಪಡುತ್ತಾನೆ.

9 ಮತ್ತು 10 ವಚನಗಳು "ಪ್ರೀತಿ" ಎಂಬುದಕ್ಕೆ ಹೊಸ ಒಡಂಬಡಿಕೆಯಲ್ಲಿ ಸಿಕ್ಕುವ ಮೂರು ಪದಗಳಿಗೆ ಒಂದು ಪ್ರದರ್ಶನ ಆಗಿರುತ್ತವೆ:[46] ἀγαπή (*agapē*), φιλία (*philia*), ಹಾಗೂ στοργή (*storgē*). *Agapē* ಯು 9ನೇ ವಚನದಲ್ಲಿ ಸಿಕ್ಕುತ್ತದೆ, ಮತ್ತು *philia* ಹಾಗೂ *storgē* ಎಂಬವುಗಳು 10ನೇ ವಚನದಲ್ಲಿ ಸಂಯೋಜನ ಪದವಾಗಿ ಉಪಯೋಗಿಸಲ್ಪಟ್ಟಿರುತ್ತವೆ. *Philia* ವು ಆದರದ ಮಮತೆಗೆ ಸಂಬಂಧಿಸಿದ್ದಾ ಗಿದ್ದರೆ, *storgē* ಎಂಬುದು ಕುಟುಂಬದ ಸದಸ್ಯರೊಬ್ಬರಿಗೆ ತೋರುವ ಪ್ರೀತಿಯನ್ನು ಸೂಚಿಸುತ್ತದೆ.[47] (1:31ನೇ ವಚನದಲ್ಲಿ *storgē* ಪದದ ನಿಷೇಧಾರ್ಥಕ ಪದದು ಕಾಣಿಸಿಕೊಳ್ಳುತ್ತದೆ, KJV ಯು ಅದನ್ನು "ಸ್ವಾಭಾವಿಕವಾದ ಮಮತೆಯಿಲ್ಲದವರು" ಎಂದು ಅನುವಾದಿಸುತ್ತದೆ. NASBಯು ಆ ವಚನದಲ್ಲಿ "ಪ್ರೀತಿಸದವರು" ಎಂದು ಹೇಳುತ್ತದೆ.)

10ನೇ ವಚನದಲ್ಲಿ, "ನಿಷ್ಠೆಯಿಂದಿರಿ" ಎಂಬುದು φιλόστοργος (*philostorgos*) ಎಂಬ ಪದದಿಂದ ಬಂದಿದೆ, ಅದು *storgē* ದೊಂದಿಗೆ ಜೊತೆಗೂಡಿ ರಚನೆಯಾಗಿರುವ *philia* (φίλος, *philos*) ಎಂಬ ಪದದ ರೂಪವಾಗಿರುತ್ತದೆ. "ಅಣ್ಣತಮ್ಮಂದಿರೆಂದು ಪ್ರೀತಿಸಿರಿ" ಎಂಬುದು φιλαδελφία (*philadelphia*) ಎಂಬ ಪದಿದಂದ ಬಂದದ್ದು, ಅದು *philos* ನ್ನು ἀδελφός (*adelphos*, "ಸಹೋದರ") ಎಂಬದರೊಂದಿಗೆ ಜೊತೆಗೂಡಿಸುವದಾಗಿದೆ. ಎರಡೂ ಪದಗಳು ಸಭೆಯ ಕುಟುಂಬದ ಅಭಿಮುಖದ ಮೇಲೆ ಗಮನ ಹರಿಸುತ್ತವೆ: ದೇವರ ನಮ್ಮ ತಂದೆ, ಮತ್ತು ನಾವು ಸಹೋದರರು ಹಾಗೂ ಸಹೋದರಿಯರಾಗಿದ್ದೇವೆ. ಕ್ರೈಸ್ತರು ಒಬ್ಬರನ್ನೊಬ್ಬರು ಸಹೋದರರಂತೆ ಪ್ರೀತಿಸಬೇಕೆಂದು ಆಜ್ಞಾಪಿಸಲ್ಪಟ್ಟಿದ್ದಾರೆ. ಇದೆಲ್ಲವನ್ನೂ ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆಯ ಸನ್ನಿವೇಶಕ್ಕೆ ಅನ್ವಯಿಸೋಣ: ಯೆಹೂದ್ಯ ಕ್ರೈಸ್ತರು ಹಾಗೂ ಅನ್ಯಜನಾಂಗದ ಕ್ರೈಸ್ತರು ಪರಸ್ಪರರನ್ನು ಒಂದು *ಕುಟುಂಬ*ದ ಹಾಗೆ ಕಾಣಬೇಕೆಂಬುದು ಪೌಲನ ಬಯಕೆಯಾಗಿತ್ತು. ಕ್ರಿಸ್ತನಲ್ಲಿ ಸಹೋದರರು ಹಾಗೂ ಸಹೋದರರಿಯರಾಗಿ, ಅವರು ಒಬ್ಬರಿಗೊಬ್ಬರು *ನಿಷ್ಠೆಯಿಂದಿರಬೇಕಿತ್ತು*, ಅವರು ಪರಸ್ಪರರಿಗೋಸ್ಕರ *ಅತ್ಯುತ್ತಮವಾದದ್ದನ್ನೇ ಆಕಾಂಕ್ಷಿಸುವವರಾಗಿ* ಇರಬೇಕಿತ್ತು. ಯೇಸು ಹೀಗೆ ಹೇಳಿದನು, "ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು" (ಯೋಹಾನ 13:35).

ಪೌಲನು ಮನಸ್ಸಿನಲ್ಲಿ ಹೊಂದಿದ್ದ ವಿಧವಾದ ಪ್ರೀತಿ ಹಾಗೂ ನಿಷ್ಠೆಗೆ ಒಂದು ಉದಾಹರಣೆಯಾಗಿ, ಆತನು ಹೀಗೆ ಹೇಳುತ್ತಾನೆ, **ಮಾನಮರ್ಯಾದೆ ತೋರಿಸುವದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರಿ**. ಪರಸ್ಪರರೆಡೆಗಿನ ಮಮತೆಯನ್ನು ಪರಸ್ಪರರಿಗೆ ಮರ್ಯಾದೆಯನ್ನು ತೋರಿಸುವ ಮೂಲಕ ವ್ಯಕ್ತಪಡಿಸಬೇಕಾಗಿರುತ್ತದೆ. "ಮಾನಮರ್ಯಾದೆ" ಎಂಬುದು τιμή (*timē*) ಪದದಿಂದ ಬಂದದ್ದಾಗಿದೆ, ಅದು "ಪ್ರಾಥಮಿಕವಾಗಿ 'ಬೆಲೆಕೊಡುವಿಕೆ'" ಆಗಿರುತ್ತದೆ.[48] ಅದು ಪರಸ್ಪರರಿಗಾಗಿ ಗೌರವ ಮತ್ತು ಪ್ರಶಂಸೆ ಹೊಂದಿರುವದಕ್ಕೆ—ಮತ್ತು ಅದನ್ನು ತೋರ್ಪಡಿಸುವದಕ್ಕೆ ಸಂಬಂಧಿಸಿದ್ದಾಗಿದೆ. "ಮುಂದಾಗಿರಿ" ಎಂಬುದು προηγέομαι (*proēgeomai*) ಎಂಬ ಪದದಿಂದ ಬಂದದ್ದು,

ಅದರರ್ಥವು ಇತತರರಿಗೆ ಮರ್ಯಾದೆ ತೋರಿಸುವದರಲ್ಲಿ "ಮುಂದೆ ಹೋಗಿ ಮುಂಚೂಣಿಯಲ್ಲಿರು [ವಹಿಸಿಕೋ]."[49] ಫಿಲಿಪ್ಪಿ 2:3ರಲ್ಲಿ, ಪೌಲನು ಹೀಗೆ ಬರೆಯುತ್ತಾನೆ, "ಪ್ರತಿಯೊಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ."

Barclayನು ಹೀಗೆ ಅಭಿಪ್ರಾಯ ಪಡುತ್ತಾನೆ: "ಸಭೆಯಲ್ಲಿ ಉದ್ಭವವಾಗುವ ಅರ್ಧಕ್ಕಿಂತ ಹೆಚ್ಚಿನ ಸಮಸ್ಯೆಯು ಹಕ್ಕುಗಳು ಹಾಗೂ ಸವಲತ್ತುಗಳು ಹಾಗೂ ಪ್ರತಿಷ್ಠೆಗೆ ಸಂಬಂಧಿಸಿರುತ್ತದೆ. ಒಬ್ಬರಿಗೆ ಅವನ ಅಥವಾ ಅವಳ ತಕ್ಕ ಸ್ಥಾನವನ್ನು ಕೊಟ್ಟಿರುವದಿಲ್ಲ; ಯಾರಾದರೊಬ್ಬರು ನಿರ್ಲಕ್ಷ್ಯಕ್ಕೆ ಒಳಗಾಗಿರುತ್ತಾರೆ ಅಥವಾ ಕೃತಜ್ಞತೆಗೊಳಗಾಗಿರುವದಿಲ್ಲ."[50] ಪೌಲನ ಪ್ರಕಾರವಾಗಿ, ಮರ್ಯಾದೆ ಹೊಂದುವದರ ಬಗ್ಗೆ ನಾವು ಚಿಂತೆಯುಳ್ಳವರಾಗಿರಬಾರದು; ನಾವು ಇತರರಿಗೆ ಮರ್ಯಾದೆ ಸಲ್ಲಿಸುವದರ ಕಡೆಗೆ ಗಮನವನ್ನು ಇಟ್ಟಿರಬೇಕು. Phillips ತರ್ಜುಮೆಯು ಪ್ರೀತಿಯ ಈ ಗುಣವನ್ನು ಹೀಗೆ ವ್ಯಕ್ತಪಡಿಡಸುತ್ತದೆ: "ಇತರ ವ್ಯಕ್ತಿಗೆ ಶ್ಲಾಘ್ಯ ಸಿಕ್ಕುವಂತೆ ಬಿಟ್ಟು ಕೊಡುವದಕ್ಕೆ ಮನಸ್ಸುಳ್ಳವರಾಗಿರುವದು." ಪ್ರೀತಿಯು "ಸ್ವಪ್ರತಿಷ್ಠೆ"ಯಲ್ಲಿ ಸಿಕ್ಕಿಕೊಳ್ಳುವದಿಲ್ಲ, ಆದರೆ "ಮತ್ತೊಬ್ಬರ ಪ್ರತಿಷ್ಠೆ"ಯನ್ನೇ ನೋಡುತ್ತದೆ. ಪ್ರೀತಿಯು ಸ್ವಾರ್ಥರಹಿತವಾದದ್ದು.

**ವಚನ 11.** ಪೌಲನು ಮುಂದೆ ನಮ್ಮ ಪ್ರೀತಿಯು ಹೇಗೆ ಕರ್ತನಿಗೆ ನಾವು ಮಾಡುವ ಸೇವೆಯ ಮೇಲೆ ಪರಿಣಾಮ ಬೀರುತ್ತದೆಂಬದರ ಬಗ್ಗೆ ಮಾತಾಡುತ್ತಾನೆ. ಆತನು ಹೀಗೆ ಹೇಳುತ್ತಾನೆ, **ಜಾಗ್ರತೆ ಬೇಕಾದಲ್ಲಿ ಆಲಸ್ಯವಾಗಿರದೆ**. ಇದು *agapē* ಪ್ರೀತಿಯ ಇನ್ನೊಂದು ಗುಣಸ್ವಭಾವವನ್ನು ಸೂಚಿಸುತ್ತದೆ: ಆಸಕ್ತಿ.

"ಆಲಸ್ಯವಾಗಿರದೆ" ಎಂಬದಕ್ಕಿರುವ ಗ್ರೀಕ್ ಪದವು ὀκνηρός (*oknēros*) ಎಂಬ ಪದದಿಂದ ಬಂದಿರುತ್ತದೆ, ಅದರರ್ಥವು "ನಿಧಾನ, ಸೋಮಾರಿತನ, ಮೈಗಳ್ಳತನ, ನಿಷ್ಕ್ರಿಯವಾಗಿ."[51] ಅದನ್ನು ದೈನಂದಿನ ಪರಿಭಾಷೆಯಲ್ಲಿ ಹೇಳುವದಾದರೆ, *oknēros*ವು *ಮೈಗಳ್ಳ*ನಾಗಿರುವದನ್ನು ಸೂಚಿಸುತ್ತದೆ. ಒಂದು ತಲಾಂತು ಹೊಂದಿ ಅದನ್ನ ಭೂಮಿಯಲ್ಲಿ ಹೂತಿಟ್ಟ ಮನುಷ್ಯನು "*ಮೈಗಳ್ಳನಾದ* ಕೆಟ್ಟ ಆಳು" ಎಂದು ಕರೆಯಲ್ಪಟ್ಟಿದ್ದಾನೆ (ಮತ್ತಾಯ 25:18, 26; ಒತ್ತಿ ಹೇಳಿದ್ದು ನನ್ನದು). "ಮೈಗಳ್ಳನಾದ ಕ್ರೈಸ್ತನು" ಎಂಬ ಬಣ್ಣನೆಯು ಒಂದು ವಿರೋಧೋಕ್ತಿಯಾಗಿರುತ್ತದೆ.

ನಾವು ಮೈಗಳ್ಳರಾಗಿರದೆ, ಜಾಗ್ರತೆಯಾಗಿರತಕ್ಕದ್ದು. "ಜಾಗ್ರತೆ" ಎಂಬದು σπουδή (*spoudē*) ಎಂಬ ಪದದಿಂದ ಬಂದದ್ದು, ಅದರರ್ಥವು "ಆಸಕ್ತಿ, ಹುರುಪು" (ನೋಡಿರಿ 12:8). ಒಬ್ಬ ಕ್ರೈಸ್ತನು ಯಜಮಾನನಿಗೆ ಮಾಡುವ ಸೇವೆಯ ವಿಷಯದಲ್ಲಿ ಸೋಮಾರಿಯಾಗಿರಕೂಡದು, ಬದಲಾಗಿ, ಆತನು ಹುರುಪಿನಿಂದ ತುಂಬಿದವನಾಗಿರತಕ್ಕದ್ದು. NCV ತರ್ಜುಮೆಯಲ್ಲಿ "ಮೈಗಳ್ಳರಾಗಿರಬೇಡಿರಿ ಆದರೆ ಕಠಿಣವಾಗಿ ದುಡಿಯಿರಿ" ಎಂದಿರುತ್ತದೆ. ನಮಗೋಸ್ಕರ ಎಷ್ಟೊಂದನ್ನು ಮಾಡಿರುವ ಕರ್ತನನ್ನು ನಾವು ಪ್ರೀತಿಸುವದಾದರೆ, ನಾವು ಹೇಗೆ ಬೇರೆ ರೀತಿಯಲ್ಲಿ ಇರುವದಕ್ಕೆ ಸಾಧ್ಯ?

ಪೌಲನು ಮುಂದುವರೆಯುತ್ತಾನೆ: **ಆಸಕ್ತಚಿತ್ತರಾಗಿದ್ದು.** "ಆಸಕ್ತಚಿತ್ತ" ಎಂಬುದು ζέω (*zeō*) ಎಂಬದರ ಒಂದು ರೂಪವಾಗಿದೆ, ಅದರರ್ಥವು "ಬಿಸಿಯಾಗಿರುವದು, ಕುದಿಯುವದು."[52] ಈ ಉಪವಾಕ್ಯವನ್ನು Barclayನು "ನಿಮ್ಮ ಆತ್ಮವನ್ನು ಕುದಿಯುವ ಮಟ್ಟದಲ್ಲಿಟ್ಟುಕೊಳ್ಳಿರಿ" ಎಂದು ಅನುವಾದಿಸಿರುತ್ತಾನೆ.[53]

ಇಲ್ಲಿ "spirit" ಚಿಕ್ಕ "s" ನಿಂದ ಆರಂಭಗೊಳ್ಳಬೇಕೋ ಅಥವಾ ದೊಡ್ಡ "S" ನಿಂದ ಆರಂಭಗೊಳ್ಳಬೇಕೋ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿರುತ್ತದೆ. ಕೆಲವು ಆವೃತ್ತಿಗಳಲ್ಲಿ ದೊಡ್ಡ "S" ಇರುತ್ತದೆ (RSV; REB; CEV; AB; Goodspeed). ಉದಾಹರಣೆಗೆ, RSVಯಲ್ಲಿ ಗಮನಾರ್ಹವಾದ ಭಾವಾನುವಾದವಿರುತ್ತದೆ: "ಪವಿತ್ರಾತ್ಮನಿಂದ ಜ್ವಲಿಸುವವರಾಗಿರ್ರಿ." ಈ ನಿರ್ದಿಷ್ಟವಾದ ಅಧ್ಯಾಯದಲ್ಲಿ ಪೌಲನು ಹೆಚ್ಚಾಗಿ ಮುಖ್ಯವಾದ ಒತ್ತನ್ನು ದೇವರು ನಮಗೋಸ್ಕರ ಮಾಡಿರುವದರ ಬಗ್ಗೆ ಕೊಡದೆ ನಾವೇನು ದೇವರಿಗೋಸ್ಕರ ಮಾಡಬೇಕು ಎಂಬದಕ್ಕೆ ಕೊಟ್ಟಿರುವದರಿಂದ, ಇಲ್ಲಿ ಬಹುಶಃ ಚಿಕ್ಕ "s" ಸೂಕ್ತವೆಂದೆಣಿಸುತ್ತದೆ. "ಆಸಕ್ತಚಿತ್ತರಾಗಿದ್ದು" ಎಂಬುದನ್ನು ಹಲವಾರು ತರ್ಜುಮೆಗಳು ವ್ಯಕ್ತಪಡಿಸುವ ವಿವಿಧ ರೀತಿಗಳು ಹೀಗಿರುತ್ತವೆ:

> ನಿಮ್ಮ ಆತ್ಮೀಕ ದಗೆಯನ್ನು ಕಾಪಾಡಿಕೊಳ್ಳಿರಿ (NIV).
> ಆತ್ಮೀಕವಾಗಿ ಉತ್ಸಾಹದಿಂದಿರ್ರಿ (McCord).
> ಆತ್ಮದ ಕಿಚ್ಚು ಉರಿಯುತ್ತಲಿರುವಂತೆ ಬಿಡಿರಿ (Phillips).

ನಾವು ದೇವರಿಗೆ ಮತ್ತು ಪವಿತ್ರಾತ್ಮನಿಗೆ ನಿಟಕವಾಗಿ ನೆಲೆಗೊಳ್ಳದಿದ್ದರೆ, ನಮ್ಮ ಉತ್ಸಾಹ (ದಗೆಯು) ತಣ್ಣಗಾಗಿ ಹೋಗುವದು. ಒಬ್ಬನು ಕುದಿಯುವ ನೀರಿನ ಪಾತ್ರೆಯನ್ನು ಬೆಂಕಿಯಿಂದ ಕೆಳಕ್ಕೆ ಇಳಿಸುವದಾದರೆ, ಅದು ಕುದಿಯುವದನ್ನು ನಿಲ್ಲಿಸಿ ಬಿಡುವದು. ನಾವು ಬೈಬಲ್ ಅಧ್ಯಯನ, ಪ್ರಾರ್ಥನೆ, ಮತ್ತು ಪ್ರೀತಿಯುಳ್ಳ ಹಾಗೂ ಹುಮ್ಮಸ್ಸಿನ ಕ್ರೈಸ್ತರೊಂದಿಗೆ ಸಹವಾಸದ ಮೂಲಕವಾಗಿ ಕರ್ತನಿಗೆ ನಿಕಟದಲ್ಲಿ ಇರುವದಾದರೆ ಮಾತ್ರವೇ ನಮ್ಮ ಪ್ರೀತಿಯು ನೆಲೆಗೊಳ್ಳುವದು.

ಪ್ರೀತಿಯು ಯಾವದರ ಬಗ್ಗೆ ಹುಮ್ಮಸ್ಸುಳ್ಳದ್ದಾಗಿರುತ್ತದೆ? ವಚನವು ಈ ಮಾತುಗಳೊಂದಿಗೆ ಅಂತ್ಯಗೊಳ್ಳುತ್ತದೆ: **ಕರ್ತನ ಸೇವೆ ಮಾಡುವವರಾಗಿರ್ರಿ**. ವ್ಯಕ್ತಿಗಳು ಹಣ ಗಳಿಸುವದರ ಬಗ್ಗೆ, ಶೀಘ್ರದಲ್ಲಿ ಪ್ರವಾಸ ಹೋಗುತ್ತಿರುವ ಬಗ್ಗೆ, ಮತ್ತು ಕ್ರೀಡಾಕೂಟಗಳ ವಿಷಯದಲ್ಲಿ ಸಹ ಉತ್ಸಾಹಭರಿತಗೊಳ್ಳುತ್ತಾರೆ. ಹೇಗೂ, ಬಹುತೇಕರು ಸೇವೆ ಮಾಡುವ ವಿಷಯದಲ್ಲಿ ಅಷ್ಟಾಗಿ ಉತ್ಸಾಹಭರಿತರಾಗುವದಿಲ್ಲ. ಜನರು ದೀರ್ಘ ಗಳಿಗೆಗಳ ತನಕ ಕೆಲಸ ಮಾಡುವ ವಿಷಯದಲ್ಲಿ, ಬೇರೆ ಯಾರೂ ಮಾಡಲಿಚ್ಛಿಸದಂಥ ಕೊಳೆ ಶುಚಿಮಾಡುವ ಕೆಲಸಗಳ ವಿಷಯದಲ್ಲಿ ಉತ್ಸಾಹಭರಿತರಾಗುವದಿಲ್ಲ, ಅಥವಾ ಯಾರಿಂದಲೂ ಗುರುತಿಸಲ್ಪಡದೆ ಹೋಗುವ ವಿಷಯದಲ್ಲಿ ಉತ್ಸಾಹಭರಿತರಾಗುವದಿಲ್ಲ. ಪ್ರೀತಿಯು ಉತ್ಸಾಹಭರಿತವಾಗಿರಬಲ್ಲದು ಯಾಕೆಂದರೆ ಸೇವಯು ಕರ್ತನಿಗೋಸ್ಕರವೇ—ನಮ್ಮನ್ನು ಪ್ರೀತಿಸುವಾತನು, ನಮಗೋಸ್ಕರ ತನ್ನ ಪ್ರಾಣವನ್ನು ಅರ್ಪಿಸಿದಾತನು, ಮತ್ತು ನಮ್ಮನ್ನು ಅನುದಿನವೂ ಬಲಪಡಿಸುವಾತನು—ಆಗಿದೆ.

**ವಚನ 12.** ದುರ್ದಿನಗಳು ಬಂದಾಗ ಹೇಗೆ? (ಅವು ಬಂದೇ ಬರುತ್ತವೆ.) ಎಲ್ಲವೂ ಸುಗಮವಾಗಿ ಸಾಗುತ್ತಿರುವಾಗ ಉತ್ಸಾಹ ಭರಿತರಾಗಿರುವದು ಸುಲಭವಾಗಿರುತ್ತದೆ; ಯಾವದೂ ಸರಿಯಾಗಿ ನಡೆಯದೆ ಇರುವಾಗ ಅದು ಹೆಚ್ಚು ಕಠಿಣವಾಗಿರುವದು. 12ನೇ ವಚನದಲ್ಲಿ, ಪೌಲನು ಸುದಿನಗಳಲ್ಲಿಯೂ ದುರ್ದಿನಗಳಲ್ಲಿಯೂ ಒಂದೇ

ರೀತಿಯಾಗಿರುವಂತೆ ಶಕ್ತಗೊಳಿಸುವಂತಹ *agapē* ಪ್ರೀತಿಯ ಮೂರು ಗುಣಗಳನ್ನು ಪಟ್ಟಿ ಮಾಡುತ್ತಾನೆ.

ಮೊದಲನೆಯದಾಗಿ, ಏನೇ ಸಂಭವಿಸಿದರೂ ಸರಿಯೇ, ಪ್ರೀತಿಯು ನಿರೀಕ್ಷೆಯುಳ್ಳದ್ದು. 12ನೇ ವಚನವು ಹೀಗೆ ಆರಂಭಗೊಳ್ಳುತ್ತದೆ, **ನಿರೀಕ್ಷಿಸುವ ಮಹಾಪದವಿಯನ್ನು ನೆನಸಿ ಉಲ್ಲಾಸವಾಗಿರ್ರಿ.** ಈ ದಿನವು ಕೆಟ್ಟದ್ದಾಗಿದ್ದರೂ, ನಾಳೆ ದಿನವು ಉತ್ತಮವಾಗಿರುವದು ಎಂಬ ನಿರೀಕ್ಷೆಯನ್ನು (ದೃಢವಾದ ಪ್ರತೀಕ್ಷೆಯನ್ನು) ಪ್ರೀತಿಯು ಇಟ್ಟುಕೊಂಡಿರುತ್ತದೆ (4:18; 5:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 8:18ರಲ್ಲಿ, ಪೌಲನು "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ." ಪ್ರೀತಿಯು ಯಾವಾಗಲೂ ಉಲ್ಲಾಸಪಡುವದಕ್ಕೆ ಕಾರಣವನ್ನು ಹೊಂದಿರುತ್ತದೆ. Leon Morris ಪ್ರಕಾರವಾಗಿ,

> ಆದಿ ಕ್ರೈಸ್ತರಿಗೆ ಈ ಲೋಕದಲ್ಲಿ ಉಲ್ಲಾಸಪಡುವದಕ್ಕೆ ಅಥವಾ ನಿರೀಕ್ಷೆಯನ್ನಿಟ್ಟುಕೊಳ್ಳುವದಕ್ಕೆ ಅಷ್ಟೇನೂ ಇರಲಿಲ್ಲ, ಆದರೆ ಅವರು ಕರ್ತನಲ್ಲಿ ಯಾವಾಗಲೂ ಸಂತೋಷಿಸಿದರು (ಫಿಲಿಪ್ಪಿ 4:4) ಮತ್ತು ಅವರಲ್ಲಿದ್ದು "ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವ" ಕ್ರಿಸ್ತನನ್ನು ಅರಿತವರಾಗಿದ್ದು (ಕೊಲೊಸ್ಸೆ 1:27) . . . ನಿರೀಕ್ಷೆಯು [ಕ್ರೈಸ್ತನನ್ನು] ಆತನ ಈಗಿನ ಕಠಿಣ ಪರಿಸ್ಥಿತಿಯಿಂದ ಮೇಲಕ್ಕೆತ್ತುತ್ತದೆ, ಮತ್ತು ಉಲ್ಲಾಸಪಡುವದು ಅನಿವಾರ್ಯವಾದ ಫಲಿತವಾಗಿರುತ್ತದೆ.[54]

ಪ್ರೀತಿಯು ನಿರೀಕ್ಷೆಯಲ್ಲಿ ಉಲ್ಲಾಷಿಸುತ್ತಾದ್ದರಿಂದ, ಅದು ನೀವು **ಉಪದ್ರವದಲ್ಲಿ ಸೈರಣೆಯುಳ್ಳವರಾಗಿರ್ರಿ.** "ಉಪದ್ರವ" ಎಂಬುದರ ಅನುವಾದಿತ ಪದದ (θλῖψις, *thlipsis*) ಮೂಲಭೂತ ಅರ್ಥವು "ಒತ್ತಡ," "ಆತ್ಮಕ್ಕೆ ಭಾರವನ್ನುಂಟು ಮಾಡುವ" ಒಂದು ಒತ್ತಡ[55] (5:3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪೌಲನ ದಿನದಲ್ಲಿ, ಕ್ರೈಸ್ತರು ಸಮಾಜದ ಒಂದು ಚಿಕ್ಕ ಭಾಗವಾಗಿದ್ದರು, ಸರ್ಕಾರಿ ಅಧಿಕಾರಿಗಳ ರಾಜಶಾಸನಗಳಿಗೆ ತುತ್ತಾಗುವವರು ಹಾಗೂ ಧಾರ್ಮಿಕ ವೈರಿಗಳಿಗೆ ಸುಲಭ ಗುರಿಗಳು ಆಗಿರುತ್ತಿದ್ದರು. ಕ್ರೈಸ್ತನಿಗಾದರೋ, ಉಪದ್ರವವು ಜೀವನ ವಾಸ್ತವಾಂಶವಾಗಿತ್ತು (ಅಪೊಸ್ತಲರ ಕೃತ್ಯಗಳು 14:22). ಈ ಉಪದ್ರವದ ಮಧ್ಯದಲ್ಲಿ, ಪ್ರೀತಿಯು ಸೈರಿಸಿಕೊಳ್ಳಲು ಶಕ್ತವಾಗಿತ್ತು. "ಸೈರಣೆಯುಳ್ಳವರಾಗಿರ್ರಿ" ಎಂಬುದು ὑπομένω (*hupomenō*) ಎಂಬ ಪದದಿಂದ ಬಂದದ್ದು, ಅದು ὑπό (*hupo*, "ಅಡಿಯಲ್ಲಿ") ಮತ್ತು μένω (*menō*, "ನೆಲೆಗೊಳ್ಳು") ಎಂಬ ಪದಗಳ ಸಂಯೋಜನೆಯಾಗಿದೆ. ಅದರರ್ಥವು "ಅಡಿಯಲ್ಲಿ ನೆಲೆಗೊಳ್ಳು."[56] ಪ್ರೀತಿಯು ಸೋತು ಹೋಗುವದಿಲ್ಲ; ಜೀವನದ ಒತ್ತಡವು ಸಹಿಸಿಕೊಳ್ಳಲಾಗದಂತೆ ತೋರುವಾಗ ನಮ್ಮ ನಂಬಿಕೆಯನ್ನು ಬಿಟ್ಟುಬಿಡದಂತೆ ಅದು ನಮ್ಮನ್ನು ತಡೆಯುತ್ತದೆ.

ನಿರೀಕ್ಷೆಯಿಂದ ತುಂಬಿರುವದಕ್ಕೆ ಮತ್ತು ಸೈರಣೆಯುಳ್ಳವರಾಗಿರುವದಕ್ಕೆ ಪ್ರಾಮುಖ್ಯವಾಗುವ ಕಾರಣಾಂಶವೆಂದರೆ ಪ್ರಾರ್ಥನೆ. ಪ್ರೀತಿಯು ನಮ್ಮನ್ನು **ಬೇಸರಗೊಳ್ಳದೆ ಪ್ರಾರ್ಥನೆ** ಮಾಡುವಂತೆ ಮಾಡುತ್ತದೆ. "ಬೇಸರಗೊಳ್ಳದೆ" ಎಂಬುದು προσκαρτερέω (*proskartereō*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, ಅದು "ಬಲಗೊಂಡಿರು" ಅಥವಾ "ಸೈರಿಸಿಕೋ" ಎಂಬದಕ್ಕಾಗಿರುವ ಪದವಾಗಿದೆ, πρός (*pros*) ತೀವ್ರಗೊಳಿಸಲ್ಪಟ್ಟ

(καρτερέω, *kartereō*) ಎಂಬ ಪದ.[57] ಅದರರ್ಥವು "ಪಟ್ಟು ಹಿಡಿ, ದೃಢವಾಗಿ ಹಿಡಿದುಕೋ" ಎಂದಾಗಿರುತ್ತದೆ.[58] ಪ್ರಾರ್ಥನೆಯು ಪ್ರೀತಿಗೆ ಒಂದು ಐಚ್ಛಿಕ ವಿಷಯವಾಗಿರುವದಿಲ್ಲ; ಅದು ಒಂದು ಅವಶ್ಯಕತೆಯಾಗಿರುತ್ತದೆ. ಬೇರೊಂದು ಕಡೆಯಲ್ಲಿ, ಪೌಲನು ಹೀಗೆ ಬರೆದನು, "ಎಡೆಬಿಡದೆ ಪ್ರಾರ್ಥನೆಮಾಡಿರಿ" (1 ಥೆಸ 5:17).

**ವಚನ 13.** ವಚನ 10ರಲ್ಲಿ, ಕ್ರೈಸ್ತತು "ಅಣ್ಣತಮ್ಮಂದಿರೆಂದು ಒಬ್ಬರನ್ನೊಬ್ಬರು ಪ್ರೀತಿಸಿರಿ" ಎಂದು ಪೌಲನು ಹೇಳಿದನು. 13ನೇ ವಚನದಲ್ಲಿ, ಸಹೋದರ ಪ್ರೀತಿಯನ್ನು ವ್ಯಕ್ತಪಡಿಸಬಹುದಾದ ಎರಡು ರೀತಿಗಳನ್ನು ಪಟ್ಟಿ ಮಾಡುತ್ತಾನೆ.

ಪೌಲನು ಮೊದಲು ಹೇಳಿದ್ದೇನೆಂದರೆ, **ದೇವಜನರಿಗೆ ಕೊರತೆ ಬಂದಾಗ ಸಹಾಯ ಮಾಡಿರಿ.** "ಸಹಾಯಮಾಡಿರಿ" (κοινωνέω, *koinōneō* ಎಂಬದರಿಂದ ಬಂದದ್ದು) ಎಂಬುದು κοινωνία (*koinōnia*) ಪದಗಳ ಕುಟುಂಬಕ್ಕೆ ಸೇರಿದ್ದಾಗಿದ್ದು ಅದರರ್ಥವು "ಅನ್ಯೋನ್ಯತೆ, ಹುದುವಾಗಿ (ಒಟ್ಟಿಗೆ) ಹಂಚಿಕೊಳ್ಳುವದು." *Koinōneō* ಎಂಬುದರ ಆಲೋಚ ನೆಯು "ಒಟ್ಟಿಗೆ ಹಂಚಿಕೊಳ್ಳುವದು."[59] ಈ ವಾಕ್ಯಭಾಗದಲ್ಲಿ ಕಳಕಳಿಯು ಕಷ್ಟದಲ್ಲಿರುವ "ದೇವಜನರು" (ಜೊತೆ ಕ್ರೈಸ್ತರು; 1:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪ್ರೀತಿಯಲ್ಲಿ ಪ್ರತಿಯೊಬ್ಬರಿಗೋಸ್ಕರ ಕಳಕಳಿಯನ್ನು ಹೊಂದಿರುವದು ಸೇರಿರುತ್ತದೆ, ಆದರೆ ಕ್ರಿಸ್ತನಲ್ಲಿನ ಸಹೋದರರು ಹಾಗೂ ಸಹೋದರಿಯರ ಕುರಿತು ಒಂದು ವಿಶೇಷ ಕಾಳಜಿ ಇರುತ್ತದೆ. "ಆದದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ" (ಗಲಾತ್ಯ 6:10; "ಒತ್ತಿ ಹೇಳಿದ್ದು ನನ್ನದು"). 13ನೇ ವಚನದಲ್ಲಿ NIVಯು "ಕಷ್ಟದಲ್ಲಿರುವ ದೇವಜನರೊಂದಿಗೆ ಹಂಚಿಕೊಳ್ಳಿರಿ" ಎಂದಿರುತ್ತದೆ. ವಾಕ್ಯಭಾಗವು ದೇವಜನರಿಗೆ ಕೊರತೆ ಬಂದಾಗ" ಎಂದು ಹೇಳುತ್ತದೆ, ಹೊರತು "ಆಶೆಗಳು" ಬಂದಾಗ ಎಂಬುದಾಗಿಯಲ್ಲ. "ಕೊರತೆ" ಅಥವಾ "ಕೊರತೆಗಳು" (χρεία, *chreia* ಎಂಬುದರ ಬಹುವಚನ) ಎಂಬುದರಲ್ಲಿ ಊಟ, ಬಟ್ಟೆ, ಮತ್ತು ಆಶ್ರಯಯಂತಹ ಅಗತ್ಯತೆಗಳು—ಮತ್ತು ಪ್ರೀತಿ ಸೇರಿರುತ್ತವೆ.

ಸಭೆಯು ಭೂಲೋಕದ ಸಂಸ್ಥೆಗಳಿಗಿಂತಲೂ ಅನೇಕ ವಿಧಗಳಲ್ಲಿ ವ್ಯತ್ಯಾಸವಾಗಿರುತ್ತದೆ. ಅದು ವ್ಯತ್ಯಾಸವಾಗಿರುವ ಒಂದು ವಿಧವೆಂದರೆ, ನಿಯಮದ ಪ್ರಕಾರ, ತಾವು ಏನು ಅವುಗಳಿಂದ ಪಡೆಯಬಹುದೆಂಬದಕ್ಕಾಗಿ ಭೂಲೋಕದ ಸಂಸ್ಥೆಗಳಲ್ಲಿ ಸೇರಿಕೊಂಡಿರುತ್ತಾರೆ. ಅದಕ್ಕೆ ತದ್ವಿರುದ್ಧವಾಗಿ, ಸಭೆಯಯಾಗಿರುವಂಥ ಪ್ರೀತಿಯುಳ್ಳ ಕ್ರೈಸ್ತರು ತಾವು ಇತರರಿಗೆ ಏನು ಮಾಡಬೇಕೆಂಬದರ ಬಗ್ಗೆ ಕಳಕಳಿಯುಳ್ಳವರಾಗಿರುತ್ತಾರೆ. Luke Hartman ಪ್ರೀತಿಯ ಈ ಗುಣವನ್ನು "ನಮ್ಮನ್ನು ಪಣಕ್ಕಿಟ್ಟು ಮತ್ತೊಬ್ಬರ ಒಳಿತನ್ನು ಅಕಾಂಕ್ಷಿಸುವದು" ಎಂದು ಕರೆಯುತ್ತಾನೆ.[60]

ಕ್ರೈಸ್ತರು "ಅಣ್ಣತಮ್ಮಂದಿರೆಂದು ಒಬ್ಬರನ್ನೊಬ್ಬರು ಪ್ರೀತಿಸುವದಕ್ಕೆ" ನಿಷ್ಠೆಯಿಂದಿರುವ ಎರಡನೆಯ ರೀತಿಯನ್ನು ಪೌಲನು ತಿಳಿಸುತ್ತಾನೆ: **ಅತಿಥಿಸತ್ಕಾರವನ್ನು ಅಭ್ಯಾಸಿಸಿರಿ.** "ಅತಿಥಿ ಸತ್ಕಾರ" ಎಂಬ ಪದವು φιλοξενία (*philoxenia*) ಎಂಬದರಿಂದ ಬಂದದ್ದು, ಅದರರ್ಥವು "ಅಪರಿಚಿತರ ಪ್ರೀತಿ." ಅದು *philos* ("ಪ್ರೀತಿ") ಮತ್ತು ξένος (*xenos*, "ಅಪರಿಚಿತ") ಎಂಬ ಪದಗಳನ್ನೊಳಗೊಂಡಿರುತ್ತದೆ. "ಅತಿಥಿ ಸತ್ಕಾರ" ಎಂದರೆ ಆಪ್ತ ಮಿತ್ರರನ್ನು ಒಬ್ಬನು ಮನೆಯೊಳಗೆ ಸೇರಿಸಿಕೊಂಡು ಸಂತೋಷಕೂಟವನ್ನು ನಡಿಸುವದು

ಎಂದರ್ಥವಲ್ಲ. ಬದಲಾಗಿ, ಅದರರ್ಥವು ಒಬ್ಬನು ತನ್ನ ಮನೆಯನ್ನು ಅಪರಿಚಿತರಿಗಾಗಿ ತೆರೆಯುವದು ಎಂಬುದಾಗಿದೆ.[61] *Philoxenia* ಎಂಬದು ಇಬ್ರಿಯ 13:2ರಲ್ಲಿ ಸಿಕ್ಕುತ್ತದೆ, ಅಲ್ಲಿ ನಮಗೆ "ಅತಿಥಿಸತ್ಕಾರಮಾಡುವದನ್ನು ಮರೆಯಬೇಡಿರಿ" ಎಂಬ ಬುದ್ಧಿವಾದ ಹೇಳಲ್ಪಟ್ಟಿರುತ್ತದೆ.

ಸನ್ನಿವೇಶದಲ್ಲಿ, ನಮಗೆ ಚೆನ್ನಾಗಿ ಪರಿಚಯವಿಲ್ಲದ ಅಥವಾ ಎಂದಿಗೂ ಭೇಟಿಯಾಗಿರದ ದೇವಜನರಿಗೆ (ಕ್ರೈಸ್ತರಿಗೆ) ಅತಿಥಿಸತ್ಕಾರವನ್ನು ಮಾಡುವದರ ಬಗ್ಗೆ ಒತ್ತು ಕೊಡಲಾಗಿರುತ್ತದೆ. Phillips 13ನೇ ವಚನವನ್ನು ಹೀಗೆ ಭಾವಾನುವಾದಗೊಳಿಸುತ್ತದೆ: "ಕೊರತೆಯಲ್ಲಿರುವ ಜೊತೆ ಕ್ರೈಸ್ತರಿಗೆ ಮನಸಾರೆ ಕೊಡಿರಿ, ಕಷ್ಟದಲ್ಲಿರುವವರಿಗೆ ಒಂದು ಹೊತ್ತಿನ ಊಟ ಅಥವಾ ಒಂದು ಹಾಸಿಗೆ ಕೊಡುವದಕ್ಕೆ ಎಂದಿಗೂ ಒಲ್ಲದ ಮನಸ್ಸುಳ್ಳವರಾಗಿರಬಾರದು." ಹೊಸ ಒಡಂಬಡಿಕೆಯ ಕಾಲದಲ್ಲಿ ಅತಿಥಿಸತ್ಕಾರವು ಒಂದು ಅವಶ್ಯಕತೆಯಾಗಿತ್ತು. ವಸತಿ ಗೃಹಗಳು ಕಡಿಮೆಯಾಗಿರುತ್ತಿದ್ದವು ಮತ್ತು ದೂರ ದೂರಕ್ಕೆ ಇರುತ್ತಿದ್ದವು, ಮತ್ತು ಇರುತ್ತಿದ್ದ ವಸತಿ ಗೃಹಗಳೋ ಗಲೀಜು ಮತ್ತು ಅಪಾಯಕರ ಸಹ ಆಗಿರುತ್ತಿದ್ದವು. ಆ ಪರಿಸ್ಥಿತಿಯು ಈ ಪ್ರಪಂಚದ ಬಹುತೇಕ ಭಾಗಗಳಲ್ಲಿ ಬದಲಾಗಿದೆ, ಆದರೆ "ಅತಿಥಿಸತ್ಕಾರ" ಎಂಬ ಪದದ ಸೂಚ್ಯಾರ್ಥದ ಆದರಣೆಯ ಕಳಕಳಿಯ ಅಗತ್ಯತೆಯು ಈಗಲೂ ಇರುತ್ತದೆ. ಅತಿಥಿಸತ್ಕಾರ ಮಾಡುವದು ಹಿರಿಯರಿಗೆ ಇರಬೇಕಾದ ಅರ್ಹತೆಗಳಲ್ಲೊಂದಾಗಿರುತ್ತದೆ (1 ತಿಮೊಥೆ 3:2; ತೀತನು 1:8). ಇಷ್ಟು ವರ್ಷಗಳಿಂದ, ನನ್ನ ಕುಟುಂಬ ಹಾಗೂ ನಾನು ವಿಶ್ವದಾದ್ಯಂಥ ಕ್ರೈಸ್ತರಿಂದ—ನಮ್ಮನ್ನು ಮುಂಚೆ ಎಂದಿಗೂ ಭೇಟಿಯಾಗಿರದ ಕ್ರಿಸ್ತನಲ್ಲಿನ ಸಹೋದರರು ಹಾಗೂ ಸಹೋದರಿಯರು—ಅತಿಥಿಸತ್ಕಾರವನ್ನು ಅನುಭವಿಸಿದ್ದೇವೆ.

ಅತಿಥಿಸತ್ಕಾರವನ್ನು "ಅಭ್ಯಾಸಿಸಿರಿ" ಎಂದು ನಮಗೆ ವಾಕ್ಯಭಾಗವು ಹೇಳುತ್ತದೆ. "ಅಭ್ಯಾಸಿಸಿರಿ" ಎಂಬುದು διώκω (*diōkō*) ಎಂಬ ಪದದಿಂದ ಬರುತ್ತದೆ, ಅದು 9:30, 31 ರಲ್ಲಿ "ಹೊಂದುವದಕ್ಕೆ ಪ್ರಯತ್ನ" ಎಂದು ಅನುವಾದಿಸಲ್ಪಟ್ಟಿದೆ. 12:13ರಲ್ಲಿ, AB ಯು "ಅತಿಥಿಸತ್ಕಾರ್ಯದ ಅಭ್ಯಾಸವನ್ನು ಹಿಡಿಯುವದಕ್ಕೆ ಪ್ರಯತ್ನಿಸುವದು" ಎಂದು ಹೇಳುತ್ತದೆ. *Diōkō* ಎಂಬ ಪದದಲ್ಲಿರುವ ಸೂಚ್ಯಾರ್ಥವು ತೀವ್ರಾಸಕ್ತಿಯಿಂದ ಹಿಂದಟ್ಟಿಕೊಂಡು ಹೋಗುವದು ಎಂದಾಗಿರುತ್ತದೆ.[62] ಪ್ರೀತಿಯು ಅತಿಥಿಸತ್ಕಾರವನ್ನು ತೋರಿಸುವದಕ್ಕಾಗಿ ಅವಕಾಶಗಳಿಗೆ ಕಾಯುವದಿಲ್ಲ; ಅದು ತೀವ್ರಾಸಕ್ತಿಯಿಂದ ಅವಕಾಶಗಳಿಗೋಸ್ಕರ ಹುಡುಕುತ್ತದೆ.

## ವೈರಿಗಳ ವಿಷಯದಲ್ಲಿನ ಧೋರಣೆ (12:14-21)

**14ನಿಮ್ಮನ್ನು ಹಿಂಸಿಸುವವರಿಗೆ ಆಶೀರ್ವಾದಮಾಡಿರಿ; ಶಪಿಸದೆ ಆಶೀರ್ವದಿಸಿರಿ.**
**15ಸಂತೋಷಪಡುವವರ ಸಂಗಡ ಸಂತೋಷಪಡಿರಿ. ಅಳುವವರ ಸಂಗಡ ಅಳಿರಿ. 16ನಿಮ್ಮ**
**ನಿಮ್ಮೊಳಗೆ ಏಕಮನಸ್ಸುಳ್ಳವರಾಗಿರ್ರಿ, ದೊಡ್ಡಸ್ತಿಕೆಯ ಮೇಲೆ ಮನಸ್ಸಿಡದೆ ದೀನರ ಸಂಗಡ**
**ಬಳಿಕೆಯಾಗಿರ್ರಿ. ನಿಮ್ಮನ್ನು ನೀವೇ ಬುದ್ಧಿವಂತರೆಂದು ಎಣಿಸಿಕೊಳ್ಳಬೇಡಿರಿ.**

**17ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ ಎಲ್ಲರ ದೃಷ್ಟಿಯಲ್ಲಿ ಯಾವದು**
**ಗೌರವವಾದದ್ದೋ ಅದನ್ನೇ ಯೋಚಿಸಿ ಸಾಧಿಸಿರಿ. 18ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ**

**ಎಲ್ಲರ ಸಂಗಡ ಸಮಾಧಾನದಿಂದಿರಿ. [19]ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ ಶಿಕ್ಷಿಸುವದನ್ನು ದೇವರಿಗೆ ಬಿಡಿರಿ. ಯಾಕೆಂದರೆ ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆಂಬುದಾಗಿ ಬರೆದದೆ. [20]ಹಾಗಾದರೆ ನಿನ್ನ ವೈರಿ ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು; ಬಾಯಾರಿದ್ದರೆ ಕುಡಿಯುವದಕ್ಕೆ ಕೊಡು. ಹೀಗೆ ಮಾಡುವದರಿಂದ ಅವನ ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಟ್ಟಂತಾಗುವದು. [21]ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು.**

ಪೌಲನು ರೂಪಾಂತರಗೊಂಡ ಜೀವಿತದ ಬಗ್ಗೆ ಯೋಚಿಸಿದಾಗ (12:1, 2), ಆತನು ಪರಸ್ಪರರ ಕಡೆಗೆ ರೋಮಾಪುರದ ಕ್ರೈಸ್ತರು ಹೊಂದಿರಬೇಕಾದ ಧೋರಣೆಯ ಕಡೆಯಿಂದ (12:3-13) ಅವರ ವೈರಿಗಳ ವಿಷಯದಲ್ಲಿ ಹೊಂದಿರಬೇಕಾದ ಧೋರಣೆಯ (12:14-21) ವಿಷಯಕ್ಕೆ ತಿರುಗಿಕೊಳ್ಳುತ್ತಾನೆ. ಈ ವಿಭಾಗದಲ್ಲಿ ವೈರಿಗಳು ಮುಖ್ಯ ಗಮನದಲ್ಲಿರುತ್ತಾರಾದರೂ (12:14, 17-21), ಅದರಲ್ಲಿ ಜೊತೆ ಕ್ರೈಸ್ತರ ವಿಷಯದಲ್ಲಿ ಸಹ ಬುದ್ಧಿವಾದಗಳನ್ನು (12:15, 16) ಮತ್ತು "ಎಲ್ಲರ" ವಿಷಯದಲ್ಲಿರಬೇಕಾದ ಧೋರಣೆ ಬಗ್ಗೆ ಸಹ ಒಳಗೊಂಡಿರುತ್ತದೆ (12:17, 18). ಈ ವಿಭಾಗದಲ್ಲಿ ಬಣ್ಣಿಸಲಾಗಿರುವ ವಿಧದ ಜೀವನವು ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟಿರುವದರ *ಸಹಜವಾದ ಫಲಿತವಾಗಿರತಕ್ಕದ್ದು* ಎಂಬುದನ್ನು ತನ್ನ ವಾಚಕರು ಅರ್ಥಮಾಡಿಕೊಳ್ಳಬೇಕು ಎಂಬುದು ಪೌಲನ ಬಯಕೆಯಾಗಿತ್ತು.

**ವಚನ 14.** ಯೇಸು ತನ್ನ ವೈಯಕ್ತಿಕ ಸೇವೆಯ ವೇಳೆಯಲ್ಲಿ, ಲೋಕವು ತನ್ನ ಹಿಂಬಾಲಕರನ್ನು ಹೇಗೆ ನಡಿಸಿಕೊಳ್ಳುವದು ಎಂಬದರ ಬಗ್ಗೆ ಕೆಲವೊಂದು ಬೆಚ್ಚಿಬೀಳಿಸುವಂಥ ಹೇಳಿಕೆಗಳನ್ನು ನೀಡಿದನು. ಆತನು ತನ್ನ ಶಿಷ್ಯರಿಗೆ ಜನರು "ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ" ಹೊರಿಸುವರು ಎಂದು ಹೇಳಿದನು (ಮತ್ತಾಯ 5:11). ಪುನಃ, ಆತನು ಹೇಳಿದ್ದೇನೆಂದರೆ, ಜನರು "ನಿಮ್ಮನ್ನು ಹಗೆಮಾಡಿ ನಿಮಗೆ ಬಹಿಷ್ಕಾರಹಾಕಿ ನಿಂದಿಸಿ ನಿಮ್ಮ ಹೆಸರನ್ನು ಕೆಟ್ಟದೆಂದು ತೆಗೆದುಹಾಕುವರು" (ಲೂಕ 6:22). ಒಬ್ಬ ಕ್ರೈಸ್ತನು ಆ ಪರಿಸ್ಥಿತಿಗಳನ್ನು ಹೇಗೆ ನಿಭಾಯಿಸಬೇಕು? ಪೌಲನು ಹೇಳಿದ್ದೇನೆಂದರೆ, ದೇವರ ಒಬ್ಬ ಮಗನು ಆ ರೀತಿಯಲ್ಲಿ ನಡಿಸಿಕೊಳ್ಳಲ್ಪಟ್ಟಾಗ, ಆತನು ಕೃಪಾವಂತನಾಗಿರಬೇಕು: **ನಿಮ್ಮನ್ನು ಹಿಂಸಿಸುವವರಿಗೆ ಆಶೀರ್ವಾದ ಮಾಡಿರಿ;[63] ಶಪಿಸದೆ ಆಶೀರ್ವದಿಸಿರಿ.** ಆ ಮಾತುಗಳು 17ರಿಂದ 21 ವಚನಗಳಲ್ಲಿ ಸವಿಸ್ತಾರವಾಗಿ ವಿವರಿಸಲ್ಪಡಲಿರುವ ಒಂದು ಚರ್ಚೆಯಾಂಶವನ್ನು ಪರಿಚಯಿಸುತ್ತದೆ.

"ಆಶೀರ್ವಾದಮಾಡಿರಿ" ಎಂಬುದು εὐλογέω (*eulogeō*) ಎಂಬ ಪದದಿಂದ ಬಂದದ್ದು, "eulogy" ಎಂಬ ಪದವು ಬರುವಂಥ ಪದದ ಕ್ರಿಯಾಪದರೂಪ ಆಗಿರುತ್ತದೆ. ಅದು εὐ (*eu,* "ಒಳ್ಳೆಯ" ಅಥವಾ "ಉತ್ತಮ") ಎಂಬುದನ್ನು λόγος (*logos,* "ವಾಕ್ಯ") ಎಂಬದರೊಂದಿಗೆ ಸಂಯೋಜಿಸುವದಾಗಿದೆ ಮತ್ತು ಅಕ್ಷರಶಃ "ಒಂದು ಒಳ್ಳೇ ವಾಕ್ಯ" ಎಂದರ್ಥವನ್ನು ನೀಡುತ್ತದೆ.[64] ಒಬ್ಬರಿಗೆ "eulogize" ಮಾಡು ಎಂದರೆ ಒಬ್ಬರು ಆತನ ಪರವಾಗಿ "ಒಳ್ಳೇ ಮಾತೊಂದನ್ನು ಹೇಳುವದು." ಈ ವಿಷಯದಲ್ಲಿ ನೋಡುವದಾದರೆ, *eulogeō* ಯು ನಮ್ಮನ್ನು ಕೆಟ್ಟದ್ದಾಗಿ ನಡಿಸಿಕೊಳ್ಳುವವರ ಪರವಾಗಿ ದೇವರ ಮುಂದೆ "ಒಂದು ಒಳ್ಳೇ

ಮಾತು" ಹೇಳುವದಕ್ಕೆ ಸಂಬಂಧಿಸಿದ್ದಾಗಿದೆ. "ಶಪಿಸದೆ" ಎಂಬುದು καταράομαι (*kataraomai*) ಎಂಬ ಪದದಿಂದ ಬಂದಿರುತ್ತದೆ, ಅದರಲ್ಲಿ ἀρά (*ara*, "ಶಪಿಸುವಿಕೆ") ಎಂಬುದು κατά (*kata*) ಎಂಬ ಪದದಿಂದ ತೀವ್ರಗೊಳಿಸಲ್ಪಡುತ್ತದೆ. ಈ ಪದವು "ಶಾಪದ ನುಡಿಗಳನ್ನು" ಮಾತಾಡುವದು ಎಂಬುದನ್ನು ಸೂಚಿಸುವದಿಲ್ಲ[65] ಆದರೆ ಬದಲಾಗಿ ಅದು "ಆಶೀರ್ವದಿಸು" ಎಂಬುದರ ವಿರುದ್ಧವಾದದ್ದು: ಅದು ನಮ್ಮನ್ನು ಹಿಂಸಿಸುವವರ ಮೇಲೆ ದೇವರಿಂದ ಶಾಪಗಳು ಬರುವಂತೆ ಮೊರೆಯಿಡುವದನ್ನು ಸೂಚಿಸುತ್ತದೆ. CEV ಯು 14ನೇ ವಚನವನ್ನು ಹೀಗೆ ಅನುವಾದಿಸುತ್ತದೆ: "ನಿಮ್ಮನ್ನು ಕೆಟ್ಟದಾಗಿ ನಡೆಸಿಕೊಳ್ಳುವವರನ್ನು ಆಶೀರ್ವದಿಸುವಂತೆ ದೇವರನ್ನು ಬೇಡಿಕೊಳ್ಳಿರಿ. ಅವರನ್ನು ಶಪಿಸದೆ ಆಶೀರ್ವದಿಸುವಂತೆ ಆತನನ್ನು ಕೇಳಿಕೊಳ್ಳಿರಿ." ಈ ವಚನವು ಯೇಸುವಿನ ಉಪದೇಶವನ್ನು ಪ್ರತಿಧ್ವನಿಸುತ್ತದೆ: "ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದ ಮಾಡಿರಿ; ನಿಮ್ಮನ್ನು ಬಯ್ಯುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ" (ಲೂಕ 6:28; ನೋಡಿರಿ ಮತ್ತಾಯ 5:44).

ಯಾರಾದರೊಬ್ಬರು ಆಕ್ಷೇಪಣೆ ಮಾಡಬಹುದು: "ಆದರೆ ಅದು ಅಸಾಧ್ಯವಾದದ್ದು!" ಅದು *ಕಷ್ಟಕರ*ವಾಗಿದೆ, ಆದರೆ *ಅಸಾಧ್ಯ*ವಾದದ್ದಲ್ಲ. ಯೇಸು ಶಿಲುಬೆಯ ಮೇಲೆ "ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು" ಎಂದು ಹೇಳಿದಾಗ ಅದನ್ನೇ ಮಾಡಿದನು (ಲೂಕ 23:34). ಸ್ತೇಫನನು ಸಹ ಮಾಡಿದ್ದು ಅದನ್ನೇ ಆಗಿದೆ. ಆತನಿಗೆ ಕಲ್ಲೇಸೆದು ಕೊಲ್ಲುತ್ತಿರುವಾಗಲೂ, ಆತನು "ಕರ್ತನೇ, ಈ ಪಾಪಗಳನ್ನು ಅವರ ಮೇಲೆ ಹೊರಿಸಬೇಡ" ಎಂದು ಪ್ರಾರ್ಥಿಸಿದನು (ಅಪೊಸ್ತಲರ ಕೃತ್ಯಗಳು 7:60). ಪೌಲನು ಸಹ ಅದನ್ನೇ ಮಾಡಿದನು. ಆತನು ಕೊರಿಂಥದವರಿಗೆ ಹೀಗೆ ಹೇಳಿದನು, "ಬೈಸಿಕೊಂಡು ಹರಸುತ್ತೇವೆ" (1 ಕೊರಿಂಥ 4:12).

14ನೇ ವಚನವು ಪ್ರಾಥಮಿಕವಾಗಿ ದೇವರ ಒಬ್ಬ ಮಗುವಾಗಿ ಅನುಭವಿಸುವ ಹಿಂಸೆಯ ಬಗ್ಗೆ ಮುಖ್ಯ ಗಮನವನ್ನು ಕೊಡುತ್ತದೆ, ಆದರೆ ವಚನವನ್ನು ಕೆಟ್ಟದಾಗಿ ನಡೆಸಿಕೊಳ್ಳಲ್ಪಡುವ ಇತರೆ ಪರಿಸ್ಥಿತಿಗಳಿಗೆ ಸಹ ಅನ್ವಯಿಸಬಹುದು. ಕೆಲವು ಸಾರಿ ಕ್ರೈಸ್ತರು ಇತತರಿಗೆ ಜನರು ಯಾವಾಗಲೂ ದಯೆಯಿಂದ ತೋರಿಸದಂತಹ ಲೋಕದಲ್ಲಿ ಜೀವಿಸುತ್ತಾರೆಂಬ ಕಾರಣಕ್ಕಾಗಿಯೇ ಕೆಟ್ಟದಾಗಿ ನಡೆಸಿಕೊಳ್ಳಲ್ಪಡುತ್ತಾರೆ. ಅಂತಹ ಪರಿಸ್ಥಿತಿಗಳಲ್ಲಿ, ವಿಶ್ವಾಸಿಗಳೇತರರು ಶಪಿಸುತ್ತಾರೆ—ಆದರೆ ಒಬ್ಬ ಕ್ರೈಸ್ತನು ಆಶೀರ್ವದಿಸುತ್ತಾನೆ. ಪೀಡನೆ ಬರುವಾಗ (ಅದು ಯಾವ ಮೂಲದಿಂದಲಾದರೂ ಬರಲಿ), ಒಬ್ಬ ಕ್ರೈಸ್ತನು ಕೃಪಾವಂತನಾಗಿ ವರ್ತಿಸಬೇಕು.

**ವಚನ 15.** ಕ್ರಿಸ್ತನ ಹಿಂಬಾಲಕನಿಗಿರುವ ಇನ್ನೊಂದು ಗುಣವೆಂದರೆ *ಸಹಾನುಭೂತಿಯಿಂದಿರುವದು.* ಪೌಲನು ಹೀಗೆ ಬರೆಯುತ್ತಾನೆ, **ಸಂತೋಷಪಡುವವರ ಸಂಗಡ ಸಂತೋಷ ಪಡಿರಿ, ಅಳುವವರ ಸಂಗಡ ಅಳಿರಿ.** ಈ ಬುದ್ಧಿವಾದವು ಜೊತೆ ಕ್ರೈಸ್ತರೊಂದಿಗಿನ ನಮ್ಮ ಸಂಬಂಧಕ್ಕೆ ವಿಶೇಷವಾದ ಅನ್ವಯಿಕೆಯನ್ನು ಹೊಂದಿದೆ. ರೋಮಾ 12ರ ಮೊದಲ ಭಾಗದಲ್ಲಿ, ಪೌಲನು ನಾವೆಲ್ಲರೂ "ಒಂದೇ [ಆತ್ಮೀಕ] ದೇಹ [ಸಭೆ] ವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ" ಎಂದು ಹೇಳಿದನು (12:4, 5). ಕೊರಿಂಥದವರಿಗೆ ಬರೆಯುವಾಗ, ಆತನು ಹೀಗೆ ಹೇಳುತ್ತಾನೆ, "ಒಂದು ಅಂಗದಕ್ಕೆ ನೋವಾದರೆ ಎಲ್ಲಾ ಅಂಗಗಳಿಗೂ ನೋವಾಗುತ್ತದೆ; ಒಂದು ಅಂಗಕ್ಕೆ ಮರ್ಯಾದೆ ಬಂದರೆ

ಎಲ್ಲಾ ಅಂಗಗಳಿಗೂ ಸಂತೋಷವಾಗುತ್ತದೆ" (1 ಕೊರಿಂಥ 12:26).

15ನೇ ವಚನವು ಸಭೆಯ ಸದಸ್ಯರ ನಡುವಿನ ನಿಕಟತೆಯ ಕುರಿತ ಪೂರ್ವಕಲ್ಪನೆ ಹೊಂದಿದೆ. ಕೇವಲ ಪ್ರತಿ ವಾರ ಇತರ ಕ್ರೈಸ್ತರ ಸಂಗಡ ಕರ್ತನ ಭೋಜನದಲ್ಲಿ ಭಾಗಿಯಾಗುವ ಮೂಲಕ ಈ ನಿಕಟತೆಯನ್ನು ಸಾಧಿಸಿಕೊಳ್ಳಲಾಗದು. ಪ್ರತಿ ವಾರದಲ್ಲಿ ಹಲವಾರು ಬಾರಿ ಆರಾಧನೆಯಲ್ಲಿ ಪರಸ್ಪರ ಸುಮ್ಮನೇ ಭೇಟಿಯಾಗುವದರಿಂದ ಈ ನಿಕಟತೆಯು ಉಂಟಾಗುವದಿಲ್ಲ. ಅದು ಬೈಬಲ್ ತರಗತಿಯ ಮತ್ತು ಆರಾಧನೆಯ ಮುಂಚೆ ಹಾಗೂ ನಂತರದಲ್ಲಿ ಒಬ್ಬರಿಗೊಬ್ಬರು ಮಾತಾಡಿಕೊಳ್ಳುವ ಮೂಲಕ ಸಹ ಬರುವದಿಲ್ಲ. ಇವೆಲ್ಲವೂ ಪ್ರಾಮುಖ್ಯವೇ, ಆದರೆ 15ನೇ ವಚನವು ನಮ್ಮನ್ನು ಹೆಚ್ಚಿನದಕ್ಕೆ ಕರೆಕೊಡುತ್ತದೆ. ಅದಕ್ಕೆ ಅಗತ್ಯವಿರುವದೇನೆಂದರೆ ಕ್ರೈಸ್ತರು—ಸಹಜವಾಗಿ ಸಹವಾಸಪ್ರಿಯರಲ್ಲದ ಜನರು ಸಹ—ಒಬ್ಬರೊಬ್ಬರ ಜೀವಿತಗಳಲ್ಲಿ ಆಳವಾಗಿ ತೊಡಗಿಸಿಕೊಳ್ಳಬೇಕು. ನಾವು ಜೀವನದಲ್ಲಿ ನಗುವನ್ನು ಹಾಗೂ ಕಣ್ಣೀರನ್ನು ತರುವಂಥ ಆ ಘಟನೆಗಳಲ್ಲಿ—ಉದಾಹರಣೆಗೆ, ಜನನಗಳು, ವಿವಾಹಗಳು, ಮತ್ತು ಶವಸಂಸ್ಕಾರಗಳು—ಪಾಲ್ಗೊಳ್ಳುವಾಗಲೇ ಪರಸ್ಪರರಿಗೆ ಆಪ್ತವಾಗಿ ಬೆಳೆಯುತ್ತೇವೆ.

ಈ ರೀತಿಯ ನಿಕಟತೆಯನ್ನು ಕ್ರಿಸ್ತನ ದೇಹದಲ್ಲಿ ನಾವು ಹೇಗೆ ವಾಸ್ತವಿಕಗೊಳಿಸಬಲ್ಲೆವು? ಮುಖ್ಯ ಪದಗಳೆಂದರೆ "ಕಳಕಳಿ" ಮತ್ತು "ಹಂಚಿಕೊಳ್ಳುವಿಕೆ." ನಾವು ಕ್ರಿಸ್ತನಲ್ಲಿ ನಮ್ಮ ಸಹೋದರರ ಹಾಗೂ ಸಹೋದರಿಯರ ಜೀವಿತಗಳಲ್ಲಿ ಏನು ಸಂಭವಿಸುತ್ತದೆಂಬ ಬಗ್ಗೆ *ಕಳಕಳಿ*ಯುಳ್ಳವರಾಗಿರಬೇಕಾದ ಅಗತ್ಯವಿರುತ್ತದೆ. ನಂತರ ನಮ್ಮ ಜೀವಿತಗಳಲ್ಲಿ ಬರುವಂತ ಒಳ್ಳೇದು ಮತ್ತು ಕೆಟ್ಟದ್ದನ್ನು ಜೊತೆ ಕ್ರೈಸ್ತರೊಂದಿಗೆ ಹಂಚಿಕೊಳ್ಳುವ ಅಗತ್ಯವಿರುತ್ತದೆ.

15ನೇ ವಚನವು ಪ್ರಾಥಮಿಕವಾಗಿ ದೇವರ ಮಕ್ಕಳ ಸಂಬಂಧವನ್ನು ಸೂಚಿಸುತ್ತದೆಂದು ಸನ್ನಿವೇಶವು ತೋರ್ಪಡಿಸುತ್ತಾದರೂ, ಈ ವಾಕ್ಯಭಾಗಕ್ಕೆ ವಿಸ್ತಾರವಾದ ಅನ್ವಯಿಕೆ ಇರಬಲ್ಲದಾಗಿದೆ. ಒಬ್ಬ ಕ್ರೈಸ್ತನು ತನ್ನ ಸಂಪರ್ಕಕ್ಕೆ ಬರುವಂಥವರ, ತಾನು ಒಳ್ಳೇದಕ್ಕಾಗಿ ಪ್ರಭಾವವನ್ನು ಬೀರಬೇಕೆಂದು ಇಚ್ಛಿಸುವ ಎಲ್ಲರ ಜೀವಿತಗಳಲ್ಲಿ ಆಸಕ್ತಿಯನ್ನು ಹೊಂದಿದವನಾಗಿರಬೇಕು. ಆತನು ಹೀಗೆ ಮಾಡುತ್ತಾನೆ ಯಾಕೆಂದರೆ ಅದು ಸರಿಯಾದ ಕಾರ್ಯವಾಗಿರುತ್ತದೆ, ಆದರೆ ಕೆಲವು ಸಾರಿ ಅದಕ್ಕೊಂದು ಹೆಚ್ಚುವರಿ ಪ್ರಯೋಜನವಿರುತ್ತದೆ: ಜನರು ತಮ್ಮ ಜೀವಿತಗಳಲ್ಲಿ ನಾಟಕೀಯ ಕ್ಷಣಗಳಲ್ಲಿ—ಮುಗುಳ್ನಗು ಅಥವಾ ಕಣ್ಣೀರು ತರುವಂಥ ಆ ಘಟನೆಗಳು—ಸುವಾರ್ತೆಗೆ ಅತಿ ಹೆಚ್ಚು ಕಿವಿಗೊಡುವವರಾಗಿರುತ್ತಾರೆ.

15ನೇ ವಚನದಲ್ಲಿ ಪೌಲನು ನೀಡುವ ಬೋಧನೆಯು ವೈಯಕ್ತಿಕವಾಗಿ ಬಾಧೆಯನ್ನನುಭವಿಸುವ ಸಂದರ್ಭಗಳಲ್ಲಿ ಅನುಸರಿಸುವದಕ್ಕೆ ಇನ್ನಷ್ಟು ಸವಾಲಿನಿಂದ ಕೂಡಿರುತ್ತದೆ. ನಿಮಗೆ ಕೇವಲ ಕೆಟ್ಟ ಸಂಗತಿಗಳು ಸಂಭವಿಸುತ್ತಿವೆಯೆಂದು ತೋರುತ್ತಿರುವ ವೇಳೆಯಲ್ಲಿ ಮತ್ತೊಬ್ಬರಿಗೆ ಏನಾದರೂ ಒಳ್ಳೇದು ಸಂಭವಿಸುವಾಗ ಹೇಗಿರುತ್ತದೆ? ನೀವು ಅವರ ಸಂಗಡ ಸಂತೋಷಪಡಲು ಶಕ್ತರೋ? ಒಬ್ಬನು ನಿಮ್ಮನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದರೆ, ಮತ್ತು ಏಕಾಏಕಿಯಾಗಿ ಅವನ ಜೀವಿತವು ದುರಂತದಿಂದ ತುಂಬಿಬಿಟ್ಟರೆ ಹೇಗಿರುತ್ತದೆ? ನೀವು ಅವನ ಸಂಗಡ ಅಳುವದಕ್ಕೆ ಶಕ್ತರೋ, ಅಥವಾ "ಅವನಿಗೆ ತಕ್ಕ ಶಿಕ್ಷೆಯೇ ಆಗಿದೆ" ಎಂದೆನ್ನುವಿರೋ"? ಒಬ್ಬರು ಇಲ್ಲಿ ಆಕ್ಷೇಪಣೆಯೆತ್ತಿ, "ನೀನು

ಬಣ್ಣಿಸಿರುವಂಥ ಪರಿಸ್ಥಿತಿಗಳಲ್ಲಿ ಸಂತೋಷಪಡುವದು ಅಥವಾ ದುಃಖಪಡುವದು ಅಸ್ವಭಾವಿಕವಾದದ್ದು" ಎಂದು ಹೇಳಬಹುದು. ಅದು ಸತ್ಯವೇ. ಅದು ಅಸ್ವಾಭಾವಿಕವೇ, ಆದರೆ ಕ್ರೈಸ್ತರು ದೇವರ ಸಹಾಯದೊಂದಿಗೆ ಶರೀರಭಾವದ ಸ್ವಾಭಾವಿಕ ಪ್ರವೃತ್ತಿಗಳನ್ನು ಮೀರಿ ನಿಲ್ಲಬೇಕೆಂದು ಸವಾಲುಗೊಳಿಸಲ್ಪಟ್ಟಿರುತ್ತಾರೆ.

ಒಬ್ಬ ಕ್ರೈಸ್ತನು ಯಾರೊಂದಿಗೇ ಆಗಲಿ ಹಾಡುವದಕ್ಕೂ ಬಾಧೆಯನ್ನನುಭವಿಸುವದಕ್ಕೂ ಶಕ್ತನಾಗಿರುತ್ತಾನೆ. ಒಬ್ಬ ಕ್ರೈಸ್ತನು ಸಹಾನುಭೂತಿಯುಳ್ಳವನು.

**ವಚನ 16.** ತಮಗೆ ಬೇರೆಯವರಿಗಿಂತ ಹೆಚ್ಚು ಸಂಪತ್ತು ಅಥವಾ ಅಧಿಕಾರವಿದೆ ಎಂಬ ಕಾರಣಕ್ಕೆ, ಹೆಚ್ಚು ಪ್ರತಿಭೆಯುಳ್ಳವರು ಅಥವಾ ಹೆಚ್ಚು ಉನ್ನತವಾದ ವಿದ್ಯಾಭ್ಯಾಸವುಳ್ಳವರು, ಅಥವಾ ಇನ್ನು ಎಷ್ಟೋ ಕಾರಣಗಳಿಗಾಗಿ ತಮ್ಮನ್ನು ಮತ್ತೊಬ್ಬರಿಗಿಂತ ಉತ್ತಮರೆಂದು ಭಾವಿಸಿಕೊಂಡಿದ್ದವರ ಕುರಿತಾಗಿ ಪೌಲನು ಮಾತಾಡುತ್ತಾನೆ. ನಾವು ಈ ವಾಕ್ಯಭಾಗವನ್ನು ತಾವು ದೀರ್ಘಕಾಲದಿಂದ ಕ್ರೈಸ್ತರಾಗಿದ್ದೇವೆ, ಬೈಬಲ್ ಬಗ್ಗೆ ಹೆಚ್ಚಾದ ಜ್ಞಾನವನ್ನು ಹೊಂದಿದ್ದೇವೆ, ಸಭೆಯ ಕಾರ್ಯಗಳಲ್ಲಿ ಹೆಚ್ಚು ಸಕ್ರಿಯವಾಗಿದ್ದೇವೆ, ಹೆಚ್ಚು ಭಕ್ತಿಜೀವಿತಗಳನ್ನು ಹೊಂದಿದ್ದೇವೆ ಹೀಗೆ ಇತ್ಯಾದಿ ಕಾರಣಗಳಿಗಾಗಿ ತಮ್ಮನ್ನು ಮತ್ತೊಬ್ಬರಿಗಿಂತ ಉತ್ತಮರೆಂದು ಭಾವಿಸಿಕೊಳ್ಳುವವರಿಗೆ ಸಹ ಅನ್ವಯಿಸಬಹುದು.

ಅಪೊಸ್ತಲನು **ನಿಮ್ಮನಿಮ್ಮೊಳಗೆ ಏಕಮನಸ್ಸುಳ್ಳವರಾಗಿರ್ರಿ** ಎಂದು ಹೇಳುತ್ತಾನೆ. ಬೇರೊಂದೆಡೆಯಲ್ಲಿ, "ಒಂದೇ ಮನಸ್ಸೂ" ಹೊಂದಿರಬೇಕೆಂದು ನೀಡುವ ಕರೆಯು ನಾವು ವಿಶ್ವಾಸಿಸುವ ಮತ್ತು ಬೋಧಿಸುವ ಸಂಗತಿಯಲ್ಲಿ ಒಗ್ಗಟ್ಟಾಗಿರುವದನ್ನು ಸೂಚಿಸುತ್ತದೆ (1 ಕೊರಿಂಥ 1:10). ಇಲ್ಲಿ, ಇದು *"ಎಲ್ಲರ ವಿಷಯದಲ್ಲಿ ಸಮಾನವಾಗಿ ನಡೆದುಕೊಳ್ಳಿರಿ; ಪಕ್ಷಪಾತವನ್ನು ಮಾಡಬೇಡಿರಿ"* ಎಂಬ ಅರ್ಥವನ್ನು ಕೊಡುವಂತೆ ಕಾಣುತ್ತದೆ. JB ತರ್ಜುಮೆಯಲ್ಲಿ ಹೀಗಿರುತ್ತದೆ "ಎಲ್ಲರನ್ನೂ ಸಮಾನ ದಯೆಯಿಂದ ನಡೆಸಿಕೊಳ್ಳಿರಿ."

ವಾಕ್ಯಭಾಗವು ಮುಂದುವರೆಯುತ್ತದೆ, **ದೊಡ್ಡಸ್ತಿಕೆಯ ಮೇಲೆ ಮನಸ್ಸಿಡದೆ ದೀನರ ಸಂಗಡ ಬಳಿಕೆಯಾಗಿರ್ರಿ.** "ದೊಡ್ಡಸ್ತಿಕೆ" ಎಂಬುದು "ಉನ್ನತ" (ὑψηλός, *hupsēlos*) ಎಂಬರ್ಥವನ್ನು ನೀಡುವ ಗುಣವಾಚಕದ ಪದದಿಂದ ಅನುವಾದಿಸಲ್ಪಟ್ಟಿದೆ. ಗ್ರೀಕ್ ಪದಗುಚ್ಛಕ್ಕೆ ಅಕ್ಷರಶಃ ಅನುವಾದ ನೀಡುವದಾದರೆ ಅದು "ಉನ್ನತದ ಮೇಲೆ [ಸಂಗತಿಗಳನ್ನು] ಮನಸ್ಸಿಡಬೇಡ" ಎಂದಾಗುತ್ತದೆ (ನೋಡಿರಿ KJV), ಅಲ್ಲಿ "ಸಂಗತಿಗಳು" ಎಂಬ ಪದ ಹೆಚ್ಚುವರಿಯಾಗಿ ಸೇರಿಸಲ್ಪಟ್ಟಿರುತ್ತದೆ. ಕೆಲವರು ಅಲ್ಲಿ "ಜನರು" ಎಂಬ ಪದವನ್ನು ಒದಗಿಸಬೇಕೆಂದು ಭಾವಿಸುತ್ತಾರೆ. LB ಯ ಭಾವಾನುವಾದವು ಹೀಗಿರುತ್ತದೆ "ಪ್ರಾಮುಖ್ಯವಾದ ಜನರ ಕೃಪಾಕಟಾಕ್ಷಕ್ಕೆ ಒಳಗಾಘಬೇಕೆಂದು ಪ್ರಯತ್ನಿಸಬೇಡಿರಿ, ಆದರೆ ಸಾಧಾರಣವಾದ ಜನರ ಸಹವಾಸದಲ್ಲಿ ಆನಂದಿಸಿರಿ." ಪೌಲನ ದಿನದಲ್ಲಿ ಧರ್ಮಾಂಧತೆಯು ಇತ್ತು, ಈ ದಿನಗಳಲ್ಲಿ ಸಹ ಅದು ಇರುತ್ತದೆ. ಒಂದು ಸಭೆಯ ಕೂಟದಲ್ಲಿ ಒಬ್ಬ ಐಶ್ವರ್ಯವಂತ ಹಾಗೂ ಬಡವನನ್ನು ಹೇಗೆ ವ್ಯತ್ಯಾಸವಾಗಿ ನಡೆಸಿಕೊಳ್ಳಲಾಗುತ್ತದೆಂಬದನ್ನು ಯಾಕೋಬನು ಬಣ್ಣಿಸುತ್ತಾನೆ (ನೋಡಿರಿ ಯಾಕೋಬ 2:1-9).

ಪ್ರಥಮ ಶತಮಾನದಲ್ಲಿದ್ದ ಬಹುಪಾಲು ಸಭೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಡ ಸದಸ್ಯರಿದ್ದರು (1 ಕೊರಿಂಥ 1:26-28). ಅಷ್ಟುಮಾತ್ರವಲ್ಲದೆ, ಯಜಮಾನ ಹಾಗೂ

ಸೇವಕರಿಬ್ಬರೂ ಕ್ರೈಸ್ತರಾದರು (ಎಫೆಸ 6:5-9; ಕೊಲೊಸ್ಸೆ 3:22-4:1). ಒಂದು ಆರಾಧನೆಯ ಕೂಟದಲ್ಲಿ ಮೊಟ್ಟಮೊದಲ ಬಾರಿಗೆ ಒಬ್ಬ ಯಜಮಾನ ಹಾಗೂ ಆತನ ಸೇವಕ ಪರಸ್ಪರರ ಅಕ್ಕಪಕ್ಕದಲ್ಲಿ ಕುಳಿತಾಗ ಮತ್ತು ಕರ್ತನ ಭೋಜನದಲ್ಲಿ ಒಟ್ಟಾಗಿ ಭಾಗಿಯಾಗುವಾಗ ಅವರಿಬ್ಬರೂ ಅನುಭವಿಸಿದ ಭಾವಾತ್ಮಕ ವಿಪ್ಲವವನ್ನು ನೀವು ಊಹಿಸಿಕೊಳ್ಳಬಲ್ಲಿರಾ?

"ದೀನರ [ಜನರ]" ಬದಲಾಗಿ, ಕೆಲವರು "ದೀನರ" ಎಂಬರೆ "ದೀನ [ಸಂಗತಿಗಳು]" ಎಂದು ಸೂಚಿಸುತ್ತದೆಂದು ಯೋಚಿಸುತ್ತಾರೆ. TEVಯಲ್ಲಿ "ದೀನವಾದ ಉದ್ಯೋಗಗಳು" ಎಂದಿರುತ್ತದೆ. NIV ಯು ಅಡಿಟಿಪ್ಪಣಿಯಲ್ಲಿ ಈ ಪರ್ಯಾಯ ಅನುವಾದವನ್ನು ಸೇರಿಸಿರುತ್ತದೆ: "ಗುಲಾಮಚಾಕರಿಯ ಕೆಲಸಗಳನ್ನು ಮಾಡಲು ಮನಸ್ಸುಳ್ಳವರಾಗಿರುವದು." ಪೌಲನು ಇದನ್ನೇ ಹೇಳುವದಕ್ಕೆ ಬಯಸಿದ್ದನೋ ಅಥವಾ ಇಲ್ಲವೋ, ಇದು ಪರಿಗಣಿಸುವದಕ್ಕೆ ಯೋಗ್ಯವಾದ ಸತ್ಯವಾಗಿರುತ್ತದೆ. ನಾವು ಗುಲಾಮಚಾಕರಿ ಕೆಲಸಗಳನ್ನು ಮಾಡುವದಕ್ಕಾಗದಷ್ಟು "ಅತಿ ಉತ್ತಮರು" ಎಂದು ಎಂದಿಗೂ ಭಾವಿಸಿಕೊಳ್ಳಬಾರದು. ಯೇಸು ತನ್ನ ಶಿಷ್ಯರ ಪಾದಗಳನ್ನು ತೊಳೆದಾಗ ಒಬ್ಬ ಗುಲಾಮನಚಾಕರಿಯನ್ನೇ ಮಾಡಿದನು (ಯೋಹಾನ 13:5-17). ಪೌಲನು ಅನೇಕ ಸಾರಿ ತನ್ನ ಕೈಯಿಂದ ದುಡಿದು ತನಗೆ ಸಹಾಯ ಮಾಡಿಕೊಂಡನು (ಅಪೊಸ್ತಲರ ಕೃತ್ಯಗಳು 18:3; 1 ಕೊರಿಂಥ 4:12). ವಿಶ್ವದುದ್ದಕ್ಕೂ, ತಾವು ಭಾನುವಾರಗಳಲ್ಲಿ ಸುವಾರ್ತೆಯನ್ನು ಸಾರುವಂತಾಗಲು ವಾರವೆಲ್ಲಾ "ಲೌಕಿಕ ಉದ್ಯೋಗಗಳು" (secular jobs) ಎಂದು ಕರೆಯಲ್ಪಡುವ ಕೆಲಸಗಳನ್ನು ಮಾಡುವ ಕ್ರೈಸ್ತ ವ್ಯಕ್ತಿಗಳಿರುತ್ತಾರೆ.

ಪೌಲನು 16ನೇ ವಚನವನ್ನು ಈ ಬುದ್ಧಿವಾದದೊಂದಿಗೆ ಮುಕ್ತಾಯಗೊಳಿಸಿದನು: **ನಿಮ್ಮನ್ನು ನೀವೇ ಬುದ್ಧಿವಂತರೆಂದು ಎಣಿಸಿಕೊಳ್ಳಬೇಡಿರಿ** (ನೋಡಿರಿ ಜ್ಞಾನೋಕ್ತಿ 3:7). ನಿಮಗೆ ಎಂದಾದರೂ "ನನಗೆ ಎಲ್ಲವೂ ಗೊತ್ತು" ಎಂದು ಯೋಚಿಸುವ ಒಬ್ಬರ ಪರಿಚಯವಿತ್ತೋ? ಯಾವದೇ ಚರ್ಚೆಯ ವಿಷಯವಿದ್ದರೂ ಸರಿಯೇ, ಆತನು ತನಗೆ ಆ ವಿಷಯದ ಮೇಲೆ "ತಜ್ಞತೆ" ಇದೆಯೆಂದು ಎಲ್ಲರಿಗೆ ಮನವರಿಕೆ ಮಾಡಲು ಪ್ರಯತ್ನಿಸುತ್ತಾನೆ. ನಾವು ಸಾಮಾನ್ಯವಾಗಿ ಅಂಥ ಜನರಿಂದ ದೂರವಿರುವದಕ್ಕೆ ಪ್ರಯತ್ನಿಸುತ್ತೇವೆ. Morris ಅದನ್ನು ಈ ರೀತಿಯಲ್ಲಿ ಹೇಳುತ್ತಾನೆ: "ತನ್ನ ಸ್ವಂತ ದೃಷ್ಟಿಯಲ್ಲಿ ಜ್ಞಾನಿಯಾಗಿರುವ ವ್ಯಕ್ತಿಯು ಇತರ ಜನರ ದೃಷ್ಟಿಯಲ್ಲಿ ಹಾಗಿರುವದು ವಿರಳ."[66] ಹೇಗೂ, ಪೌಲನು ಉದ್ದೇಶವು ನಾವು ಮತ್ತೊಬ್ಬರಿಗೆ ಬೆರಳು ತೋರಿಸಬೇಕೆಂಬು ದಾಗಿರಲಿಲ್ಲ, ಆದರೆ ನಮ್ಮನ್ನು ಪರೀಕ್ಷಿಸಿಕೊಳ್ಳಬೇಕೆಂಬುದೇ. ನಾವು ಜ್ಞಾನವೆಂಬುದರ ಬಗ್ಗೆ ಬೈಬಲಿನ ಅರ್ಥದಲ್ಲಿ ಮಾತಾಡುತ್ತಿದ್ದರೂ ಸರಿಯೇ, ಅಥವಾ "ಸರಳವಾದ ಅದೇ ಸಾಮಾನ್ಯ ಪರಿಜ್ಞಾನ"ದ ಅರ್ಥದಲ್ಲಿ ಮಾತಾಡುತ್ತಿದ್ದರೂ ಸರಿಯೇ, ತಮಗೆ ತಿಳಿಯದ್ದು ಬಹಳಷ್ಟಿದೆ ಮತ್ತು ಅರ್ಥವಾಗದಿರುವಂಥದ್ದು ಸಾಕಷ್ಟಿದೆ ಎಂಬುದನ್ನು ನಿಜವಾಗಿಯೂ ಬುದ್ಧಿವಂತರಗಿರುವವರು ಅರಿತುಕೊಂಡಿರುತ್ತಾರೆ.

ಒಬ್ಬ ಕ್ರೈಸ್ತನು ದೀನನಾಗಿರತಕ್ಕದ್ದು. ಆತನು ಇತರ ಕ್ರೈಸ್ತರ ವಿಷಯದಲ್ಲಿ ನಡೆದುಕೊಳ್ಳಲಿ ಅಥವಾ ಲೋಕದಲ್ಲಿರುವವರ ಸಂಗಡ ನಡೆದುಕೊಳ್ಳಲಿ, ಇದು ಅಷ್ಟೇ ಸತ್ಯ. ಆತನು ಪ್ರತಿಯೊಬ್ಬರನ್ನು ಅಂಗೀಕರಿಸಿಕೊಳ್ಳುತ್ತಾನೆ ಮತ್ತು ಗೌರವಿಸುತ್ತಾನೆ ಹಾಗೂ

ತಾನು ಬೇರೆ ಯಾರಿಗಿಂತಲೂ ಉತ್ತಮನೆಂಬ ಅಭಿಪ್ರಾಯವು ಮೂಡುವಂತೆ ಅವಕಾಶವನ್ನು ಕೊಡುವದಿಲ್ಲ. Stott ಹೀಗೆ ಹೇಳುತ್ತಾನೆ, “ಕೆಲವು ವಿಧವಾದ ಗರ್ವವು ಒಣಪ್ರತಿಷ್ಠೆಗಿಂತಲೂ ಭಯಂಕರವಾಗಿರುತ್ತವೆ.”[67]

ಬಹುಶಃ ಒಂದು ಇಲ್ಲಿ ಒಂದು ಹಕ್ಕುನಿರಾಕರಣೆ ಸೂಕ್ತವಾಗಿರುತ್ತದೆ: “ಅಂಗೀಕರಿಸಿಕೊಳ್ಳುವಿಕೆಯ ಅರ್ಥವು ಅನುಮೋದನೆ ಆಗುವದಿಲ್ಲ.”[68] ನಾವು ಇತರರ ನಂಬಿಕೆಗಳು ಅಥವಾ ಜೀವನಶೈಲಿಗಳಿಗೆ ಅನುಮೋದನೆಯನ್ನು ನೀಡದೆಯೇ ಅವರಿಗೆ ಗೌರವವನ್ನು ತೋರಿಸಬಹುದಾಗಿದೆ. ಯೇಸು “ಪಾಪಿಷ್ಠರ ಗೆಳೆಯನು” ಆಗಿದ್ದನು (ಮತ್ತಾಯ 11:19), ಆದರೆ ಆತನು ಕೊಟ್ಟ ಕರೆಯು “ಇನ್ನು ಮೇಲೆ ಪಾಪವನ್ನು ಮಾಡಬೇಡ” ಎಂದಾಗಿತ್ತು (ಯೋಹಾನ 8:11).

**ವಚನ 17.** ಈ ಹಂತದಲ್ಲಿ, ಚರ್ಚೆಯಾಂಶವು ಪುನಃ ವೈರಿಗಳ ಕಡೆಗೆ ತಿರುಗಿಕೊಳ್ಳುತ್ತದೆ (ನೋಡಿರಿ 12:14). 17ನೇ ವಚನವು ಒಂದು ನಿಷೇಧಾರ್ಥದೊಂದಿಗೆ ಆರಂಭಗೊಳ್ಳುತ್ತದೆ: **ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ.** ತಮ್ಮನ್ನು ತಾವು ಕಾಪಾಡಿಕೊಳ್ಳುವದು ಅತ್ಯಂಥ ಮೂಲಭೂತ ಪ್ರವೃತ್ತಿಗಳಲ್ಲೊಂದಾಗಿದೆ. ಒಬ್ಬರು ನಮ್ಮನ್ನು ತಪ್ಪಾಗಿ ನಡೆಸಿಕೊಳ್ಳುವಾಗ, ನಾವು ಪ್ರತೀಕಾರವನ್ನು ಸಲ್ಲಿಸುವದಕ್ಕೆ ಇಷ್ಟಪಡುತ್ತೇವೆ. ನಾವು ಆತನಿಗೆ ಬಡ್ಡಿಯ ಸಮೇತ ಹಿಂದಿರುಗಿಸುವದಕ್ಕೆ ಬಯಸುತ್ತೇವೆ.[69] ಒಂದು ಮಗುವು ತಾನು ನೀಡಿದ ಹೊಡೆತಗಳನ್ನು ಇದು ಮನ್ನಿಸುತ್ತದೋ ಎಂಬಂತೆ, “ಆದರೆ ಆತನೇ ಮೊದಲು ನನಗೆ ಹೊಡೆದದ್ದು!” ಎಂದು ಹೇಳುತ್ತದೆ. ಅನೇಕರು ಈ ಮನೋಭಾವವನ್ನು ದಾಟಿ ಬೆಳೆಯುವದೇ ಇಲ್ಲ. 2ನೇ ವಚನದಲ್ಲಿ, ಪೌಲನು “ಇಹಲೋಕದ ನಡವಳಿಕೆಯನ್ನು ಅನುಸರಿಸದೆ” ಎಂದು ಹೇಳುತ್ತಾನೆ. “ಅಪಕಾರಕ್ಕೆ ಅಪಕಾರವನ್ನು ಮಾಡಬೇಕು” ಎಂಬ ಲೋಕದ ರಾಜಶಾಸನವನ್ನು ಅನುಸರಿಸದೆ ಇರುವದು ಎಷ್ಟು ಕಷ್ಟಕರವಾಗಿರುತ್ತದೆ!

ಈ ವಿಷಯದ ಮೇಲೆ ಯೇಸುವಿನ ಬೆಚ್ಚಿಬೀಳಿಸುವ ಮಾತುಗಳನ್ನು ಕೇಳೋಣ:

> ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು ಹಲ್ಲಿಗೆ ಪ್ರತಿಯಾಗಿ ಹಲ್ಲನ್ನು ತೆಗಿಸು ಅಂತ ಹೇಳಿಯದೆ ಎಂದು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ—ಕೆಡುಕನನ್ನು ಎದುರಿಸಬೇಡ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು. ನಿನ್ನ ಸಂಗಡ ವ್ಯಾಜ್ಯವಾಡಿ ನಿನ್ನ ಒಳಂಗಿಯನ್ನು ತಕ್ಕೊಳ್ಳಬೇಕೆಂದಿರುವವನಿಗೆ ಮೇಲಂಗಿಯನ್ನೂ ಬಿಡು. ಒಬ್ಬನು—ಒಂದು ಮೈಲು ದೂರ ಬಾ ಎಂದು ನಿನ್ನನ್ನು ಬಿಟ್ಟೀ ಹಿಡಿದರೆ ಅವನ ಸಂಗಡ ಎರಡು ಮೈಲು ಹೋಗು (ಮತ್ತಾಯ 5:38-41).

Douglas J. Moo ನು ಪ್ರತೀಕಾರ ಸಲ್ಲಿಸದಿರುವ ಮೂಲತತ್ವವನ್ನು “ಕ್ರೈಸ್ತರಿಗೆ ಗುರುತಾಗಿರುವ ಎಲ್ಲಾ ಗುಣಸ್ವಭಾವಗಳಲ್ಲಿಯೇ ಅತ್ಯಂಥ ವಿಶಿಷ್ಟವಾದದ್ದು” ಎಂದು ಕರೆಯುತ್ತಾನೆ.[70]

ಪೌಲನ ಈ ಆಜ್ಞೆಗೆ ಯಾರಾದರೂ ಹೊರತಾಗಿರುವರೋ? ಆತನು ಹೀಗೆ ಹೇಳುತ್ತಾನೆ, “ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ.” ಗ್ರೀಕ್ ವಾಕ್ಯದಲ್ಲಿ,

"ಯಾರಿಗೂ" ಎಂಬುದು ಒತ್ತಿ ಹೇಳಲ್ಪಡುವ ಉದ್ದೇಶಕ್ಕಾಗಿ ಮೊದಲಲ್ಲಿಯೇ ಇರುತ್ತದೆ. ಇದು ನಮ್ಮಲ್ಲಿ ಬಹುತೇಕರಿಗೆ ಇದು ಎಂಥ ಪರೀಕ್ಷೆ!

ನಾವು ಅಪಕಾರಕ್ಕೆ ಅಪಕಾರವನ್ನು ಮಾಡದಿರಬೇಕೆಂದರೆ, ನಮಗೆ ವಿರುದ್ಧ ತಪ್ಪು ಮಾಡಲ್ಪಟ್ಟಾಗ ನಾವು ಏನು ಮಾಡಬೇಕು? **ಎಲ್ಲರ ದೃಷ್ಟಿಯಲ್ಲಿ ಯಾವದು ಗೌರವವಾದದ್ದೋ ಅದನ್ನೇ ಯೋಚಿಸಿ ಸಾಧಿಸಿರಿ** ಎಂದು ಪೌಲನು ಹೇಳುತ್ತಾನೆ. "ಯಾವದು ಗೌರರವಾದದ್ದೋ" ಎಂಬುದು καλός (*kalos*) ಎಂಬ ಪದದಿಂದ ಅನುವಾದವಾಗಿದೆ, ಅದು "ಸ್ವಭಾವಜನ್ಯವಾಗಿ 'ಒಳ್ಳೇದು' ಆಗಿರುವಂತದ್ದು ಎಂದು ಸೂಚಿಸುತ್ತದೆ." ಈ ವಚನದಲ್ಲಿ, ಅದು "ನೈತಿಕವಾಗಿ ಒಳ್ಳೇದು, ಸರಿ, ಉದಾತ್ತ, ಗೌರವಾರ್ಹವಾದದ್ದು" ಎಂದು ಸೂಚಿಸುತ್ತದೆ.[71] ಬೇರೆಯವರು ಹೇಗೆ ವರ್ತಿಸಿದರೂ ಸರಿಯೇ, ಒಬ್ಬ ಕ್ರೈಸ್ತನು ಒಂದು ಉತ್ತಮ ಮಾದರಿ ಆಗಿರಬೇಕು. ಬೇರೊಂದೆಡೆಯಲ್ಲಿ, ಪೌಲನು "ಕರ್ತನ ದೃಷ್ಟಿಯಲ್ಲಿ ಮಾತ್ರವಲ್ಲದೆ ಮನುಷ್ಯರ ದೃಷ್ಟಿಯಲ್ಲಿಯೂ ಗೌರವವಾದದ್ದನ್ನು ಯೋಚನೆಗೆ ತಂದುಕೊಳ್ಳುವವರಾಗಿದ್ದೇವೆ" ಎಂದು ಹೇಳುತ್ತಾನೆ (2 ಕೊರಿಂಥ 8:21).

Phillips ತರ್ಜುಮೆಯು 17ನೇ ವಚನದ ಕಡೆಯ ಭಾಗಕ್ಕೆ ಈ ವಿಧವಾಗಿ ಭಾವಾನುವಾದವನ್ನು ಒದಗಿಸುತ್ತದೆ: "'ಜನರು ಏನೇ ಯೋಚಿಸಿದರೂ ನನಗೇನೂ ಚಿಂತೆಯಿಲ್ಲ' ಎಂದು ಹೇಳದಿರಿ." ಕೆಲವು ಪರಿಸ್ಥಿತಿಗಳಿದ್ದು ಅವುಗಳಲ್ಲಿ ಒಬ್ಬ ಕ್ರೈಸ್ತನು "ಜನರು ಏನಂದುಕೊಂಡರೂ ಚಿಂತೆಯಿಲ್ಲ" ಎಂದು ಹೇಳತಕ್ಕದ್ದು—ಉದಾಹರಣೆಗೆ, ಆತನನ್ನು ಅವನ ನಂಬಿಕೆ ಹಾಗೂ ಮನವರಿಕೆಗಳಿಗಾಗಿ ಟೀಕಿಸುವ ಸಂದರ್ಭದಲ್ಲಿ. ನಿಯಮದಂತೆ, ಒಬ್ಬ ಕ್ರೈಸ್ತನು ಕಳಂಕವನ್ನು ಮೀರಿದ ಜೀವನ ಜೀವಿಸುವದಕ್ಕೆ ಶ್ರಮಿಸಬೇಕು. Phillips ಈ ಮಾತುಗಳನ್ನು ಸೇರ್ಪಡೆಗೊಳಿಸುತ್ತದೆ, "ನಿಮ್ಮ ಸಾರ್ವಜನಿಕವಾದ ನಡವಳಿಕೆಯು ಟೀಕೆಗೆ ಗುರಿಯಾಗದಂತೆ ನೋಡಿಕೊಳ್ಳಿರಿ."

**ವಚನ 18.** ನಂತರ, ನಾವು ಎಲ್ಲರ ಸಂಗಡ—ನಮಗೆ ನೋವುಂಟು ಮಾಡುವದಕ್ಕೆ ಪ್ರಯತ್ನಿಸುವವರೂ ಸೇರಿದಂತೆ—ಸಾಧ್ಯವಾದ ಮಟ್ಟಿಗೆ ಸಮಾಧಾನದಿಂದ ಜೀವಿಸಬೇಕು ಎಂದು ಪೌಲನು ಹೇಳುತ್ತಾನೆ. ವಚನ 18 ಹೀಗೆ ಹೇಳುತ್ತದೆ, **ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ.** 17ನೇ ವಚನದಲ್ಲಿರುವ ಹಾಗೆಯೇ, ಅಪೊಸ್ತಲನು ತಾನು ನೀಡುವ ಆಜ್ಞೆಯಲ್ಲಿ ಸಮಗ್ರವಾಗಿದ್ದನು: "*ಎಲ್ಲರ* ಸಂಗಡ ಸಮಾಧಾನದಿಂದಿರಿ."

ಯಾರಾದರೊಬ್ಬರು ಖಂಡಿತವಾಗಿಯೂ ಆಕ್ಷೇಪಣೆಯೆತ್ತುವರು, "ಆದರೆ ಅದು ಅಸಾಧ್ಯವಾದದ್ದು!" ಪೌಲನು ಅದನ್ನು ಎದುರುನೋಡಿದ್ದವನಾಗಿಯೇ, "ಸಾಧ್ಯವಾದರೆ. . . " ಎಂದು ಹೇಳಿದನು. ಕೆಲವು ಸಾರಿ ಸಮಾಧಾನದಲ್ಲಿ ಜೀವಿಸಲು ಅಸಾಧ್ಯವಾಗಿರುತ್ತದೆ ಯಾಕೆಂದರೆ ಸಮಾಧಾನಕ್ಕೆ ತೆತ್ತಬೇಕಾದ ಬೆಲೆಯು ಸತ್ಯ ಅಥವಾ ಪ್ರಾಮಾಣಿಕತೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳುವದು—ಮತ್ತು ಅದು ಕಟ್ಟಬೇಕಾದ ಅತ್ಯಂಥ ದುಬಾರಿ ಬೆಲೆಯಾಗಿರುವದು. ಇನ್ನು ಕೆಲವು ಸಮಯಗಳಲ್ಲಿ, ನಾವು ಏನೇ ಮಾಡಿದರೂ ಸರಿಯೇ, ಎದುರಿನ ವ್ಯಕ್ತಿಯು ಸಂಧಾನದ ವಿರುದ್ಧವಾಗಿ ನಿಂತಿರುತ್ತಾನೆ ಎಂಬ ಕಾರಣಕ್ಕೆ ಸಮಾಧಾನವು ಅಸಾಧ್ಯವಾಗಿರುತ್ತದೆ.

ಅದು ನಮ್ಮನ್ನು ಪೌಲನ ಎರಡನೆಯ ಪರಿಮಿತಿಗೆ ತಂದು ನಿಲ್ಲಿಸುತ್ತದೆ:

"*ನಿಮ್ಮಿಂದಾ*ಗುವ ಮಟ್ಟಿಗೆ." John Kachelmanನು ಹೀಗೆ ಅಭಿಪ್ರಾಯಪಡುತ್ತಾನೆ, "ನಾವು ನಮ್ಮ ಸಂಬಂಧದ ಕೇವಲ ಅರ್ಧದಷ್ಟಕ್ಕೆ ಮಾತ್ರವೇ ಹೊಣೆಗಾರ ರಾಗಿರುತ್ತೇವೆ."[72] ಮತ್ತೊಬ್ಬ ವ್ಯಕ್ತಿಯು ಏನು ಮಾಡುತ್ತಾನೆ ಅಥವಾ ಹೇಗೆ ಪ್ರತಿಕ್ರಿಯಿಸುತ್ತಾನೆಂಬದರ ಮೇಲೆ ಅಧಿಕಾರ ನಡಿಸಲು ಸಾಧ್ಯವಿಲ್ಲ. ಹೇಗೂ, ಆತನು ಗ್ರಹಿಸಿಕೊಳ್ಳುತ್ತಾನೋ ಇಲ್ಲವೋ, ನಾವಂತೂ ಸಮಾಧಾನವನ್ನು ತರುವದಕ್ಕೆ ಸಾಧ್ಯವಾದದ್ದೆಲ್ಲವನ್ನೂ ಮಾಡಬೇಕು. ಪರ್ವತದ ಮೇಲಿನ ಪ್ರಸಂಗದಲ್ಲಿ, ಯೇಸು ಹೀಗೆ ಹೇಳಿದನು, "ಸಮಾಧಾನಪಡಿಸುವವರು ಧನ್ಯರು; ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು" (ಮತ್ತಾಯ 5:9).

ನಾವು ಸಮಾಧಾನವನ್ನುಂಟು ಮಾಡುವದಕ್ಕೆ ಎಲ್ಲವನ್ನೂ ಮಾಡದಿರುವದಕ್ಕಾಗಿ ನಮಗೊಂದು ನೆಪವನ್ನು ಒದಗಿಸಲು ಉದ್ದೇಶದಿಂದ ಪೌಲನು ಈ ಎರಡು ಪರಿಮಿತಿಗಳನ್ನು—"ಸಾಧ್ಯವಾದರೆ" ಮತ್ತು "ನಿಮ್ಮಿಂದಾಗುವ ಮಟ್ಟಿಗೆ"—ಕೊಟ್ಟಿರುವದಿಲ್ಲ. ಆತನು "ನೀವು ಮುಂಗೋಪಿಗಳಾಗಿದ್ದು ನಿಮಗೆ ನಿಯಂತ್ರಿಸಿಕೊಳ್ಳಲಿ ಸಾಧ್ಯವೇ ಇಲ್ಲವಾದಲ್ಲಿ, ಪರವಾಗಿಲ್ಲ" ಎಂಬದಾಗಿ ಅಥವಾ "ನೀವು ಸ್ವಲ್ಪ ಪ್ರಯತ್ನವನ್ನು ಮಾಡಿರುವದಾದರೆ ಸಾಕು, ದೇವರು ಅಷ್ಟನ್ನೇ ಅಪೇಕ್ಷಿಸುತ್ತಾನೆ" ಎಂಬದಾಗಿ ಹೇಳಲಿಲ್ಲ. ನಾವು ನಮ್ಮ ಶಕ್ತಿಯಲ್ಲಿರುವದೆಲ್ಲವನ್ನೂ ಮಾಡಿ "ಎಲ್ಲರ ಸಂಗಡ ಸಮಾಧಾನದಿಂದಿರಿ" ಎಂಬದಾಗಿ ಆತನು ನಮಗೆ ಕರೆ ಕೊಡುತ್ತಿದ್ದಾನೆ.

ಯಾರಾದರೊಬ್ಬರು ಹೀಗೆ ಯೋಚಿಸಬಹುದು, "ಆದರೆ ಅಪಕಾರಕ್ಕೆ ಅಪಕಾರವನ್ನು ಮಾಡದಿದ್ದರೆ, ನನ್ನ ವೈರಿಗಳು ನನ್ನನ್ನು ದುರುಪಯೋಗಪಡಿಸಿಕೊಳ್ಳುವರು." ಬಹುಶಃ ಹಾಗೆಯೇ ಇರಬಹುದು. ಮತ್ತೊಬ್ಬರು ವಿರೋಧವ್ಯಕ್ತಪಡಿಸಿ, "ನಾನು ಅಪಕಾರಕ್ಕೆ ಅಪಕಾರವನ್ನು ಮಾಡುವದರಿಂದ ಹಿಂದೆ ಸರಿದರೂ, ನನ್ನ ವೈರಿಗಳು ಆಗಲೂ ನನ್ನನ್ನು ದ್ವೇಷಿಸುವರಷ್ಟೆ" ಎಂದು ಹೇಳಬಹುದು. ಅದು ಸಂಭವಿಸುದು ಸಾಧ್ಯವಿದೆ—ಆದರೆ ಅವರು ದ್ವೇಷಮಾಡುವದು ಅವರ ಸಮಸ್ಯೆಯಷ್ಟೇ. ನಮ್ಮಿಂದ ಸಾಧ್ಯವಾಗುವ ಮಟ್ಟಿಗೆ ಸಮಾಧಾನವನ್ನು ತರುವದಕ್ಕೆ ಮಾಡಬೇಕಾದದ್ದೆನ್ನೆಲ್ಲಾ ಮಾಡಬೇಕು ಎಂದು ಪೌಲನು ಹೇಳುತ್ತಾನೆ.

ಒಬ್ಬ ಕ್ರೈಸ್ತನು ಪ್ರೀತಿಗೆ ಅರ್ಹನಲ್ಲದ ವ್ಯಕ್ತಿಯನ್ನು ಹೇಗೆ ಪ್ರೀತಿಸಲು ಸಾಧ್ಯ? ಅವನ ಸಂಗಡ *ಸಮಾಧಾನದಿಂದ ಜೀವಿಸುವದಕ್ಕೆ* ಶ್ರಮಿಸುವ ಮೂಲಕವೇ.

**ವಚನ 19.** 19 ಮತ್ತು 20 ವಚನಗಳಲ್ಲಿ, ಇತರರು ನಮಗೆ ನೋವುಂಟು ಮಾಡುವದಕ್ಕೆ ಪ್ರಯತ್ನಿಸಿದಾಗ್ಯೂ ನಾವು ಅವರಿಗೆ ಸಹಾಯ ಮಾಡಬೇಕೆಂದು ಪೌಲನು ನಮಗೆ ಕರೆಕೊಟ್ಟನು. ಪುನಃ, ಪೌಲನು ಇಲ್ಲಿ ನಕಾರಾತ್ಮಕವಾಗಿ ಆರಂಭಿಸುತ್ತಾನೆ: **ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ.** 1:7ನೇ ವಚನದಿಂದ ಇಲ್ಲಿಯ ತನಕ ಮೊದಲ ಬಾರಿಗೆ, ಪೌಲನು ತನ್ನ ವಾಚಕರನ್ನು *"ಪ್ರಿಯರೇ"* ಎಂದು ಸಂಬೋಧಿಸುತ್ತಿದ್ದಾನೆ, ಅದು *agapē* ಪದಗಳ ಕುಟುಂಬದ ἀγαπητός (*agapētos*) ಎಂಬ ಪದದಿಂದ ಬರುತ್ತದೆ.[73] ಪೌಲನು ಏಕೆ ಇಲ್ಲಿ ಆ ಪದದ ಬಳಕೆ ಮಾಡಿದನು? ಬಹುಶಃ ಆತನು ತನ್ನ ಚರ್ಚೆಯಿ ಇನ್ನೂ ಯಥಾರ್ಥವಾದ "ಪ್ರೀತಿ [*agapē*]" (12:9) ಮೇಲೆ ಮುಖ್ಯ ಗಮನ ಹೊಂದಿರುತ್ತದೆಂಬದನ್ನು ಒತ್ತಿ ಹೇಳುತ್ತಿದ್ದಾನೆಂದು ತೋರುತ್ತದೆ. ಬಹುಶಃ ತಾನು ನೀಡಿದ ಆಜ್ಞೆಗಳನ್ನು ಅನುಸರಿಸುವದು ಅವರಿಗೆ ಎಂತಹ ಹೋರಾಟವಾಗಿರುವದೆಂಬದನ್ನು ನೆನಸಿದಾಗ

ಆತನಿಗೆ ತನ್ನ ಸಹೋದರರು ಹಾಗೂ ಸಹೋದರಿಯರ ಮೇಲೆ ಆತನ ಹೃದಯವು ಮರುಕ ಪಟ್ಟಿರಬೇಕು.

ಬಹುಕಾಲದ ಹಿಂದೆ, Francis Bacon (1561-1626) ಹೀಗೆ ಬರೆದನು, "ಮುಯ್ಯಿಗೆ ಮುಯ್ಯಿ ತೆಗೆದುಕೊಳ್ಳುವಾಗ ಒಬ್ಬನು ತನ್ನ ವೈರಿಗೆ ಸಮಾನನಷ್ಟೆ ಆದರೆ ಅದನ್ನು ಹೋಗಲಿಯೆಂದು ಮರೆತುಬಿಟ್ಟರೆ ಆತನು ತನಗಿಂತಲೂ ಶ್ರೇಷ್ಠನಾಗುವನು."[74] ನಾವು ಪ್ರತೀಕಾರ ಸಲ್ಲಿಸುವಾಗ ಎರಡು ಸಾರಿ ಸೋತವರಾಗುತ್ತೇವೆ ಎಂದು Dale Hartman ಗಮನಕ್ಕೆ ತರುತ್ತಾನೆ. ಮೊದಲನೆಯದಾಗಿ, ನಮಗೆ ವಿರುದ್ಧವಾಗಿ ತಪ್ಪುಮಾಡಲ್ಪಡುವಾಗ ಕಳೆದುಕೊಂಡದ್ದೆಲ್ಲವನ್ನೂ ನಾವು ಕಳಕೊಳ್ಳುತ್ತೇವೆ. ಎರಡನೆಯದಾಗಿ (ಮತ್ತು ಇದು ಹೆಚ್ಚು ಗಂಭೀರವಾದದ್ದು), ನಾವು ದೇವರ ಆಜ್ಞೆಗಳಿಗೆ ಅವಿಧೇಯರಾಗುವಾಗ ಆತ್ಮೀಕವಾಗಿ ಕಳೆದುಕೊಳ್ಳುತ್ತೇವೆ.[75]

ಮತ್ತೊಬ್ಬರು ಹೀಗೆ ಆಕ್ಷೇಪಣೆಯೆತ್ತಬಹುದು, "ಆದರೆ ನಾನು ನನ್ನನ್ನು ಸಮರ್ಥಿಸಿಕೊಳ್ಳದಿದ್ದಲ್ಲಿ, ನಾನು ಬಲಹೀನನೆಂದು ಜನರು ಭಾವಿಸಿಕೊಳ್ಳುವರು." ಅದು ಸತ್ಯವೇ ಇರಬಹುದು, ಆದರೆ ಇದನ್ನು ಪರಿಗಣಿಸೋಣ: ಒಬ್ಬನಿಗೆ ಮುಯ್ಯಿ ತೀರಿಸುವ ದಾರಿಗಳಿರುವದಾದರೆ, ಆಗ ಮುಯ್ಯಿ ತೀರಿಸುವದಕ್ಕಿಂತಲೂ ಮುಯ್ಯಿ ತೀರಿಸ*ದಂತೆ* ಇರುವದಕ್ಕೆ ಹೆಚ್ಚಿನ ವೈಯಕ್ತಿಕ ಬಲದ ಅಗತ್ಯವಿರುತ್ತದೆ. ಯೇಸು ಶಿಲುಬೆಯ ಮೇಲಿರುವ ವೇಳೆ, ಹಾದುಹೋಗುವವರು ಅವನನ್ನು ನೋಡಿ, "ನೀನು ದೇವರಮಗನು ಆಗಿದ್ದರೆ ಶಿಲುಬೆಯಿಂದ ಇಳಿದು ಬಾ" ಎಂದು ಆತನನ್ನು ಹಂಗಿಸುತ್ತಿದ್ದರು (ಮತ್ತಾಯ 27:40). ಆತನು ಶಿಲುಬೆಯಿಂದ ಇಳಿದು ಬಂದಿರಬಹುದಿತ್ತು. ಆತನಿಗೆ ತನ್ನ ವೈರಿಗಳ ಬಾಯನ್ನು ಮುಚ್ಚಿಸುವದಕ್ಕೆ ಅಧಿಕಾರವಿತ್ತು. ಹೇಗೂ, ಆತನು ಪ್ರತೀಕಾರ ಸಲ್ಲಿ*ಸದೆ* ಇರುವ ಮೂಲಕ ತನ್ನ ಬಲವನ್ನು ತೋರಿಸಿದನು.

ಹಾಗಾದರೆ ಇದರ್ಥವು ಕೆಟ್ಟದ್ದಕ್ಕೆ ಶಿಕ್ಷೆಯಾಗದೆ ಹೋಗಬೇಕೆಂದು ಆಗಿದೆಯೋ? ಎಂದಿಗೂ ಇಲ್ಲ. ಅದರರ್ಥವು ನಾವು ಆ ಶಿಕ್ಷೆಯನ್ನು ಆಗುವಂತೆ ನೋಡಿಕೊಳ್ಳುವ ಶಾಂತಿಪಾಲಕರಂತೆ ಇರಬಾರದು ಎಂದಾಗಿರುತ್ತದಷ್ಟೆ. ಹಾಗಾದರೆ, ಹೇಗೆ, ಕೆಟ್ಟದ್ದಕ್ಕೆ ಶಿಕ್ಷೆಯಾಗುವದು? ನಾವು ವಾಕ್ಯಭಾಗದಲ್ಲಿ ಮುಂದಕ್ಕೆ ಓದಿದಂತೆ ಈ ಪ್ರಶ್ನೆಗೆ ಉತ್ತರ ಸಿಕ್ಕುತ್ತದೆ.

ಮುಯ್ಯಿಗೆ ಮುಯ್ಯಿಗೆ ತೀರಿಸುವದಕ್ಕೆ ಬದಲಾಗಿ, ನಾವು **ಶಿಕ್ಷಿಸುವದನ್ನು** [ὀργή, *orgē*] **ದೇವರಿಗೆ ಬಿಡಿರಿ.** ಗ್ರೀಕ್ ವಾಕ್ಯದಲ್ಲಿ "ದೇವರ" ಎಂಬ ಮಾತುಗಳಿರುವದಿಲ್ಲ. ಅದು ಈ ಮಾತುಗಳನ್ನಷ್ಟೆ ಹೊಂದಿದೆ, "ಕೋಪಾಗ್ನಿಗೆ ಅವಕಾಶ ಕೊಡಿರಿ" (ನೋಡಿರಿ KJV). ಹೇಗೂ, ಪೌಲನು ಮನಸ್ಸಿನಲ್ಲಿ ದೇವರ ಕೋಪಾಗ್ನಿಯನ್ನು[76] ಇಟ್ಟುಕೊಂಡು ಮಾತಾಡುತ್ತಿದ್ದಾನೆಂಬದನ್ನು ವಾಕ್ಯಭಾಗದ ಮಿಕ್ಕ ವಚನಗಳು ಸ್ಪಷ್ಟಗೊಳಿಸುತ್ತವೆ: **ಯಾಕೆಂದರೆ ಮುಯ್ಯಿಗೆ ಮುಯ್ಯಿಗೆ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆಂಬದಾಗಿ ಬರೆದದೆ.** CJB ತರ್ಜುಮೆಯಲ್ಲಿ "ಮುಯ್ಯಿಗೆ ಮುಯ್ಯಿಗೆ ತೀರಿಸುವದು ನನ್ನ ಜವಾಬ್ದಾರಿಯಾಗಿದೆ; ನಾನು ಪ್ರತಿಫಲವನ್ನು ಕೊಡುವೆನು" ಎಂದಿರುತ್ತದೆ. ಪೌಲನ ಪರಿಭಾಷೆಯು ಸರಿಯಾಗಿ Masoretic ವಾಕ್ಯ ಅಥವಾ LXX ನಲ್ಲಿರುವಂತೆಯೇ ಇಲ್ಲದಿದ್ದಾಗ್ಯೂ, ಇಲ್ಲಿ ಉಲ್ಲೇಖಿಸಲ್ಪಟ್ಟಿರುವ

ವಾಕ್ಯಭಾಗವು ಧರ್ಮೋಪದೇಶಕಾಂಡ 32:35ನೆ ವಚನವಾಗಿರುತ್ತದೆ (ನೋಡಿರಿ ಇಬ್ರಿಯ 10:30).

ಪೌಲನು ಎರಡು ವಿರುದ್ಧ ಹೋಲಿಕೆಗಳನ್ನು ಮಾಡುತ್ತಾನೆ. 17ನೇ ವಚನದಲ್ಲಿ, ಆತನು "ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ" ಎಂದು ಹೇಳಿದನು. ಏಕೆ? ಏಕೆಂದರೆ ಅದು ದೇವರ ಕೆಲಸ: "ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆ." 19ನೇ ವಚನದ ಮೊದಲ ಭಾಗದಲ್ಲಿ, ಆತನು ನಾವೇ ಮುಯ್ಯಿಗೆ ಮುಯ್ಯಿ (ἐκδικέω, *ekdikeō*) ತೀರಿಸಬಾರದೆಂದು ಹೇಳಿದನು. ವಚನದ ಕಡೆಯ ಭಾಗದಲ್ಲಿ, ಆತನು ಏಕೆ ಎಂಬುದನ್ನ ವಿವರಿಸುತ್ತಾನೆ: ಪುನಃ, ಅದು ದೇವರ ಕೆಲಸ: "ನಾನೇ ಪ್ರತಿಫಲವನ್ನು [ἐκδίκησις, *ekdikēsis*] ಕೊಡುವೆನು ಎಂದು ಕರ್ತನು ಹೇಳುತ್ತಾನೆ . . ."

ದೇವರು ಹೇಗೆ ಕೆಟ್ಟದ್ದಕ್ಕೆ ಪ್ರತಿಫಲ ಕೊಡುವನು? ರೋಮಾಪುರದವರಿಗೆ ಪುಸ್ತಕದಲ್ಲಿ ಕನಿಷ್ಠ ಮೂರು ದಾರಿಗಳನ್ನು ಸೂಚಿಸಲಾಗಿದೆ:

> ಕೆಲ ಶಿಕ್ಷೆಯು ಪಾಪದ ಸ್ವಭಾವಿಕವಾದ ಪರಿಣಾಮಗಳ ಮೂಲಕ ಬರುತ್ತದೆ. ಕೆಲವರು "ತಮ್ಮ ಭ್ರಾಂತಿಗೆ ತಕ್ಕ ಫಲವನ್ನು ತಮ್ಮಲ್ಲಿ" ಹೊಂದುವರು (1:27). Jimmy Allen ಹೀಗೆ ಬರೆಯುತ್ತಾನೆ, "ದುಷ್ಟರು ಈಗ ಶಿಕ್ಷಿಸಲ್ಪಡುತ್ತಿರುವದು ಅವರ ಪಾಪಗಳಿಗಾಗಿ ಎಂಬುದಕ್ಕಿಂತಲೂ ಅವರ ಪಾಪಗಳಿಂ*ದಲೇ* ಶಿಕ್ಷಿಸಲ್ಪಡುವದಾಗಿರುತ್ತದೆ."[77]
>
> ಶಿಕ್ಷೆಯು ಕೆಲವು ಸಾರಿ ಮಾನವ ನ್ಯಾಯಾಲಯಗಳಲ್ಲಿ ಕೊಡಲ್ಪಡುತ್ತದೆ. ದೇವರು ಮಾನವ ನ್ಯಾಯಾಲಯಗಳನ್ನು "ಕೆಟ್ಟದ್ದನ್ನು ನಡಿಸುವವನಿಗೆ ದೇವರ ದಂಡನೆಯನ್ನು [*orgē*] ವಿಧಿಸುವದಕ್ಕಾಗಿ ಪ್ರತೀಷ್ಠಾಪಿಸಿದ್ದಾನೆಂಬ" ಎಂಬದಾಗಿ ರೋಮಾ 13ನೇ ಅಧ್ಯಾಯವು ಒತ್ತಿ ಹೇಳುತ್ತದೆ (13:4).
>
> ಖಂಡಿತವಾಗಿಯೂ, "ದೇವರ ಕೋಪವೂ [*orgē*] ನ್ಯಾಯವಾದ ತೀರ್ಪೂ ಪ್ರಕಟವಾಗುವ ಬರುತ್ತದಷ್ಟೆ. ಆತನು ಪ್ರತಿಯೊಬ್ಬನಿಗೂ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು" ಆಗ ಪಶ್ಚಾತ್ತಾಪವಿಲ್ಲದವರಿಗೆ ಅಂತಿಮ ಹಾಗೂ ಪೂರ್ಣ ಫಲ ಸಿಕ್ಕುವದು (2:5, 6).

**ವಚನ 20.** ನಮಗೆ ವೈರಿಯ ಮೇಲೆ ಪ್ರತೀಕಾರ ಮಾಡುವದಕ್ಕೆ ಅನುಮತಿಯಿಲ್ಲವಾದಲ್ಲಿ, ನಾವೇನು ಮಾಡಬಲ್ಲೆವು? ನಾವು ಆತನನ್ನು ಪ್ರೀತಿಸಿ ಆತನಿಗೆ ಸಹಾಯ ಮಾಡಲು ಪ್ರಯತ್ನಿಸಬಲ್ಲೆವು. ಪೌಲನು ಧರ್ಮೋಪದೇಶಕಾಂಡ 32:35ರಲ್ಲಿ ಉಲ್ಲೇಖದ ನಂತರ ಜ್ಞಾನೋಕ್ತಿ 25:21ನ್ನು ಉಲ್ಲೇಖಿಸುತ್ತಾನೆ: **ಹಾಗಾದರೆ ನಿನ್ನ ವೈರಿ ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು; ಬಾಯಾರಿದ್ದರೆ ಕುಡಿಯುವದಕ್ಕೆ ಕೊಡು.** ಈ ಮಾತುಗಳು ಲೂಕ 6:27ರಲ್ಲಿ ಯೇಸು ನೀಡಿದ ಆಜ್ಞೆಯನ್ನ ಕಾರ್ಯರೂಪಕ್ಕೆ ಅನ್ವಯಿಸಿಕೊಳ್ಳುವಿಕೆಯಾಗಿವೆ: "ಕೇಳುವವರಾದ ನಿಮಗೆ ನಾನು ಹೇಳುವದೇನಂದರೆ— ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಗೆಮಾಡುವವರಿಗೆ ಉಪಕಾರಮಾಡಿರಿ." ಒಂದು ಜಗಳವನ್ನು ಬಿಟ್ಟು ಹಿಂದೆ ಸರಿದರೆ ಸಾಕಗುವದಿಲ್ಲ; ನಾವು ನಮ್ಮ ವಿರೋಧಿಗಳಿಗೆ

ಸಹಾಯಮಾಡುವದಕ್ಕೆ ದಾರಿಗಳನ್ನು ಹುಡುಕುವದರಲ್ಲಿ ಮುಂಚೂಣಿಯ ಕ್ರಮವನ್ನು ತೆಗೆದುಕೊಳ್ಳಬೇಕು.

ಲೋಕವು "ನಿಮ್ಮ ವೈರಿಗಳ ಬಲಹೀನತೆಗಳನ್ನು ಹುಡುಕಿ ಅವುಗಳ ಲಾಭ ಪಡೆದುಕೊಳ್ಳಬೇಕು. ಅವನಿಗೆ ಹಸಿವೆಯೋ? ಅವನನ್ನು ಉಪವಾಸ ಬೀಳಲು ಬಿಡು. ಅವನಿಗೆ ಬಾಯಾರಿಕೆಯೋ? ಆವನು ದಾಹದಿಂದ ಸತ್ತುಹೋಗಲು ಬಿಡು" ಎಂದು ಹೇಳಿಕೊಡುತ್ತದೆ. ಹೇಗೂ, ಪ್ರೀತಿಯೋ, "ನಿಮ್ಮ ವೈರಿಯು ಯಾವ ಕೊರತೆಯಲ್ಲಿದ್ದಾನೆಂಬುದನ್ನು—ಆಹಾರ, ನೀರು, ಅಥವಾ ಆತನ ಅಗತ್ಯತೆಗಳು ಏನೇ ಆಗಿದ್ದರೂ—ಹುಡುಕಿ ತಿಳಿದು ಅವುಗಳನ್ನು ಒದಗಿಸು" ಎಂದು ಹೇಳುತ್ತದೆ.

ಯಾರಾದರೂ ನಿಮಗೆ ವಿರುದ್ಧ ತಪ್ಪು ಮಾಡಿದರೆ, ನಾಲ್ಕು ಪ್ರತಿಕ್ರಿಯೆಗಳ ಸಾಧ್ಯತೆಯಿರುತ್ತದೆ. ಆತನು ನಿಮಗೆ ನೋವುಂಟು ಮಾಡಿದರೆ, ನೀವೂ ಆತನಿಗೆ ಅದಕ್ಕಿಂತ ಹೆಚ್ಚು ನೋವುಂಟು ಮಾಡಿರಿ; ಅದು ಸೇಡಿನ ಮನೋವೃತ್ತಿ. ಆತನು ನಿಮಗೆ ನೋವುಂಟು ಮಾಡಿದರೆ, ನೀವೂ ಅವನಿಗೆ ಅದನ್ನೇ ಮಾಡಬಹುದು; ಅದು ಪ್ರತೀಕಾರವಾಗಿರುತ್ತದೆ. ಆತನು ನಿಮಗೆ ನೋವುಂಟು ಮಾಡಿದರೆ, ನೀವು ಆತನನ್ನು ನಿರ್ಲಕ್ಷಿಸಬಹುದು ಮತ್ತು ಅವನೊಂದಿಗೆ ಯಾವ ವ್ಯವಹಾರವನ್ನೂ ಇಟ್ಟುಕೊಳ್ಳಬೇಡಿರಿ; ಅದು ಉಪೇಕ್ಷೆಯಾಗಿರುತ್ತದೆ. ಅಂತಿಮವಾಗಿ, ಆತನು ನಿಮಗೆ ನೋವುಂಟು ಮಾಡಿದರೆ, ನೀವು ಆತನನ್ನು ಪ್ರೀತಿಸಿ ಆತನಿಗೆ ಸೇವೆ ಮಾಡಬಹುದು; ಅದು ಕ್ರಿಸ್ತನ ದಾರಿ.[78] Benjamin Franklin ಹೀಗೆ ಹೇಳಿದನು, "ಒಂದು ಗಾಯವನ್ನುಂಟು ಮಾಡುವದು ನಿಮ್ಮನ್ನು ನಿಮ್ಮ ವೈರಿಗಿಂತ ಕೀಳಾಗಿಸುತ್ತದೆ; ಒಬ್ಬನಿಗೆ ಪ್ರತೀಕಾರ ಸಲ್ಲಿಸುವದು ನಿಮ್ಮನ್ನು ಆತನೊಂದಿಗೆ ಸಮಗೊಳಿಸುತ್ತದೆ; ಕ್ಷಮಿಸುವದು ನಿಮ್ಮನ್ನು ಅವನಿಗಿಂತ ಉನ್ನತದಲ್ಲಿಡುತ್ತದೆ."[79]

ನಾವು ನಮ್ಮ ವೈರಿಗಳಿಗೆ ಉಪಕಾರವನ್ನು (ಒಳ್ಳೇದನ್ನು) ಮಾಡಿದರೆ, ಫಲಿತವೇನಾಗುತ್ತದೆ? ಪೌಲನು ಜ್ಞಾನೋಕ್ತಿ 25:22ರಿಂದ ಬೆಚ್ಚಿಬೀಳಿಸುವ ಮಾತುಗಳನ್ನು ಉಲ್ಲೇಖಿಸುತ್ತಾನೆ: **ಹೀಗೆ ಮಾಡಿದರೆ ಅವನ ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಟ್ಟಂತಾಗುವದು.** ಪೌಲನ ಮಾತುಗಳನ್ನು Morrisನು "ಒಂದು ರೂಪಕೋಕ್ತಿಯಾಗಿದ್ದು ಅದರ ಅರ್ಥವು ಸ್ಪಷ್ಟವಾಗಿರುವದಿಲ್ಲ"[80] ಎಂದು ಕರೆಯುತ್ತಾನೆ. ಈ ಪದಗುಚ್ಛದ ಮೂಲದ ಕುರಿತು ಅನೇಕ ಊಹಾಕಲ್ಪನೆಗಳನ್ನು ಮಾಡಲಾಗಿರುತ್ತದೆ. ಕೆಲವರು ಗಮನಕ್ಕೆ ತರುವದೇನೆಂದರೆ, ಬೈಬಲ್ ದಿನಗಳಲ್ಲಿ, ಜನರು ತಮ್ಮ ತಲೆಗಳ ಮೇಲೆ ಪಾತ್ರೆಗಳನ್ನು ಹೊತ್ತುಕೊಂಡು ಹೋಗುತ್ತಿದ್ದರು. ವೈರಿಯ ಬೆಂಕಿಯು ನಂದಿಹೋಗಿ ಆತನು ಪುನಃ ಉರಿಯನ್ನು ಹೊತ್ತಿಸುವದಕ್ಕೆ ಕೆಂಡಗಳನ್ನು ಹುಡುಕುತ್ತಿರುವದಾದರೆ, ಆತನು ತಲೆಯ ಮೇಲೆ ಹೊತ್ತುಕೊಂಡಿರುತ್ತಿದ್ದ ಪಾತ್ರೆಯಲ್ಲಿ ಉರಿಯುವ ಕೆಂಡಗಳನ್ನು ಹಾಕುವದು ಒಂದು ದಾರಾತನದ ಸೂಚಕವಾಗಿರುತ್ತಿತ್ತು.[81] ಇನ್ನು ಕೆಲವು ಬರಹಗಾರರು "ಒಬ್ಬ ಮನುಷ್ಯನು ತನ್ನ ತಲೆಯ ಮೇಲೆ ಉರಿಯುವ ಇದ್ದಿಲುಗಳ ತಟ್ಟೆಯನ್ನು ಹೊತ್ತು ತನ್ನ ಪಶ್ಚಾತ್ತಾಪವನ್ನು ಸಾರ್ವಜನರ ಎದುರು ಸಾಕ್ಷಿಕರಿಸುವ ಐಗುಪ್ತ್ಯದ ಒಂದು ಆಚಾರದ" ಬಗ್ಗೆ ಹೇಳುತ್ತಾರೆ.[82] ಬಹುಶಃ ಉತ್ತಮವಾದ ಊಹಾಕಲ್ಪನೆಯೆಂದರೆ Allen ನಿಂದ ಮಾಡಲ್ಪಟ್ಟದ್ದು. ಆತನು ಗಮನಕ್ಕೆ ತಂದಿದ್ದೇನೆಂದರೆ, ವೈರಿಗಳು ಪಟ್ಟಣದ ಮೇಲೆ ದಾಳಿ ಮಾಡಿದಾಗ, ಪಟ್ಟಣದ ವಾಸಿಗಳು ವೈರಿಗಳ ತಲೆಗಳ ಮೇಲೆ ವಸ್ತುಗಳನ್ನು—ಉರಿಯುವ

ಕೆಂಡಗಳೂ ಸೇರಿದಂತೆ—ಎತ್ತಿ ಹಾಕುವ ಮೂಲಕ ಗೋಡೆಗಳನ್ನು ಕಾಪಾಡಿಕೊಳ್ಳುತ್ತಿದ್ದರು. ಕೆಟ್ಟದ್ದರ ವಿರುದ್ಧದ ಉತ್ತಮವಾದ ಪ್ರತಿರಕ್ಷಣೆಯೆಂದರೆ ಒಳ್ಳೇದನ್ನು ಮಾಡುವದು ಎಂದು Allen ಅಭಿಪ್ರಾಯ ಪಡುತ್ತಾನೆ.[83]

ಪೌಲನ ಸಾದೃಶ್ಯದ ಮೂಲದ ಬಗ್ಗೆ ನಿಖರವಾಗಿ ನಮಗೆ ತಿಳಿಯಲು ಸಾಧ್ಯವಿಲ್ಲದಿದ್ದಾಗ್ಯೂ, ನಮ್ಮನ್ನು ಹಿಂಸಿಸುವವನಿಗೆ ಒಳ್ಳೇದನ್ನು ಮಾಡುವದು ಆತನ ಮೇಲೆ ಸಕಾರಾತ್ಮಕವಾಗಿ ಪರಿಣಾಮವನ್ನು ಬೀರತಕ್ಕದ್ದೆಂಬ ಅರ್ಥವನ್ನು ಕೊಡುತ್ತವೆಂದು ಬಹುತೇಕರು ಅರ್ಥಮಾಡಿಕೊಳ್ಳುತ್ತಾರೆ.[84] MSG ಯು ಪೌಲನ ಮಾತುಗಳನ್ನು ಹೀಗೆ ಭಾವಾನುವಾದಗೊಳಿಸುತ್ತದೆ: "ನಿಮ್ಮ ದಾರಾಳತನವು ಆತನಿಗೆ ಒಳ್ಳೇತನದಿಂದ ಆಶ್ಚರ್ಯಗೊಳಿಸುವದು." SEB ಯಲ್ಲಿ "ನೀವು ಆತನನ್ನು ನಾಚಿಕೆಯಿಂದ ಉರಿದುಹೋಗುವಂತೆ ಮಾಡುವಿರಿ" ಎಂದಿರುತ್ತದೆ. ಕೆಟ್ಟದ್ದಕ್ಕೆ ಪ್ರತಿಯಾಗಿ ಒಳ್ಳೇದನ್ನು ಮಾಡುವದು ಆತನ ಮನಸಾಕ್ಷಿಯನ್ನು ಕದಲುವಂತೆ ಮಾಡಿ ಆತನನ್ನು ಪಶ್ಚಾತ್ತಾಪಕ್ಕೆ ನಡಿಸ*ಬಹುದು.* Barclayಯು ಅಭಿಪ್ರಾಯ ಪಟ್ಟಿದ್ದೇನೆಂದರೆ "ಪ್ರತೀಕಾರವು ಆತನ ಆತ್ಮವನ್ನು ಮುರಿಯಬಹುದು; ಆದರೆ ಉಪಕಾರವು ಆತನ ಹೃದಯವನ್ನು ಮುರಿಯುತ್ತದೆ."[85]

ಒಬ್ಬ ವೈರಿಯನ್ನು ಶಾಶ್ವತವಾಗಿ ತೊಲಗಿಸಿಕೊಳ್ಳಬೇಕೆಂದರೆ ಆತನನ್ನು ಮಿತ್ರನನ್ನಾಗಿ ಮಾಡಿಕೊಳ್ಳಬೇಕು ಎಂದು ಹೇಳುತ್ತಾರೆ. ನಾವು ಪ್ರೀತಿಗೆ ಅರ್ಹವಲ್ಲದ ವ್ಯಕ್ತಿಯನ್ನು ಹೇಗೆ ಪ್ರೀತಿಸಬೇಕು? ನಾವು ಆತನಿಗೆ *ಸಹಾಯ* ಮಾಡುವದಕ್ಕೆ ದಾರಿಗಳನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕು.

**ವಚನ 21.** ಒಬ್ಬ ಹಿಂಸಿಸುವವನಿಗೆ ಸಂಬಂಧಿಸಿ ತಾನು ಹೇಳಿದ್ದನ್ನು ಪೌಲನು ಸಾರಾಂಶಗೊಳಿಸುತ್ತಾನೆ: **ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು.** "ಸೋಲಿಸು" ಎಂಬುದಕ್ಕಾಗಿರುವ ಪದವು νικάω (*nikaō*), νίκη (*nikē*) ಎಂಬುದರ ಕ್ರಿಯಾಪದರೂಪವಾಗಿದೆ, ಅದು "ವಿಜಯ" ಎಂಬುದಕ್ಕೆ ಗ್ರೀಕ್ ಪದವಾಗಿದೆ. ನಮಗೆ ವಿರುದ್ಧವಾಗಿ ತಪ್ಪು ಮಾಡಲ್ಪಡುವಾಗ, ಕೆಟ್ಟತನದಿಂದ ಆವರಿಸಿಕೊಳ್ಳಲ್ಪಡುವದು, ನಮ್ಮನ್ನು ನಿಯಂತ್ರಿಸುವಂತೆ ಅದಕ್ಕೆ ಅವಕಾಶ ಕೊಡುವದು ಸುಲಭ. ನಮ್ಮ ಮೇಲೆ ಕೆಟ್ಟತನವಾದರೂ ಜಯಿಸುವದು ಅಥವಾ ನಾವಾದರೂ ಕೆಟ್ಟತನದ ಮೇಲೆ ಜಯ ಗಳಿಸುವೆವು ಎಂದು ಪೌಲನು ಹೇಳುತ್ತಾನೆ.

ಕೆಟ್ಟತನವು ನಮ್ಮನ್ನು ಹೇಗೆ ಸೋಲಿಸಬಲ್ಲದು? ಈ ಅಧ್ಯಾಯದಲ್ಲಿ ಮುಂಚಿನ ಕೆಲವು ವಚನಗಳನ್ನು ಪರಿಗಣಿಸೋಣ. ನಮ್ಮ ವೈರಿಗಳನ್ನು ಶಪಿಸುವಂತೆ ನಾವು ದೇವರನ್ನು ಬೇಡುವದಾದರೆ (12:14), ನಾವು ಕೆಟ್ಟತನದಿಂದ ಸೋಲಿಸಲ್ಪಟ್ಟಿರುತ್ತೇವೆ. ನಾವು ಅಪಕಾರಕ್ಕೆ ಅಪಕಾರವನ್ನು ಮಾಡಲು ಪ್ರಯತ್ನಿಸುವದಾದರೆ (12:17), ಕೆಟ್ಟತನವು ನಮ್ಮನ್ನು ಸೋಲಿಸಿದೆ ಎಂದಾಗುತ್ತದೆ. ನಾವು ಮುಯ್ಯಿಗೆ ಮುಯ್ಯಿಗೆ ತೀರಿಸಲು ನೋಡಿದರೆ (12:19), ಕೆಟ್ಟತನವು ನಮ್ಮ ಮೇಲೆ ಜಯವನ್ನು ಗಳಿಸಿದೆ ಎಂದಾಗುತ್ತದೆ. ಹಾಗೆ ಸಂಭವಿಸಿದ್ದೇ ಆದಲ್ಲಿ, "ನಾವು ಕೆಟ್ಟತನಕ್ಕೆ ಒಳಗಾಗಿದ್ದೇವೆ, ಅದರ ಪ್ರಭಾವದ ವ್ಯಾಪ್ತಿಯೊಳಗೆ ಎಳೆದುಕೊಳ್ಳಲ್ಪಟ್ಟಿದ್ದೇವೆ, ಮತ್ತು ಪರಾಜಯಗೊಳಿಸಲ್ಪಟ್ಟು, ಜಯಿಸಲ್ಪಟ್ಟು, ಅದರಿಂದ ಸ್ವಾದೀನ ಸಹ ಪಡಿಸಿಕೊಳ್ಳಲ್ಪಟ್ಟಿದ್ದೇವೆ [Phillips]" ಎಂದು Stott

ಹೇಳುತ್ತಾನೆ.[86]

ಕೆಟ್ಟತನವು ಜಯಶಾಲಿಯಾಗದಂತೆ ನಾವು ಹೇಗೆ ತಡೆಯಬಲ್ಲೆವು? ಪೌಲನು “ಕೆಟ್ಟತನವನ್ನು ಒಳ್ಳೇತನದಿಂದ ಸೋಲಿಸು” ಎಂದು ಹೇಳುತ್ತಾನೆ. ಅದರ ಅರ್ಥವೇನು? ಅದರರ್ಥವು ನಮ್ಮ ವೈರಿಗಳನ್ನು ಆಶೀರ್ವದಿಸುವಂತೆ ದೇವರನ್ನು ಬೇಡಿಕೊಳ್ಳಬೇಕು ಎಂದಾಗಿರುತ್ತದೆ (12:14). ಅದರರ್ಥವೇನೆಂದರೆ, ಸಾಧ್ಯವಾದರೆ ಎಲ್ಲರ ಸಂಗಡ ಸಮಾಧಾನದಿಂದಿರುವದಕ್ಕೆ ಪ್ರಯತ್ನವನ್ನು ಮಾಡಬೇಕು ಎಂದಾಗಿರುತ್ತದೆ (12:18). ನಮ್ಮನ್ನು ಹಗೆಮಾಡುವ ಯಾವನಿದಾರೂ ಉಪಕಾರವನ್ನು ಮಾಡುವದು—ಆತನನ್ನು ಪ್ರೀತಿಸಿ ಆತನ ಅಗತ್ಯತೆಗಳನ್ನು ಒದಗಿಸುವದು—ಎಂದರ್ಥವಾಗಿದೆ (12:20).

ಕೆಟ್ಟತನವನ್ನು ಒಳ್ಳೇತನದಿಂದ ಸೋಲಿಸುವದು ಸುಲಭವಾಗಿರುತ್ತದೋ? ಇಲ್ಲ. ಅದು ಸಾಧ್ಯವೋ? ಹೌದು, ಕರ್ತನ ಬಲದಿಂದ ಅದು ಸಾಧ್ಯವಿದೆ. ದೇವರ ಸಹಾಯದಿಂದ, ನಾವು ಕೆಟ್ಟದ್ದನ್ನು ಒಳ್ಳೇತನದಿಂದ ಸೋಲಿ*ಸಬಲ್ಲೆವು*.

# ಅನ್ವಯಿಸುವಿಕೆ

## ಒಂದು ಅಚ್ಚುಮೆಚ್ಚಿನ ಅಧ್ಯಾಯ (ಅಧ್ಯಾಯ 12)

ರೋಮಾ 12 ನಮ್ಮ ತಾಯಿಗೆ ಬೈಬಲಿನಲ್ಲಿ ಅಚ್ಚುಮೆಚ್ಚಿನ ಅಧ್ಯಾಯವಾಗಿದೆ. ಆಕೆಯ ಜೀವನದ ಕಡೇ ತಿಂಗಳುಗಳಲ್ಲಿ, ಆಕೆಯು ಕೆಲವು ಸಾರಿ ದೈಹಿಕವಾಗಿ ಆರಾಧನೆಗೋಸ್ಕರ ಸಭೆಗೆ ಹೋಗುವದಕ್ಕೆ ಅಶಕ್ತಳಾಗಿರುತ್ತಿದ್ದಳು. ಆಗಾಗ, ತಂದೆಯು ಭಾನುವಾರ ಆರಾಧನೆಗೆ ಹೋಗಿ ಬರುವಂತಾಗಲು ನಾನು ಆಕೆಯ ಸಂಗಡ ಉಳಿದುಕೊಳ್ಳುತ್ತಿದ್ದೆನು. ಅಮ್ಮ ಮತ್ತು ನಾನು ಧ್ಯಾನವನ್ನು ಮಾಡಿ ಒಟ್ಟಾಗಿ ಕರ್ತನ ಭೋಜನದಲ್ಲಿ ಪಾಲುಗಾರರಾಗುತ್ತಿದ್ದೆವು. ವಾಕ್ಯಧ್ಯಾನದ ಸಮಯದಲ್ಲಿ, ನಾನು ಆಕೆಗೆ ಯಾವ ವಾಕ್ಯಭಾಗವನ್ನು ನಾನು ಓದಬೇಕೆಂದು ಬಯಸುತ್ತೀ ಎಂದು ಕೇಳುತ್ತಿದ್ದೆನು, ಮತ್ತು ಆಕೆಯು ಏಕರೂಪವಾಗಿ “ರೋಮಾ 12” ಎಂದು ಪ್ರತ್ಯುತ್ತರ ನೀಡುತ್ತಿದ್ದಳು. ರೋಮಾ 12ನೇ ಅಧ್ಯಾಯವನ್ನು ಪ್ರೀತಿಸುವವರಲ್ಲಿ ನನ್ನ ತಾಯಿ ಒಬ್ಬಳೇ ಆಗಿರಲಿಲ್ಲ. ಅದು ಅನೇಕರಿಗೆ ಅಚ್ಚುಮೆಚ್ಚಿನ ಅಧ್ಯಾಯವಾಗಿದೆ.

## ವಿವೇಕಪೂರ್ವಕವಾದ ಆರಾಧನೆ (12:1)

ನಾವು ಕರ್ತನಿಗೋಸ್ಕರ ಮಾಡುವಂತದ್ದು ಯೋಚನೆಯಿಂದ ಕೂಡಿರಬೇಕು. ನಾವು ಎಂದಿಗೂ ಆತನನ್ನು ಒಂದು ಆಚಾರಬದ್ಧ ಮತ್ತು ಯಾಂತ್ರಿಕವಾದ ಶೈಲಿಯಲ್ಲಿ ಸೇವಿಸಬಾರದು. ನಾನು Texasನ Abilene ಕಾಲೇಜಿನಲ್ಲಿರುವ ವೇಳೆ, Texasನ ಪಶ್ಚಿಮ ಭಾಗದಲ್ಲಿರುವ ಸ್ಥಳವಾದ Knottದಲ್ಲಿರುವ ಒಂದು ಚಿಕ್ಕ ಸಭೆಯಲ್ಲಿ ಪ್ರಸಂಗಿಸಿದೆನು. ನಾನು ಭಾನುವಾರ ರಾತ್ರಿಗಳಲ್ಲಿ ಪುನಃ Abileneಗೆ ಬರುವದಕ್ಕೆ ಮೂರು ತಾಸುಗಳ ಪ್ರಯಾಣವನ್ನು ಮಾಡಿ ಬರುವಷ್ಟರಲ್ಲಿ ಯಾವಾಗಲೂ ತಡವಾಗಿ ಹೋಗಿರುತ್ತಿತ್ತು, ಮತ್ತು ಸಹಜವಾಗಿ ನಾನು ಬಹಳ ಬಳಲಿರುತ್ತಿದ್ದೆನು. ಒಂದಕ್ಕಿಂತಲೂ ಹೆಚ್ಚು ಸಂದರ್ಭಗಳಲ್ಲಿ, ನಾನು ಹಿಂದಿನ ಪಟ್ಟಣಗಳನ್ನು ದಾಟಿಕೊಂಡು ಬಂದ ನೆನಪು ಇಲ್ಲದೆ ಒಂದು ಪಟ್ಟಣದ

ಮೂಲಕ ವಾಹನ ಚಲಾಯಿಸುತ್ತಿರುತ್ತಿದ್ದೆನು. ನಿದ್ದೆ ಮಂಪರಿನಲ್ಲಿ ವಾಹನವನ್ನು ಚಲಾಯಿಸುವದು ಅಪಾಯಕರವಾದದ್ದು–ಮತ್ತು ಮಂಪರಿನಲ್ಲಿ ದೇವರ ಸೇವೆಯನ್ನು ಮಾಡುವದು ಎರಡಷ್ಟು ಅಪಾಯಕರವಾದದ್ದು. ನಾವು ದೇವರನ್ನು ಆರಾಧಿಸುವಾಗ, ನಮ್ಮ ಮನಸ್ಸುಗಳು ಆತನ ಮೇಲೆಯೇ ಮತ್ತು ನಾವು ಏನು ಮಾಡುತ್ತಿದ್ದೇವೆಂಬುದರ ಮೇಲೆ ದೃಷ್ಟಿಯನ್ನು ನೆಟ್ಟಿರಬೇಕಾದ ಅಗತ್ಯವಿರುತ್ತದೆ. ನಾವು ಕರ್ತನಿಗೋಸ್ಕರ ಮಾಡುವ ಎಲ್ಲಾ ಸೇವೆಗಳ ವಿಷಯದಲ್ಲಿ ಅದು ಅಷ್ಟೇ ಸತ್ಯವಾದದ್ದು.

## "ಸೇವೆಯೋ" ಅಥವಾ "ಆರಾಧನೆಯೋ"? (12:1)

ಬರಹಗಾರರು λατρεία (*latreia*) ಎಂಬ ಪದದ ಅರ್ಥನಿರೂಪಣೆ ಮಾಡುವದರಲ್ಲಿ ವಿಪರೀತಗಳಿಗೆ ಹೋಗಿರುತ್ತಾರೆ. ಆ ಪದವು ಕೇವಲ ದೇವರಿಗೆ ಮಾಡುವ ಸಾಮಾನ್ಯವಾದ "ಸೇವೆ"ಯನ್ನು ಸೂಚಿಸುತ್ತದೆ ಮತ್ತು "ಆರಾಧನೆ" ಎಂಬರ್ಥವನ್ನು ಕೊಡುವದಿಲ್ಲ ಎಂದು ವಾದಿಸುತ್ತಾರೆ. ರೋಮಾ 12:1ರಲ್ಲಿನ *latreia*ದಿಂದ ಆರಾಧನೆಯ ಯಾವದೇ ಅಂಶವನ್ನು ಹೊರಗಿಡುವದೆಂದರೆ ಅದು ಅತಿರೇಕದಂತೆ ತೋರುತ್ತದೆ.[87] ಈ ಪ್ರಕರಣದಲ್ಲಿ, ಪೌಲನು ನಮ್ಮ ದೇಹಗಳನ್ನು ದೇವರಿಗೆ ಯಜ್ಞವಾಗಿ ಸಮರ್ಪಿಸಿಕೊಳ್ಳುವ ಬಗ್ಗೆ ಮಾತಾಡುತ್ತಿದ್ದಾನೆ; ಆತನು ಆರಾಧನೆಯ ಪರಿಭಾಷೆಯನ್ನು ಉಪಯೋಗಿಸು ತ್ತಿದ್ದಾನೆ.

ಇನ್ನು ಕೆಲವರು 12:1ನೇ ವಚನವು "ಜೀವನವೆಲ್ಲವೂ ಆರಾಧನೆ" ಆಗಿರುತ್ತದೆಂದು ಅಭಿಪ್ರಾಯ ಪಡುತ್ತಾರೆ ಮತ್ತು "ಆರಾಧನೆಯ ಸೇವೆ" ಬಗ್ಗೆ ಅಸಮರ್ಥನೀಯವಾದ ನಿರ್ಣಯಗಳಿಗೆ ಬಂದಿರುತ್ತಾರೆ. ಉದಾಹರಣೆಗೆ, ಕೆಲವರು ನಿರ್ಧರಿಸಿರುವದೇನೆಂದರೆ, ಒಂದು ವೇಳೆ "ಜೀವನವೆಲ್ಲಾ ಆರಾಧನೆ" ಆಗಿರುವದಾದರೆ, ಆರಾಧನೆಗೋಸ್ಕರ ಒಟ್ಟಾಗಿ ಕೂಡಿಬರುವಂಥ ಅಗತ್ಯತೆಯಿಲ್ಲ ಎಂಬುದೆ. ಆ ರೀತಿಯ ನಿರ್ಣಯಕ್ಕೆ ಬರುವದು ಇಬ್ರಿಯ 10:25ಕ್ಕೆ ತದ್ವಿರುದ್ಧವಾಗಿರುತ್ತದೆ.

ಇನ್ನು ಸ್ವಲ್ಪ ಜನರು ವಾದಿಸುವದೇನೆಂದರೆ ಒಬ್ಬ ಕ್ರೈಸ್ತನಿಗೆ ಅನುದಿನದ ಜೀವಿತದಲ್ಲಿನ ಯಾವದೋ ಒಂದು ಕಾರ್ಯವು ಸರಿಯಾದದ್ದು ಎಂದು ಹೇಳುವದಾದರೆ, ಅದನ್ನು ಆರಾಧನೆಗೋಸ್ಕರ "ಸಭೆಯಲ್ಲಾ ಒಂದೇ ಸ್ಥಳದಲ್ಲಿ ಕೂಡಿಬಂದಾಗ" ಮಾಡುವದು ಸ್ವೀಕಾರರ್ಹವಾಗಿರುತ್ತದೆ (1 ಕೊರಿಂಥ 14:23) ಎಂಬದೆ. ಈ ಊಹೆಯು ಮಿಥ್ಯವಾದದ್ದು. ಉದಾಹರಣೆಗೆ, ಅನುದಿನದ ಸಂದರ್ಭಗಳಲ್ಲಿ ಸ್ತ್ರೀಯರು ಮಾತಾಡುವದರಲ್ಲಿ ಮತ್ತು ಉಪದೇಶ ಮಾಡುವದರಲ್ಲಿ ಯಾವದೇ ತಪ್ಪಿಲ್ಲ, ಆದರೆ ಅವರು "ಸಭೆಯ ಕೂಟಗಳಲ್ಲಿ ಸುಮ್ಮಗಿರಬೇಕು. . . ಸ್ತ್ರೀಯರು ಸಭೆಯಲ್ಲಿ [ಕೂಟಗಳಲ್ಲಿ] ಮಾತಾಡುವದು ನಾಚಿಗೆಗೆಟ್ಟ ಕೆಲಸವಾಗಿದೆ" (1 ಕೊರಿಂಥ 14:34, 35). ಪುನಃ, ಒಬ್ಬನು ಸಾಮನ್ಯ ಊಟದ ವೇಳೆಯಲ್ಲಿ ಕಾಫಿ ಮತ್ತು ದ್ರಾಕ್ಷಾರಸವನ್ನು ಪಾನಿಯಗಳಾಗಿ ಸೇವಿಸಬಹುದು, ಆದರೆ ಕರ್ತನ ಭೋಜನವನ್ನು ಆಚರಿಸುವ ವೇಳೆಯಲ್ಲಿ ದ್ರಾಕ್ಷಾರಸದ ಜೊತೆಯಲ್ಲಿ ಕಾಫಿಯನ್ನು ಸಹ ಸೇರ್ಪಡೆಗೊಳಿಸುವದು ಆ ಸ್ಮರಣಾರ್ಥ ಭೋಜನವನ್ನು ಅಪವಿತ್ರಗೊಳಿಸಿ ದಂತಾಗುವದು. ನಾವು ಕರೆಯುವ "ಸಂಘವಾಗಿ ಆರಾಧನೆ" (ಸಭೆಯು ಆರಾಧನೆಗೋಸ್ಕರ ಒಟ್ಟಾಗಿ ಕೂಡಿ ಬರುವಿಕೆ) ಮತ್ತು ನಾವು ಒಬ್ಬರಾಗಿ ದೇವರಿಗೆ ಸಲ್ಲಿಸುವ ವೈಯಕ್ತಿಕ, ಖಾಸಗಿ ಆರಾಧನೆಯ ನಡುವೆ ಒಂದು ವ್ಯತ್ಯಾಸವನ್ನು ಮಾಡತಕ್ಕದ್ದು.

ರೋಮಾ 12:1ರ ಸಂದೇಶವು ಈಗ ತಿಳಿಸಲಾದ ಎರಡು ಅತಿರೇಕಗಳ ಮಧ್ಯದಲ್ಲೆಲ್ಲೋ ಇರುತ್ತದೆ. ನಮ್ಮ ದೇಹಗಳನ್ನು ಸಜೀವಯಜ್ಞವಾಗಿ ನಾವು ಮಾಡುವ "ಆತ್ಮೀಕ [ಅಥವಾ ವಿವೇಕಪೂರ್ವಕವಾದ] ಆರಾಧನೆ"ಗೋಸ್ಕರ ಅರ್ಪಿಸಬೇಕೆಂದು ಪೌಲನು ಹೇಳಿದ ಮಾತಿನಿಂದ ನಾವು ಏನು ಕಲಿಯ*ತಕ್ಕದ್ದು*? ಬಹುಶಃ, ನಾವು ಅನೇಕ ಸಂಗತಿಗಳನ್ನು ಕಲಿಯಬೇಕಿದೆ, ಈ ಕೆಳಗಿನದು ಸಹ ಸೇರಿದಂತೆ:

*ನಾವು "ಪವಿತ್ರ" ಮತ್ತು "ಲೌಕಿಕ"ದ ನಡುವೆ ಗೋಚರವಾಗದಂಥ ಅತಿ ಸೂಕ್ಷ್ಮವಾದ ವ್ಯತ್ಯಾಸವನ್ನು ಮಾಡಬಾರದು.* ಮಕ್ಕಳನ್ನು "ಕರ್ತನಿಗೆ ಮೆಚ್ಚಿಕೆಯಾಗಿರುವ ಬಾಲಶಿಕ್ಷೆಯನ್ನೂ ಬಾಲೋಪದೇಶವನ್ನೂ ಮಾಡಿ" ಬೆಳೆಸುವದು (ಎಫೆಸ 6:4) ಒಂದು ಸಂದೇಶವನ್ನು ಸಿದ್ಧಪಡಿಸಿಕೊಳ್ಳುವಷ್ಟೇ ಪವಿತ್ರವಾದ ಕೆಲಸವಾಗಿರುತ್ತದೆ. ವಾರದ ದಿನದ ಕೆಲಸದ ಬಗ್ಗೆ ಪ್ರಜ್ಞೆಯುಳ್ಳವರಾಗಿದ್ದು, ಅದನ್ನು "ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ" (ಕೊಲೊಸ್ಸೆ 3:23) ಮಾಡುವದು ಒಂದು ಧಾರ್ಮಿಕ ಲೇಖನವನ್ನು ಬರೆದಷ್ಟೇ ಪವಿತ್ರವಾದದ್ದು.

*ನಾವು ಏನೇ ಮಾಡಿದರೂ, ನಾವು ದೇವರ ಸನ್ನಿಧಿಯಲ್ಲಿದ್ದೇವೆಂಬುದರ ಪ್ರಜ್ಞೆಯುಳ್ಳವರಾಗಿರಬೇಕು—ಮತ್ತು ಅದಕ್ಕೆ ತಕ್ಕಂತೆ ನಡೆದುಕೊಳ್ಳಬೇಕು.* ಒಬ್ಬ ವ್ಯಕ್ತಿಯು ಸೋಮವಾರದಿಂದ ಶನಿವಾರದ ತನಕ ಬೇರೆ ವ್ಯಕ್ತಿಯಂತಿದ್ದರೆ, ಆತನು ಭಾನುವಾರದಂದು "ಆತ್ಮದಲ್ಲಿಯೂ ಸತ್ಯದಲ್ಲಿಯೂ" ಆರಾಧನೆಯನ್ನು ಮಾಡುವದಕ್ಕೆ ಸಾಧ್ಯವಿಲ್ಲ.

*ನಾವು ಮಾಡುವಂತಹ ಎಲ್ಲದರಲ್ಲಿಯೂ ದೇವರನ್ನು ಮಹಿಮೆಪಡಿಸುವದಕ್ಕೆ ಒಂದು ಪ್ರಜ್ಞಾಪೂರ್ವಕವಾದ ಪ್ರಯತ್ನವನ್ನು ಮಾಡತಕ್ಕದ್ದು.* ನಾವು ನಮ್ಮ ಮಕ್ಕಳ ಪಾಲನೆಯನ್ನು ಮಾಡುತ್ತಿದ್ದೇವೋ, ಒಂದು ಸಂದೇಶವನ್ನು ಸಿದ್ಧಪಡಿಸುತ್ತಿದ್ದೇವೋ, ದೈನಂದಿನ ಕೆಲಸದಲ್ಲಿದ್ದೇವೋ, ಒಂದು ಧಾರ್ಮಿಕ ಲೇಖನವನ್ನು ಬರೆಯುತ್ತಿದ್ದೇವೋ, ಅಥವಾ ಬೇರೆ ಇನ್ನೇನೋ ಮಾಡುತ್ತಿದ್ದೇವೋ, ಯಾವದಿದ್ದರೂ ಸರಿಯೇ. ಯೇಸು ಹೀಗೆ ಹೇಳಿದನು, "ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿನ್ನ ತಂದೆಯನ್ನು ಕೊಂಡಾಡುವರು" (ಮತ್ತಾಯ 5:16). ಪೌಲನು ಹೀಗೆ ಬರೆದನು, "ಹೀಗಿರಲಾಗಿ ನೀವು ಉಂಡರೂ ಕುಡಿದರೂ ಇನ್ನೇನು ಮಾಡಿದರೂ ಎಲ್ಲವನ್ನೂ ದೇವರ ಘನತೆಗಾಗಿ ಮಾಡಿರಿ" (1 ಕೊರಿಂಥ 10:31).

### "ಇಹಲೋಕದ ನಡವಳಿಕೆಯನ್ನು ಅನುಸರಿಸದೆ" (12:2)

ನಾವು ಅದರ ಮಾನದಂಡಗಳನ್ನು ಅನುಸರಿಸುವವರಾಗುವಂತೆ ಲೋಕವು ನಿರಂತರವಾಗಿ ನಮ್ಮ ಮೇಲೆ ಒತ್ತಡವನ್ನು ಹಾಕುತ್ತಿರುತ್ತದೆ. ಆ ಒತ್ತಡವು ಜನರಿಂದ ಬರಬಹುದಾಗಿದೆ: ಸ್ನೇಹಿತರು, ಕುಟುಂಬ ಸದಸ್ಯರು, ನೆರೆಯವರು, ಜೊತೆ ಉದ್ಯೋಗಿಗಳು, ಅಥವಾ ಶಾಲೆಯ ಸಹಪಾಠಿಗಳು. ಅದು ಮಾಧ್ಯಮಗಳಿಂದ ಸಹ ಬರಬಹುದಾಗಿದೆ: ಸುದ್ಧಿ ಪತ್ರಿಕೆಗಳು, ಮ್ಯಾಗಜಿನ್ ಗಳು, ಪುಸ್ತಕಗಳು, ಸಂಗೀತ, ರೆಡಿಯೋ, ಟಿವಿ, ಸಿನಿಮಾಗಳು, ಜಾಹಿರಾತು, ಮತ್ತು ಹೀಗೆ ಇತ್ಯಾದಿಗಳು. ಅಂಥ ಒತ್ತಡವು ಸತತವಾಗಿ ಮತ್ತು ಪಟ್ಟು ಸಡಿಲಿಸದ್ದಾಗಿ ಬರುತ್ತಲೇ ಇರುತ್ತದೆ. ಅದು ಗೊತ್ತಾಗದಷ್ಟು ನಯವಾಗಿ ಸಹ ಇರಬಹುದಾಗಿದೆ. ಜೀವನದ ಗುರಿಯು ವೈಯಕ್ತಿಕವಾದ ಸಂತೋಷ—

ಮತ್ತು, ನಾವು ಸಂತೋಷವಾಗಿರಬೇಕೆಂದರೆ, ನಾವು ಬೇರೆ ಎಲ್ಲರಂತೆಯೇ ಯೋಚಿಸಬೇಕು, ಮಾತಾಡಬೇಕು, ಮತ್ತು ಕಾಣಿಸಬೇಕು ಎಂಬದಾಗಿ ಲೋಕವು ನಮ್ಮ ಕಿವಿಗಳಲ್ಲಿ ಪಿಸುಗುಟ್ಟುತ್ತದೆ. ಲೋಕದ ಮೌಲ್ಯ ವ್ಯವಸ್ಥೆಯನ್ನು ಮತ್ತು ಜೀವನಶೈಲಿಯನ್ನು ನಮಗೆ ಗ್ರಹಿಕೆಯಿಲ್ಲದೆಯೇ ಅಂಗೀಕರಿಸಿಕೊಳ್ಳುವದು ಸುಲಭವಾಗಿರುತ್ತದೆ. ಜನರು ಸ್ವಾಭಾವಿಕವಾಗಿಯೇ ಅನುಕರಣೆಯನ್ನು ಮಾಡುವ ಸ್ವಭಾವದವರು, ಮತ್ತು ಅನುಕರಣೆ ಮಾಡುವದಕ್ಕೆ ಕೇವಲ ಎರಡು ಮೌಲ್ಯ ವ್ಯವಸ್ಥೆಗಳು (ತಾತ್ವಿಕ ನಂಬಿಕೆಗಳು) ಇರುತ್ತವೆ. ಒಂದು ಎಂದರೆ "ಈಗಿನ ದುಷ್ಟಯುಗ," ಮತ್ತು ಇನ್ನೊಂದು ಎಂದರೆ "ದೇವರ ಚಿತ್ತ"ದಲ್ಲಿ ಸಿಕ್ಕುತ್ತದೆ. ಪೌಲನು "ಇಹಲೋಕದ ನಡವಳಿಕೆಯನ್ನು ಅನುಸರಿಸ*ಬೇಡಿರಿ*" ಎಂದು ಬೇಡಿಕೊಳ್ಳುತ್ತಾನೆ (ಒತ್ತಿ ಹೇಳಿದ್ದು ನನ್ನದು).

ಬಹುಶಃ ಇಲ್ಲೊಂದು ಎಚ್ಚರಿಕೆ ಮಾತು ಸೂಕ್ತವಾಗಿರುತ್ತದೆ. "ಇಹಲೋಕದ ನಡವಳಿಕೆಯನ್ನು ಅನುಸರಿಸಬೇಡಿರಿ" ಎಂಬುದರ ಅರ್ಥವು ನಾವು ಸುಮ್ಮನೆ ವ್ಯತ್ಯಾಸವಾಗಿರಬೇಕೆಂಬದಕ್ಕಾಗಿಯೇ ವ್ಯತ್ಯಾಸವುಳ್ಳವರಾಗಿರುವದಕ್ಕೆ ಪ್ರಯತ್ನಿಸ ಬೇಕೆಂದಾಗಿರುವದಿಲ್ಲ. Halford Luccock ಹೀಗೆ ಹೇಳುತ್ತಾನೆ, "ಕೇವಲ ವ್ಯತ್ಯಾಸವಾಗಿ ತೋರಿಸಿಕೊಳ್ಳಬೇಕೆಂಬುದಕ್ಕಾಗಿ ಅನುಸರಿಸದೆ ಇರುವದರಲ್ಲಿ ಯಾವದೇ ಬೆಲೆಯಿಲ್ಲ. ಅದೊಂದು ಪರಿಪಕ್ವತೆಯಿಲ್ಲದ ಬುದ್ಧಿಗೆ ಗುರುತಾಗಿರುತ್ತದೆ, ಅದು ಅನೇಕ ಸಾರಿ ಪ್ರದರ್ಶನ ಸ್ವಭಾವವುಳ್ಳದ್ದಾಗಿರುತ್ತದೆ. ಒಂದು ಪರಿಣಾಮಕಾರಿ ಸಮಾಜಕ್ಕೆ ಜೀವನದ ಅನೇಕ ಆಯಾಮಗಳಲ್ಲಿ ಅನುಸರಿಸುವಿಕೆ ಒಂದು ಅವಶ್ಯಕತೆಯಾಗಿರುತ್ತದೆ."[88]

ಜನರು ಸಾಧ್ಯವಾದಷ್ಟು ವ್ಯತ್ಯಾಸವಾಗಿಯೂ ವಿಚಿತ್ರವಾಗಿಯೂ ಕಾಣಿಸಿಕೊಳ್ಳುವದರಲ್ಲಿ ಎಷ್ಟು ಹೆಮ್ಮೆಪಟ್ಟುಕೊಳ್ಳುತ್ತಾರೆಂಬುದು ನಮಗೆಲ್ಲಾ ಗೊತ್ತಿರುವ ವಿಚಾರವಾಗಿದೆ. ಆ ರೀತಿಯ ವರ್ತನೆಯು ನಾವು ಸುವಾರ್ತೆಯಿಂದ ಸಂಧಿಸುವದಕ್ಕೆ ಪ್ರಯತ್ನಿಸುತ್ತಿರುವ ಜನರನ್ನು ಕೇವಲ ದೂರ ಮಾಡುವದಾಗಿದೆಯಷ್ಟೆ. ನಾವು ದೇವರ ಚಿತ್ತಕ್ಕೆ ವಿರುದ್ಧವಾಗಿರುವಂಥ ಲೋಕದ ನಡವಳಿಕೆಗಳನ್ನು ಅನುಸರಿಸಬಾರದು, ಆದರೆ ನಾವು ಬೋಧನೆ ಮಾಡಬೇಕಾದವರನ್ನು ಹಗೆಮಾಡುವಷ್ಟರ ಮಟ್ಟಿಗೆ ನಮ್ಮ ದಾರಿಯನ್ನು ಬಿಟ್ಟು ಹೋಗಬಾರದು.

## ಅನುಸರಿಸಬೇಕೆಂಬ ಒತ್ತಡ (12:2)

ನಾನು Oklahomaದ Lone Wolf ನಲ್ಲಿನ ಒಂದು ಹೈಸ್ಕೂಲ್ ವಿಜ್ಞಾನ ತರಗತಿಯಿಂದ ಒಂದು ಸರಳವಾದ ಪ್ರಯೋಗದ ಪ್ರದರ್ಶನವನ್ನು ನೆನಪಿಸಿಕೊಳ್ಳುತ್ತೇನೆ. ಶಿಕ್ಷಕನು ಒಂದು ಖಾಲಿಯಾದ, ಸಮತಲವಾದ, ಸುಮಾರು ನಾಲ್ಕು ಲೀಟರಿನ ಲೋಹದ ಡಬ್ಬವನ್ನು ತೆಗೆದುಕೊಂಡನು. ಆತನು ಡಬ್ಬದ ಮುಚ್ಚಳವನ್ನು ಕಿತ್ತು ಅದರಲ್ಲಿ ನೀರನ್ನು ಸುರಿದನು, ಮತ್ತು ಅದನ್ನು ಮದ್ಯಸಾರದ ದೀಪದ (Bunsen burner) ಮೇಲೆ ಇಟ್ಟನು. ಶೀಘ್ರವೇ ನೀರು ಕುದಿಯರಾಂಭಿಸಿತು. ಸುರಕ್ಷತಾ ಕೈಗವಚಗಳನ್ನು ಉಪಯೋಗಿಸಿ, ಶಿಕ್ಷಕನು ಮುಚ್ಚಳವನ್ನು ಪುನಃ ಹಾಕಿ ಅದನ್ನು ಸ್ಕ್ರೂಗಳಿಂದ ಗಟ್ಟಿಯಾಗಿ ಮುಚ್ಚಿದನು, ಮತ್ತು ಡಬ್ಬವನ್ನು ಬೆಂಕಿಯಿಂದ ಕೆಳಗೆ ಇಳಿಸಿದನು. ಕೆಲವು ಕ್ಷಣಗಳ ತನಕ, ಏನೂ ಸಂಭವಿಸಲಿಲ್ಲ. ಬಳಿಕ, ಏಕಾಏಕಿಯಾಗಿ—ಕಣ್ಣಿಗೆ ಕಾಣಿಸದ ಯಾವದೋ ದೈತ್ಯಾಕಾರದ

ಕೈಗಳಿಂದ ಜಜ್ಜಲ್ಪಟ್ಟ ರೀತಿಯಲ್ಲಿ—ಡಬ್ಬದ ಬದಿಗಳು ಒಳಗಡೆಗೆ ಕುಸಿದವು. ನಾನು ಪ್ರಭಾವಿತಗೊಂಡೆನು!

ಶಿಕ್ಷಕನು ವಿವರಣೆ ನೀಡಿ ಡಬ್ಬವನ್ನು ಬಿಸಿಮಾಡುವದರಿಂದ ಗಾಳಿಯು ವಿಸ್ತರಿಸಲ್ಪಟ್ಟು ಅದರಲ್ಲಿ ಸ್ವಲ್ಪ ಗಾಳಿಯನ್ನು ಡಬ್ಬದಿಂದ ಹೊರಕ್ಕೆ ಹಾಕಿತು ಎಂದು ಹೇಳಿದನು. ಅದರ ಫಲಿತವಾಗಿ, ಭದ್ರವಾಗಿ ಮುಚ್ಚಲ್ಪಟ್ಟ ಡಬ್ಬವು ತಣ್ಣಗಾದಾಗ, ಡಬ್ಬದ ಒಳಗಿದ್ದ ಗಾಳಿಯ ಒತ್ತಡವು ಅದರ ಹೊರಗಿದ್ದ ಗಾಳಿಯ ಒತ್ತಡಕ್ಕಿಂತಲೂ ಕಡಿಮೆಯಾಗಿತ್ತು. ಆದ್ದರಿಂದಲೇ ಹೊರಗಿನ ಒತ್ತಡವು ಡಬ್ಬದ ಬದಿಗಳು ಒಳಮುಖವಾಗಿ ಕುಸಿಯುವಂತೆ ಮಾಡಿತ್ತು. ನಮ್ಮಲ್ಲಿ ಬಹಳ ಮಂದಿಗೆ ಗಾಳಿಯ ಒತ್ತಡದ ಬಗ್ಗೆ ಸಜ ಅರಿವು ಇರುವದಿಲ್ಲ, ಆದರೆ ಅದು ಇದ್ದೇ ಇದೆ. ಸಮುದ್ರ ಮಟ್ಟದಲ್ಲಿ, ಒತ್ತಡವು ಒಂದು ಚದರ ಇಂಚಿಗೆ ಗಾಳಿಯ ಒತ್ತಡವು 6.8 ಕಿಲೋಗ್ರಾಂಗಳಷ್ಟಿರುತ್ತದೆ![89] (ನಮ್ಮ ದೇಹಗಳು ಕುಸಿಯುವದಿಲ್ಲ ಯಾಕೆಂದರೆ ದೇಹದ ಹೊರಗಿನ ಹಾಗೂ ಒಳಗಿನ ಒತ್ತಡವು ಒಂದೇ ರೀತಿಯಾಗಿರುತ್ತದೆ.)

ವರ್ಷಗಳ ಬಳಿಕ, ನಾನು ರೋಮಾ 12:2ನ್ನು ಅಧ್ಯಯನ ಮಾಡುತ್ತಿದ್ದ ವೇಳೆಯಲ್ಲಿ, ನಾನು ಗಾಳಿಯ ಒತ್ತಡದ ಕುರಿತ ಆ ಪ್ರಯೋಗದ ಪ್ರದರ್ಶನವನ್ನು ನೆನಪಿಸಿಕೊಂಡೆನು. ನಾನು ಹೀಗಂದುಕೊಂಡೆನು, "ಅನೇಕ ಜನರಿಗೆ ಲೋಕದ ಜೀವನಶೈಲಿಯನ್ನು ಅನುಸರಿಸಬೇಕೆಂಬ ಒತ್ತಡ ಲೋಕದಲ್ಲಿರುವ ಬಗ್ಗೆ ಅರಿವು ಇರುವದಿಲ್ಲ. ಅವರಲ್ಲಿ ಆ ಒತ್ತಡವನ್ನು ಎದುರಿಸಿ ನಿಲ್ಲುವಂತೆ ಶಕ್ತಗೊಳಿಸುವ ಯಾವದೂ ಅವರೊಳಗೆ ಇಲ್ಲದಿರುವ ಕಾರಣದಿಂದ ಅವರು ಆ ಒತ್ತಡಕ್ಕೆ ಒಳಪಡಿಸಿಕೊಳ್ಳುತ್ತಾರೆ." ತತ್ಪರಿಣಾಮವಾಗಿ, ಪೌಲನು ಹೇಳಿದ್ದೇನೆಂದರೆ, ಲೋಕವು ನಮ್ಮನ್ನು "ಹಿಸುಕಿ ಅದರ ಅಚ್ಚಿನಲ್ಲಿ ತೂರುಕುವದಕ್ಕೆ" ಮಾಡುವ ಒತ್ತಡವನ್ನು ದೂರವಿಡುವದಕ್ಕೆ ಇರುವ ದಾರಿಯೆಂದರೆ ನೂತನಮನಸ್ಸು ಹೊಂದಿಕೊಳ್ಳುವ ಮೂಲಕ ಆ ಒತ್ತಡವನ್ನು ಪ್ರತಿತೋಲನ ಮಾಡುವದೇ.

ನಾವು ನೂತನಮನಸ್ಸನ್ನ ಹೊಂದಿಕೊಳ್ಳುವದಕ್ಕೆ (ದೇವರ ಸಹಾಯದಿಂದ) ಏನನ್ನು ಮಾಡಬಲ್ಲೆವು? ಬಹುಶಃ, ನಾವು ತೆಗೆದುಕೊಳ್ಳಬಲ್ಲ ಅತ್ಯಂಥ ಪ್ರಾಮುಖ್ಯವಾದ ಕ್ರಮವೆಂದರೆ ನಮ್ಮ ಮನಸ್ಸುಗಳನ್ನು ನಮ್ಮನ್ನು ಕೆಳಕ್ಕೇಳೆಯುವಂಥದ್ದರ ಬದಲಾಗಿ ನಮ್ಮನ್ನು ಮೇಲಕ್ಕೆತ್ತುವಂಥ ಸಂಗತಿಯಿಂದ ತುಂಬಿಸಿಕೊಳ್ಳಬೇಕು. ನಮ್ಮ ಮನಸ್ಸುಗಳು ನಿರಂತರವಾಗಿ ಲೋಕದ ಅನೈತಿಕ, ಭಯಭಕ್ತಿಯಿಲ್ಲದ, ಮತ್ತು ಸ್ವಾರ್ಥ—ಚಿಂತನೆಯಿಂದ ಕೂಡಿದ ಪ್ರಭಾವಕ್ಕೆ ಒಳಗಾದರೆ, ನಮ್ಮ ಮನಸ್ಸುಗಳನ್ನು ನೂತನಪಡಿಸಿಕೊಳ್ಳುವದು ಹೆಚ್ಚುಕಡಿಮೆ ಅಸಾಧ್ಯವೇ ಆಗಿರುತ್ತದೆ. ಬೇರೊಂದು ಕಡೆಯಲ್ಲಿ, ಪೌಲನು ಹೀಗೆ ಬರೆದಿರುತ್ತಾನೆ, ". . . ಯಾವದು ಸತ್ಯವೂ ಮಾನ್ಯವೂ ನ್ಯಾಯವೂ ಶುದ್ಧವೂ ಪ್ರೀತಿಕರವೂ ಮನೋಹರವೂ ಆಗಿದೆಯೋ, ಯಾವದು ಸದ್ಗುಣವಾಗಿದೆಯೋ, ಯಾವದು ಕೀರ್ತಿಗೆ ಯೋಗ್ಯವೋ*, ಅವೆಲ್ಲವುಗಳನ್ನೂ ಲಕ್ಷ್ಯಕ್ಕೆ ತಂದುಕೊಳ್ಳಿರಿ"* (ಫಿಲಿಪ್ಪಿ 4:8; ಒತ್ತಿ ಹೇಳಿದ್ದು ನನ್ನದು).

ನಾವು ನಮ್ಮ ಮನಸ್ಸುಗಳನ್ನ ದೇವರ ವಾಕ್ಯದಿಂದ ತುಂಬಿಸಿಕೊಳ್ಳುವ ಅಗತ್ಯವಿರುತ್ತದೆ; ಇದನ್ನು ನಾವು ಬೈಬಲ್ ಓದುವಿಕೆ ಮತ್ತು ಅಧ್ಯಯನದ ಮೂಲಕ ಮಾಡುವವರಾಗಿದ್ದೇವೆ. ನಮ್ಮ ಆಲೋಚನೆಗಳು ದೇವರ ಮೇಲೆ ಗಮನ ಹರಿಸಿರಬೇಕು; ಈ ಗಮನಹರಿಸುವಿಕೆಯನ್ನು ನಾವು ಧ್ಯಾನ ಮತ್ತು ಪ್ರಾರ್ಥನೆ, ಮತ್ತು ದೇವರು ಉಂಟು

ಮಾಡಿರುವ ಅದ್ಭುತವಾದ ಜಗತ್ತನ್ನು ಪರಿಗಣಿಸುವ ಮೂಲಕ ಸಾಧಿಸಿಕೊಳ್ಳಬಹುದಾಗಿದೆ (ನೋಡಿರಿ 1:20). ನಾವು ತಮ್ಮ ಜೀವನಗಳಲ್ಲಿ ಆತ್ಮೀಕತೆಗೆ ಒತ್ತು ಕೊಡುವಂತಹ ಜನರ ಸಂಗಡ ಸಹವಾಸವನ್ನಿಟ್ಟುಕೊಳ್ಳಬೇಕು; ಇದನ್ನು ನಾವು ಕ್ರೈಸ್ತ ಅನ್ಯೋನ್ಯತೆ ಹಾಗೂ ಆರಾಧನೆಯ ಮೂಲಕ ಮಾಡುತ್ತೇವೆ. ಎಲ್ಲಕ್ಕಿಂತ ಮೇಲಾಗಿ, ನಾವು ನಮ್ಮ ದೃಷ್ಟಿಯನ್ನು ಯೇಸುವಿನ ಮೇಲಿಟ್ಟವರಾಗಿ ಆತನ ಸಾರೂಪ್ಯವುಳ್ಳವರಾಗುವದಕ್ಕೆ ಶ್ರಮಿಸಬೇಕು. "ನಾವೆಲ್ಲರು ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ" (2 ಕೊರಿಂಥ 3:18). ಈ ವಿಧದಲ್ಲಿ, ಅಂತರ್ಯವು "ದಿನೇದಿನೇ ಹೊಸದಾಗುತ್ತಾ ಬರುತ್ತದೆ" (2 ಕೊರಿಂಥ 4:16). ನಾವು ಹೊರಗೆ (ದೇಹ) ಮತ್ತು ಒಳಗೆ (ಮನಸ್ಸು) ಎರಡರಲ್ಲಿಯೂ ರೂಪಾಂತರಗೊಳ್ಳುವೆವು.

ನೀವು ರೂಪಾಂತರಗೊಂಡ ಜೀವಿತವನ್ನು ನಡಿಸುತ್ತೀದ್ದಿರೋ? ರೂಪಾಂತರವು ಬದಲಾವಣೆಗೆ ಸಂಬಂಧಿಸಿದ್ದಾಗಿದೆ, ಮತ್ತು ಬದಲಾವಣೆಯು ಸುಲಭವಾದದ್ದಲ್ಲ. ಜೀವಿತಕಾಲದಿಂದ ಇರುವ ನಡವಳಿಕೆಯ ಅತ್ಯಂಥ ಆಳವಾದ ಹಲ್ಲದ ಜಾಡುಗಳಿಂದ ಹೊರಬರುವದು ಕಠಿಣವಾದದ್ದು—ಆದರೆ ನಾವು ದೇವರ ಸಹಾಯದೊಂದಿಗೆ ಬದಲಾಗಬಹುದಾಗಿದೆ. ಆತನನ್ನು ಅವಲಂಭಿಸುವವರಾಗಿ, ನಾವು ಪೌಲನು ನೀಡುವ ಸವಾಲನ್ನು ಸಂಧಿಸಬಲ್ಲೆವು.

ನೀವು ಪಶ್ಚಾತ್ತಾಪಪಟ್ಟ ವಿಶ್ವಾಸಿಯಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು "ಜೀವದಿಂದೆದ್ದು *ಹೊಸಬರಾಗಿ* ನಡಕೊಳ್ಳುವ . . ." ವೇಳೆಯಲ್ಲಿ ರೂಪಾಂತರಗೊಳ್ಳುವಿಕೆಯು ಆರಂಭವಾಗುತ್ತದೆ (6:4; ಒತ್ತಿ ಹೇಳಿದ್ದು ನನ್ನದು). ನೀವು ನಿಮ್ಮ ಮನಸ್ಸುಗಳನ್ನು "ಶರೀರಭಾವಕ್ಕೆ . . . ಸಂಬಂಧಪಟ್ಟವುಗಳ ಮೇಲೆ" ಇಡದೆ "ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ" ಇಡುವವರಾಗುವಾಗ ಆ ಬದಲಾವಣೇಯು ಮುಂದುವರೆಯುವದಾಗಿದೆ (8:5).

## ನೀವು ವಿಶೇಷವಾದವರು! (12:3-8)

ನಿಮ್ಮ ಮುಂದಿರುವ ಮೇಜಿನ ಮೇಲೆ ಒಂದು ಕಾಗದದ ತುಂಡು ಬಿದ್ದಿದೆ ಎಂದು ಕಲ್ಪಿಸಿಕೊಳ್ಳಿರಿ. ಈ ಬೋಧನೆಗಳು ಪುಟದ ತುದಿಯ ಹತ್ತಿರ ಈ ಸೂಚನೆಗಳು ಇರುತ್ತವೆ: "ಒಬ್ಬ ವ್ಯಕ್ತಿಯನ್ನು ವಿಶೇಷವಾಗಿಸುವ ಸಂಗತಿಗಳ ಪಕ್ಕದಲ್ಲಿ ಸರಿ ಗುರುತು ಹಾಕಿರಿ." ಆ ಸೂಚನೆಗಳ ಕೆಳಗಡೆಯಲ್ಲಿದ್ದ ಅಂಥ ಲಕ್ಷಣಗಳನ್ನೊಳಗೊಂಡ ಒಂದು ಪಟ್ಟಿಯು ಇವುಗಳನ್ನು ಹೊಂದಿತ್ತು:

ಸೌಂದರ್ಯ ಅಥವಾ ಚೆಲುವು ಉಳ್ಳವನು.
ಸಾಕಷ್ಟು ಹಣ ಮತ್ತು ಅನೇಕ ಸ್ವತ್ತುಗಳುಳ್ಳವನು.
ಪ್ರಸಿದ್ಧಿಯಾಗಿರುವದು; ಎಲ್ಲರ ಮೆಚ್ಚಿಕೆಗೆ ಪಾತ್ರವಾಗಿರುವದು.
ಇತರರ ಮೇಲೆ ಅಧಿಕಾರ ಮತ್ತು ಶಕ್ತಿಯನ್ನು ಹೊಂದಿರುವದು.

ಪ್ರಖ್ಯಾತವಾದ ಮನರಂಜನೆ ಅಥವಾ ರಾಜಕೀಯ ಕ್ಷೇತ್ರದ ವ್ಯಕ್ತಿಯಾಗಿರುವದು.
ನಿಮ್ಮ ಛಾಯಚಿತ್ರವು ಸುದ್ದಿಪತ್ರಿಕೆಗಳಲ್ಲಿ ಮತ್ತು ಮ್ಯಾಗಜಿನ್ ಗಳಲ್ಲಿ ಮುದ್ರಿಸಲ್ಪಡುವದು.

ಆ *ಪಟ್ಟಿಯಲ್ಲಿ* ಬಹಳ ತಳದಲ್ಲಿ, ಈ ಅಂಶವಿರುತ್ತದೆ:

ದೇವರ ಒಬ್ಬ ಮಗುವಾಗಿರುವದು.

ಇವುಗಳಲ್ಲಿ ಯಾವ ಅಂಶಗಳಿಗೆ ನೀವು ಸರಿ ಗುರುತು ಹಾಕುವಿರಿ? ಇದಾದ ಮೇಲೆ, ಒಬ್ಬ ಲೌಕಿಕಮನಸ್ಸಿನ ವ್ಯಕ್ತಿಯ ಆಲೋಚನೆಯಲ್ಲಿ ಯಾವ ಸಂಗತಿಗಳು ಒಬ್ಬನನ್ನು "ವಿಶೇಷ" ಆಗಿಸುತ್ತವೆಂಬುದರ ಬಗ್ಗೆ ಆಲೋಚಿಸಿರಿ. ನಾವು ಎಚ್ಚರಿಕೆಯಿಂದಿಲ್ಲವಾದಲ್ಲಿ, ನಮಗೆ ತಿಳಿಯದೆಯೇ ನಾವು ಲೋಕದ ಮೌಲ್ಯ ವ್ಯವಸ್ಥೆಯನ್ನು ಅಂಗೀಕರಿಸಿಕೊಳ್ಳುವದಕ್ಕೆ ಸಾಧ್ಯವಿರುತ್ತದೆ. ಪೌಲನು ನಮಗೆ "ನೂತನ ಮನಸ್ಸನ್ನು ಹೊಂದಿದವರಾಗಿರ್ರಿ" (12:2), ಎಲ್ಲವನ್ನು ಹೊಸದಾದ ರೀತಿಯಲ್ಲಿ ಕಾಣಬೇಕು ಎಂದು ಕರೆಕೊಟ್ಟನು.

12:3-8ರಲ್ಲಿ, ನೀವು ದೇವರ ಮಗುವಾಗಿದ್ದರೆ, *ನೀವು ವಿಶೇಷವಾದವರು* ಎಂದು ಪೌಲನು ಹೇಳುತ್ತಾನೆ. ನೀವು ವಿಶೇಷವಾದವರು ಎಂಬುದನ್ನು ತೋರ್ಪಡಿಸುವದಕ್ಕಾಗಿ ಪೌಲನು ಹಲವಾರು ಪುರಾವೆಗಳನ್ನು ಉಪಯೋಗಿಸಿರಬಹುದಿತ್ತು. ಆತನು ನಿಮ್ಮನ್ನು ದೇವರು ರೂಪಿಸಿದ್ದಾನೆ ಮತ್ತು ನೀವು ಅನನ್ಯವಾದವರು ಎಂಬ ವಾಸ್ತವಾಂಶದ ಬಗ್ಗೆ ಮಾತಾಡಿರಬಹುದಿತ್ತು. "ಸೃಷ್ಟಿಯಲ್ಲಿ ಯಾವ ಪ್ರತಿರೂಪಗಳು ಇರುವದಿಲ್ಲ."[90] ನೀವು ಎಷ್ಟೊಂದು ವಿಶೇಷವಾದವರೆಂದರೆ ಕ್ರಿಸ್ತನು ನಿಮಗೋಸ್ಕರ ಶಿಲುಬೆಯ ಮೇಲೆ ಮರಣಿಸಿದನು ಎಂಬದನ್ನು ಆತನು ಒತ್ತಿ ಹೇಳಿರಬಹುದಿತ್ತು. ನೀವು ಪೌಲನ ಜೊತೆಗೂಡಿ "ದೇವಕುಮಾರನು . . . *ನನ್ನನ್ನು* ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು" ಎಂದು ಹೇಳಬಹುದು (ಗಲಾತ್ಯ 2:20; ಒತ್ತಿ ಹೇಳಿದ್ದು ನನ್ನದು). ಹೇಗೂ, 12:3-8ರಲ್ಲಿ ಪೌಲನ ಮಾತುಗಳಿಂದ ಸಿಕ್ಕುವ ಪುರಾವೆ ಏನೆಂದರೆ ದೇವರು ನಿಮಗೆ ಕರ್ತನ ಸಭೆಯಲ್ಲಿ ಕಾರ್ಯಮಾಡುವದಕ್ಕೆ ಅತ್ಯಾವಶ್ಯಕವಾದ ಕನಿಷ್ಠ ಒಂದು ವಿಶೇಷ ವರವನ್ನು ನಿಮಗೆ ಅನುಗ್ರಹಿಸಿರುವದರಿಂದ ನೀವು ವಿಶೇಷವಾದವರು.

ಪೌಲನು 12:4, 5ರಲ್ಲಿ ಸಭೆಯನ್ನು ಮಾನವ ದೇಹಕ್ಕೆ ಹೋಲಿಸಿದನು. ಈ ಸಾದೃಶ್ಯದಿಂದ ಅನೇಕ ಅನ್ವಯಿಕೆಗಳನ್ನು ಮಾಡಬಹುದು (ನೋಡಿರಿ 1 ಕೊರಿಂಥ 12:12-27). ಉದಾಹರಣೆಗೆ, ನಾವು ನಮ್ಮ ವರಗಳನ್ನು ದೇಹ/ಸಭೆಯ ಸನ್ನಿವೇಶದಲ್ಲಿ ಚಲಾಯಿಸುತ್ತೇವೆ ಎಂಬುದನ್ನು ಪೌಲನು ಸ್ಪಷ್ಟಗೊಳಿಸಿದನು. ಇದನ್ನು ಮಾಡಬೇಕೆಂದರೆ, ನಾವು ಒಂದು ಸ್ಥಳಿಯ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರಬೇಕು. ನಮ್ಮ ವಾಕ್ಯಭಾಗವದಲ್ಲಿ ಸೂಚಿತವಾಗಿರುವ ಅಥವಾ ಭಾವಾನುವಾದವಿರುವ ಇತರ ಹಲವಾರು ಅನ್ವಯಿಕೆಗಳನ್ನು ಪಟ್ಟಿ ಮಾಡುತ್ತೇನೆ.

*ದೇಹದ ಪ್ರತಿಯೊಬ್ಬ ಸದಸ್ಯ ನಿಗೂ ಒಂದು ಅಥವಾ ಹೆಚ್ಚು ವರಗಳಿರುತ್ತವೆ (ಕೆಲಸಗಳು); ಯಾರೊಬ್ಬರೂ ಹೊರಗಿಡಲ್ಪಟ್ಟಿರುವದಿಲ್ಲ.* 6ನೇ ವಚನವು ಹೀಗೆ ಹೇಳುತ್ತದೆ, ". . . ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ." ಈ ವರಗಳು ಏನಾಗಿರುತ್ತವೆ? ಬಹಳಷ್ಟು ಜನರು ನಮಗೆ ದೇವರಿಂದ ಕೊಡಲ್ಪಟ್ಟಿರುವ

ಪ್ರತಿಭೆಗಳು ಮತ್ತು ಸಾಮರ್ಥ್ಯಗಳೆಂದು ಭಾವಿಸಿಕೊಳ್ಳುತ್ತಾರೆ, ಮತ್ತು ಪೌಲನು ಪ್ರಾಥಮಿಕವಾಗಿ ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದಾಗಿದೆ. ಬಹುಶಃ ದೇವರು ನಮಗೆ ಕೊಡುವ ವರಗಳನ್ನು ಆತನಿಂದ ನಮಗೆ ಕೊಡಲ್ಪಟ್ಟ ಪ್ರತಿಭೆಗಳು ಮತ್ತು ಸಾಮರ್ಥ್ಯಗಳಾಗಿದ್ದು ಜೊತೆಗೆ ಆ ವರಗಳನ್ನು ಉಪಯೋಗಿಸುವದಕ್ಕೆ ನಮಗೆ ಅಗತ್ಯವಾದದ್ದೆಲ್ಲವನ್ನು ಕೊಡುವಿಕೆ ಎಂದು ಯೋಚಿಸಬಹುದು.

*ಎಲ್ಲಾ ವರಗಳು/ಕೆಲಸಗಳು ಒಂದೇ ಆಗಿರುವದಿಲ್ಲ.* ಪುನಃ 6ನೇ ವಚನವನ್ನು ನೋಡಿರಿ: "ನಮಗೆ ಕೃಪೆಮಾಡಿದ ಪ್ರಕಾರ ನಾವು *ಬೇರೆ ಬೇರೆ* ವರಗಳನ್ನು ಹೊಂದಿದ್ದೇವೆ" (ಒತ್ತಿ ಹೇಳಿದ್ದು ನನ್ನದು). ಕಣ್ಣಿನ ಕೆಲಸವು ಕಿವಿಯ ಕೆಲಸಕ್ಕಿಂತ ವ್ಯತ್ಯಾಸವಾಗಿರುತ್ತದೆ; ಕೈ ಕೆಲಸವು ಹಾಗೂ ಪಾದದ ಕೆಲಸ ಏಕರೀತಿಯಾಗಿರುವದಿಲ್ಲ.

ಅನೇಕ ಬರಹಗಾರರು ನಮ್ಮ ವಾಕ್ಯಭಾಗದಲ್ಲಿನ ಈ ಭಾಗವನ್ನು ಸಭೆಯಲ್ಲಿ ನಂಬಿಕೆಗಳಲ್ಲಿ "ವೈವಿಧ್ಯತೆ"ಯನ್ನು ಮನ್ನನೆ ಮಾಡುವ ಮತ್ತು "ಇತರರ ಅಭಿಪ್ರಾಯಗಳ" ವಿಷಯದಲ್ಲಿ ಸಹಿಷ್ಣುತೆಯೆ ಅಗತ್ಯವಿದೆ ಎಂಬ ಮಾತಾಡುವದಕ್ಕೆ ಒಂದು ಅವಕಾಶವಾಗಿ ಉಪಯೋಗಿಸುತ್ತಾರೆ. ಪೌಲನು ನಂಬಿಕೆಗಳ ವೈವಿಧ್ಯತೆಯ ಬಗ್ಗೆ ಮಾತಾಡುತ್ತಿಲ್ಲ, ಆದರೆ ಕೆಲಸಗಳ ವೈವಿಧ್ಯತೆಯ ಬಗ್ಗೆ ಮಾತಾಡುತ್ತಿದ್ದಾನೆ. 14 ಮತ್ತು 15 ಅಧ್ಯಾಯಗಳಲ್ಲಿ, ನಾವು ಪರಸ್ಪರರ ಅಭಿಪ್ರಾಯಗಳ ವಿಷಯದಲ್ಲಿ ಸಹಿಷ್ಣುತೆಯುಳ್ಳವರಾಗಿರಬೇಕು ಎಂದು ಆತನು ಒತ್ತಿ ಹೇಳಿದನು, ಆದರೆ ನಂಬಿಕೆಯ ಕುರಿತು ಏನು? ಒಬ್ಬನು ದೋಷದ ವಿಷಯದಲ್ಲಿ ಸಹಿಷ್ಣುತೆಯುಳ್ಳವನಾಗಿರಬೇಕೆಂದು ಅಪೊಸ್ತಲನ ತಾತ್ಪರ್ಯವಾಗಿತ್ತೊ? 16:17ರಲ್ಲಿ, ಆತನು ಹೀಗೆ ಹೇಳುತ್ತಾನೆ, "ಸಹೋದರರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ ವಿಘ್ನಗಳನ್ನೂ ನಿಮ್ಮಲ್ಲಿ ಉಂಟುಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟುತೊಲಗಿ ಹೋಗಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ."

ನಾವು ಪುನಃ ನಮ್ಮ ಚರ್ಚೆಗೆ ಹಿಂದಿರುಗೋಣ: ಸಭೆಯ ಎಲ್ಲಾ ಸದಸ್ಯರಿಗೂ ಏಕರೀತಿಯ ವರ/ಕೆಲಸಗಳಿರುವದಿಲ್ಲ. ಒಂದು ಕಣ್ಣು ವಾಸನೆ ನೋಡಬೇಕು ಅಥವಾ ಕಿವಿಯು ನೋಡಬೇಕು ಎಂದು ನಾವು ನಿರೀಕ್ಷಿಸುವದಿಲ್ಲ; ನಮ್ಮಲ್ಲಿ ಬಹುತೇಕರಿಗೆ ಕಾಲಿನಿಂದ ವಸ್ತುಗಳನ್ನೆತ್ತಿಕೊಳ್ಳುವದಕ್ಕೆ ಅಥವಾ ನಮ್ಮ ಕೈಗಳಿಂದ ನಡೆದುಹೋಗುವದಕ್ಕೆ ಸಾಧ್ಯವಿರುವದಿಲ್ಲ. ಹೇಗೂ, ನಾವು ಕೆಲವು ಸಾರಿ ಸಭೆಯ ಸದಸ್ಯರೆಲ್ಲರೂ ಒಂದೇ ರೀತಿಯಲ್ಲಿ ನಡೆದುಕೊಳ್ಳಬೇಕು ಎಂದು ಅಪೇಕ್ಷಿಸುತ್ತೇವೆ, ಮತ್ತು ಒಬ್ಬ "ಕಿವಿ" ಸದಸ್ಯನು "ನೋಡುವ" ಕೆಲಸವನ್ನು ಸರಿ ಮಾಡುತ್ತಿಲ್ಲವೆಂದು ಆತನು ಶಿಕ್ಷಿಸಲ್ಪಡುವ ಸಂಭವವಿರುತ್ತದೆ.

*ಪ್ರತಿಯೊಂದು ವರ/ಕೆಲಸ ಪ್ರಾಮುಖ್ಯವಾದದ್ದು.* ಶಾರೀರಿಕ ದೇಹದ ಕೆಲವೊಂದು ಅಂಗಗಳಿಗೆ ಮಿಕ್ಕ ಅಂಗಗಳಿಗಿಂದ ಹೆಚ್ಚು ಗಮನ ಕೊಡಲಾಗುತ್ತದೆ, ಆದರೆ ದೇಹದ ಸೌಖ್ಯ ಹಾಗೂ ಕ್ರಿಯೆಗೆ ಎಲ್ಲಾ ಅಂಗಗಳೂ ಅತ್ಯಾವಶ್ಯಕವಾಗಿರುತ್ತವೆ. ನೀವು ತನ್ನ ದೇಹದ ಅಂಗವೊಂದನ್ನು ಕಳೆದುಕೊಂಡ ಯಾರಾದರೊಬ್ಬರನ್ನು ಬಲ್ಲವರಾಗಿದ್ದೀರೋ? ನೀವು ತನ್ನ ದೇಹದ ಅಂಗಗಳ ಉಪಯೋಗವನ್ನು ಕಳೆದುಕೊಂಡು ರೋಗದ ಹಾಸಿಗೆಯಲ್ಲಿರುವ ಒಬ್ಬರನ್ನು ನೋಡಿದ್ದೀರಾ? ನೀವು ನೋಡಿರುವದಾದರೆ, ನಾನು ಏನು ಹೇಳಬಯಸುತ್ತಿದ್ದೇನೆಂಬುದು ನಿಮಗೆ ಅರ್ಥವಾಗುತ್ತದೆ.

ನನ್ನ ಕುಟುಂಬವು ಅಸ್ಟ್ರೇಲಿಯಾದಲ್ಲಿ ವಾಸಿಸುತ್ತಿದ್ದ ಮತ್ತು ಉದ್ಯೋಗ ಮಾಡುತ್ತಿದ್ದ

ವೇಳೆಯಲ್ಲಿ, ನನ್ನ ಸಹೋದರನಾದ *Coy*ನು ಶಾಲೆಯ ಒಂದು ವರ್ಷವನ್ನು ಅಮೆರಿಕದಲ್ಲಿಯೆ ಕಳೆದನು. ಆ ವರ್ಷದಲ್ಲಿ ನಾನು Macquarie School of Preachingನ ನಿರ್ದೇಶಕನಾಗಿದ್ದೆನು ಮತ್ತು Coyನ ತರಗತಿಗೆ ಪ್ರಸಂಗದ ಬಗ್ಗೆ ಕಲಿಸುತ್ತಿದ್ದೆನು. ನಾನು ವಿದ್ಯಾರ್ಥಿಗಳಿಗೆ ಮಾಡುವದಕ್ಕೆ ನೀಡಿದ ಒಂದು ಅಭ್ಯಾಸದ ಕೆಲಸವೆಂದರೆ ಅವರು ದೃಶ್ಯಸಾಧನಗಳನ್ನು ಉಪಯೋಗಿಸಿ ಒಂದು ಪ್ರಸಂಗವನ್ನು ಮಾಡಬೇಕೆಂಬುದೆ. ಬಹುತೇಕ ವಿದ್ಯಾರ್ಥಿಗಳು ನಕ್ಷೆಗಳನ್ನು ಮತ್ತು ಇತರೆ ಉಪದೇಶ ಸಹಾಯಕಗಳನ್ನು ಸಿದ್ಧಪಡಿಸಿದರು; ಆದರೆ Don Males ಎಂಬ ವಿದ್ಯಾರ್ಥಿಯು, ಕಾಣುವಂಥ ಯಾವದೇ ಸಾಧನಗಳಿಲ್ಲದೆ ತರಗತಿಗೆ ಬಂದಿದ್ದನು. ಆತನು ಮಾತಾಡಬೇಕಾದ ಸರದಿ ಬಂದಾಗ, ಆತನು ರೋಮಾ 12 ಮತ್ತು 1 ಕೊರಿಂಥ 12ರಿಂದ ವಾಕ್ಯಭಾಗಗಳನ್ನು ತನ್ನ ಪ್ರಸಂಗದ ಭಾಗವಾಗಿ ಉಪಯೋಗಿಸಿ ಶಾರೀರಿಕ ದೇಹದ ಅಂಗಗಳ ಬಗ್ಗೆ ಮಾತಾಡಿದನು. ಆತನು ಹೀಗೆ ಹೇಳಿದನು, "ಪ್ರತಿಯೊಂದು ಅಂಗವೂ ಪ್ರಾಮುಖ್ಯವಾದದ್ದು." ಆತನು ತನ್ನ ಕೈಯನ್ನು ಮೇಲಕ್ಕೆತ್ತಿ ಹೀಗೆ ಹೇಳಿದನು, "ಉದಾಹರಣೆಗೆ, ನನ್ನ ಕೈಯಲ್ಲಿರುವ ಒಂದೊಂದು ಬೆರಳು ಪ್ರಾಮುಖ್ಯವಾದದ್ದು. ಹೆಬ್ಬೆರಳು ಮತ್ತು ಮಧ್ಯ ಬೆರಳುಗಳು ಪ್ರಾಮುಖ್ಯವಾದವು; ನಾವು ವಸ್ತುಗಳನ್ನು ಎತ್ತಿಕೊಳ್ಳುವದನ್ನು ಅವು ಸಾಧ್ಯವಾಗಿರುತ್ತವೆ. ನಾವು ಮೊದಲ ಬೆರಳನ್ನು ವಸ್ತುಗಳೆಡೆಗೆ ತೋರಿಸಲು ಉಪಯೋಗಿಸುತ್ತೇವೆ. ಮೂರನೆಯ ಬೆರಳಿನಲ್ಲಿ ನಾವು ಉಂಗುರವನ್ನು ಧರಿಸುತ್ತೇವೆ." ಆತನು ತನ್ನ ಕಿರು ಬೆರಳನ್ನು ಎತ್ತಿ ತೋರಿಸಿದನು. "ಆದರೆ ಈ ಕಿರು ಬೆರಳಿನ ವಿಷಯವೇನು?" "ಅದು ಯಾವದಕ್ಕೆ ಪ್ರಯೋಜವುಳ್ಳದ್ದು?" ಎಂದು ಕೇಳಿ ಒಂದು ಕ್ಷಣ ಸುಮ್ಮನಿದ್ದು ಹೀಗೆ ಕೇಳಿದನು, "ನಿಮಗೆ ಎಂದಾದರೂ ಕಿವಿ ತೀಟೆಗೊಂಡದ್ದುಂಟೋ?" ಆತನು ತನ್ನ ಕಿರು ಬೆರಳನ್ನು ತನ್ನ ಕಿವಿಯಲ್ಲಿಟ್ಟು ಕಿವಿಯ ಒಳಗೆ ಇರಿಸುವವನಾಗಿ ಕೆರೆದುಕೊಂಡನು. ಆತನು ಕೆರೆದು ನಿಟ್ಟುಸಿರು ಬಿಟ್ಟಂತೆ ನಟಿಸಿ ಹೀಗೆ ಹೇಳಿದನು, "ಹೌದು, ಒಂದೊಂದು ಅಂಗವೂ ಪ್ರಾಮುಖ್ಯವಾದದ್ದು!"

ಪೌಲನು 5ನೇ ವಚನವನ್ನು "ನಾವೆಲ್ಲರೂ ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ" ಎಂದು ಹೇಳುವ ಮೂಲಕ ಮುಕ್ತಾಯಗೊಳಿಸಿದನು. ABಯಲ್ಲಿ "ಒಬ್ಬರಿಗೊಬ್ಬರು ಅಂಗಗಳಾಗಿದ್ದೇವೆ—ಪರಸ್ಪರ ಒಬ್ಬರ ಮೇಲೊಬ್ಬರು ಅವಲಂಭಿತರು" ಎಂದಿರುತ್ತದೆ. ನನ್ನ ಶಾರೀರಿಕ ದೇಹ ಅಂಗಕ್ಕೆ ಹೇಗೆ ಮಿಕ್ಕ ಎಲ್ಲಾ ಅಂಗಗಳ ಅಗತ್ಯತೆಯಿರುವದೋ, ಹಾಗೆಯೇ ಆತ್ಮೀಕ ದೇಹಕ್ಕೆ (ಸಭೆ) ದೇಹದ ಮಿಕ್ಕ ಎಲ್ಲಾ ಅಂಗಗಳ ಅಗತ್ಯತೆ ಇರುತ್ತದೆ. ಅಪ್ರಾಮುಖ್ಯತೆಯ ಅಂಗಗಳು ಅಥವಾ ಅಪ್ರಾಮುಖ್ಯತೆಯ ವರಗಳು ಎಂಬುದಿರುವದಿಲ್ಲ.

*ನಮಗೆ ಪ್ರತಿಯೊಂದು ವರವು ಉಪಯೋಗಿಸುವದಕ್ಕಾಗಿ ಕೊಡಲ್ಪಟ್ಟಿದೆ.* 6ನೇ ವಚನವನ್ನು ಮತ್ತೊಮ್ಮೆ ಓದಿರಿ: "ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ, ಅವುಗಳನ್ನು ಅದರಂತೆಯೇ ಉಪಯೋಗಿಸಬೇಕು" (NASB). ದೇವರು ನಮಗೆ ವರಗಳನ್ನು ಕೊಟ್ಟಿದ್ದಾನೆ ಮತ್ತು ನಾವು ಅವುಗಳನ್ನು ಉಪಯೋಗಿಸಬೇಕೆಂದು ಆತನು ಅಪೇಕ್ಷಿಸುತ್ತಾನೆ. ನೀವು ಒಬ್ಬರಿಗೆ ಒಂದು ಉಡುಗೋರೆಯನ್ನು ಕೊಡುತ್ತೀರಿ, ಆದರೆ ಆತನು (ಅಥವಾ ಅವಳು) ಅದನ್ನು ಉಪಯೋಗಿಸುವದನ್ನು ಎಂದಿಗೂ ನೋಡಲೇ ಇಲ್ಲವೆಂದರೆ ನಿಮಗೆ ಹೇಗನ್ನಿಸುತ್ತದೆ?

6ರಿಂದ 8 ವಚನಗಳಲ್ಲಿ ಪಟ್ಟಿ ಮಾಡಲಾಗಿರುವ ವರಗಳಲ್ಲಿ ಇವುಗಳು ಸೇರಿರುತ್ತವೆ: ಪ್ರವಾದಿಸುವದು, ಸಭಾಸೇವೆ, ಬೋಧಿಸುವದು, ಬುದ್ಧಿಹೇಳುವದು, ದಾನ ಕೊಡುವದು, ಹಿರೀತನ ನಡಿಸುವದು, ಮತ್ತು ಉಪಕಾರ ಮಾಡುವದು. ಇಂದು ಪ್ರವಾದಿಸುವ ವರವನ್ನು ಅನ್ವಯಿಕೆ ಮಾಡುವದಕ್ಕಿರುವ ಒಂದು ಸಾಧ್ಯತೆಯೆಂದರೆ ಕೆಲವು ಕ್ರೈಸ್ತ ವ್ಯಕ್ತಿಗಳಿಗೆ ದೇವರ ವಾಕ್ಯವನ್ನು ಸಾರ್ವಜನಿಕವಾಗಿ ಬೋಧಿಸುವ ಅಥವಾ ಮಾತಾಡುವ–ಒಂದು ಅರ್ಥದಲ್ಲಿ "ದೇವರಿಗಾಗಿ ಮಾತಾಡುವ"–ವರವು ಇರುತ್ತದೆ. (ಈ ಸಾಮರ್ಥ್ಯವು ಪ್ರತಿಯೊಬ್ಬನಿಗೂ ಇರುವದಿಲ್ಲ. ದೇಹದ ದೃಷ್ಟಾಂತವನ್ನು ಉಪಯೋಗಿಸಿ ಹೇಳುವದಾದರೆ, ದೇವರು ಪ್ರತಿಯೊಬ್ಬನನ್ನು ಒಂದು ಬಾಯಿಯಾಗಿ ರೂಪಿಸಲಿಲ್ಲ.)

*ಒಂದು ಸವಾಲು.* ನಾವು ವರಗಳನ್ನ ಪಟ್ಟಿ ಮಾಡುತ್ತಿರುವ ವೇಳೇ, ನೀವು "ಬಹುಶಃ ದೇವರು ನನಗೆ ಈ ವರವನ್ನು ಅನುಗ್ರಹಿಸಿರಬಹುದು"? ಅಂದುಕೊಂಡಿರೋ? ಸಭೆಯ ಪ್ರತಿಯೊಬ್ಬ ಸದಸ್ಯನು ಅವನ ಅಥವಾ ಅವಳ ವರ ಯಾವದು ಎಂಬದುನ್ನು ನಿರ್ಧರಿಸಿ ಅದನ್ನು ಉಪಯೋಗಿಸುವದಕ್ಕಿಂತ ಕೆಲವು ಸಂಗತಿಗಳು ಪ್ರಾಮುಖ್ಯವಾಗಿರುತ್ತವೆ. ಪ್ರತಿಯೊಬ್ಬ ಸದಸ್ಯನೂ ಅವನು ಅಥವಾ ಅವಳು ಮಾಡಶಕ್ತ ಕಾರ್ಯದಲ್ಲಿಯೇ ಮಗ್ನರಾಗಿರುವ ಒಂದು ಸಭೆಯನ್ನು ಕಲ್ಪಿಸಿಕೊಳ್ಳಬಲ್ಲಿರಾ? ಆ ಸಭೆಯು ಒಳಿತಿಗಾಗಿ ಎಂಥ ಒಂದು ಶಕ್ತಿಯಾಗಿರಬಲ್ಲದು!

ಈ ಹೊತ್ತಿಗಾಗಲೇ, ಕೆಲವರು ಹೀಗೆ ಕೇಳುತ್ತಿದ್ದಾರೆ, "ದೇವರು ನನಗೆ ಯಾವ ವರವನ್ನು ಕೊಟ್ಟಿದ್ದಾನೆಂಬದನ್ನು ನಾನು ಹೇಗೆ ತಿಳಿಯಬಲ್ಲೆ?" ವಿವಿಧ ಸಲಹೆಗಳು ಕೊಡಲ್ಪಟ್ಟಿರುತ್ತವೆ. James O. Baird ಒಂದು ಸಂಭಾವ್ಯ ಕಾರ್ಯವಿಧಾನದ ಸಂಕ್ಷೇಪ್ತವಿವರಣೆ ಕೊಡುತ್ತಾನೆ:[91]

- ನೀವು ಮಾಡಲು *ಶಕ್ತವಾಗಿರುವ*, ನಿಮಗೆ ಪರಿಣಿತಿಯಿರುವ, ಮತ್ತು ಮಾಡುವದಕ್ಕೆ ಇಷ್ಟಪಡುವಂಥ ಸಂಗತಿಗಳನ್ನು ಬರೆಯಿರಿ.
- ಸಭೆಯಲ್ಲಿ *ಏನು ಮಾಡಲ್ಪಡುವ ಅಗತ್ಯವಿರುತ್ತದೆಂ*ಬದನ್ನು ಬರೆಯಿರಿ: ಆರಾಧನೆಯಲ್ಲಿ, ಸೇವೆಯ ಯೋಜನೆಗಳಲ್ಲಿ, ನಿರಂತರವಾದ ಅಗತ್ಯತೆಗಳು, ಕೊರತೆಗಳುಳ್ಳ ಜೊತೆ ಸದಸ್ಯರ ವಿಷಯದಲ್ಲಿ, ಮತ್ತು ಇತ್ಯಾದಿಗಳ ವಿಷಯದಲ್ಲಿ.
- ಎರಡು ಪಟ್ಟಿಗಳನ್ನು ಹೋಲಿಕೆ ಮಾಡಿರಿ. ನಿಮ್ಮ ಪ್ರತಿಭೆಗಳು ಮತ್ತು ಸಾಮರ್ಥ್ಯಗಳು ಎಲ್ಲಿ ಸರಿಹೊಂದುತ್ತವೆಂದು ತಿಳಿಯಲು ಪ್ರಯತ್ನಿಸಿರಿ. ಹೇಗೂ, ನೀವು ನಿಮ್ಮನ್ನು ಈಗ ಸದ್ಯಕ್ಕೆ ಮಾಡುವದಕ್ಕೆ ಶಕ್ತವಾಗಿರುವ ಸಂಗತಿಗೆ ಮಾತ್ರವೇ ಸಿಮೀತಗೊಳಿಸಿಕೊಳ್ಳಬೇಡಿರಿ. ನಿಮ್ಮಲ್ಲಿ ನೀವೇ, "ನಾನು ಯಾವ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬಲ್ಲೆನು?" ಎಂಬದಾಗಿ ಕೇಳಿಕೊಳ್ಳಿರಿ.
- ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸಿರಿ (ಇದನ್ನು ಪ್ರತಿ ಹೆಜ್ಜೆಗೂ ಮಾಡತಕ್ಕದ್ದು.)
- ಇತರ ಜನರ ಸಮಾಲೋಚನೆಯನ್ನು ಆಕಾಂಕ್ಷಿಸಿರಿ: ಹಿರಿಯರು, ಸಭಾಸೇವಕರು, ಬೋಧಕರು ಮತ್ತು ಇತರ ಅನುಭವಿ ಕ್ರೈಸ್ತರು.
- ಪರ್ಯಾಲೋಚನೆಗೆ ಸಮಯ ಕೊಡಿ.

ಅಂತಿಮವಾಗಿ, ನೀವು ಏನು ಮಾಡಶಕ್ತರೋ ಅದನ್ನು ಮಾಡುವದಕ್ಕಾಗಿ ಒಂದು ತೀರ್ಮಾನ ಕೈಗೊಳ್ಳಿರಿ. ನಿಮ್ಮನ್ನು ಅದಕ್ಕೆ ಸಮರ್ಪಿಸಿಕೊಳ್ಳಿರಿ, ಮತ್ತು ಅದನ್ನು *ಮಾಡುವದಕ್ಕೆ* ಆರಂಭಿಸಿರಿ.

ಇಲ್ಲಿ ಒಂದು ಎಚ್ಚರಿಕೆಯ ಮಾತು ಸೂಕ್ತವಾಗಿರುತ್ತದೆ. ಒಬ್ಬರು ಹೀಗೆ ತೀರ್ಮಾನಿಸಿಕೊಳ್ಳುತ್ತಿರುವದನ್ನು ಊಹಿಸಿಕೊಳ್ಳಬಲ್ಲೆನು, ಏನೆಂದರೆ, "ನನಗೆ ಬೋಧಿಸುವ ವರವಿದೆ, ಆದ್ದರಿಂದ ನಾನು ಕನಿಕರ ತೋರುವ ಅಗತ್ಯವಿಲ್ಲ" ಅಥವಾ "ನನಗೆ ಬುದ್ಧಿಹೇಳುವ ವರವಿದೆ, ಆದ್ದರಿಂದ ನಾನು ದಾನಕೊಡುವ ಅಗತ್ಯವಿಲ್ಲ." ನಾವು ಈ ಏಳು ವರಗಳಲ್ಲಿ ಸ್ವಲ್ಪ ಮಟ್ಟಿಗಾದರೂ ತೊಡಗಿಸಿಕೊಂಡಿರಬೇಕೆಂದು ಬೈಬಲ್ ನಮಗೆ ಆಜ್ಞಾಪಿಸುತ್ತದೆ:

ಸುವಾರ್ತೆಯ ಬೋಧನೆ, ದೇವರಿಗಾಗಿ "ವಕ್ತಾರ" ಆಗಿರುವದು (ಮತ್ತಾಯ 28:19, 20; ಮಾರ್ಕ 16:15, 16).
ಸೇವೆ ಮಾಡುವದು (ರೋಮಾ 12:11; ಗಲಾತ್ಯ 5:13).
ಬೋಧಿಸುವದು (ಇಬ್ರಿಯ 5:12).
ಬುದ್ಧಿಹೇಳುವದು (ಇಬ್ರಿಯ 3:13; 10:24, 25).
ದಾನ ಕೊಡುವದು (ಲೂಕ 6:38; ರೋಮಾ 12:13; 1 ಕೊರಿಂಥ 16:1, 2, 2 ಕೊರಿಂಥ 8; 9).
ಹಿರೀತನ ನಡಿಸುವದು (1 ತಿಮೊಥೆ 3:4, 12). (ಸಭೆಯ ನಾಯಕತ್ವವು [ಹಿರೀತನವು] ಪುರುಷರಿಗೆ ಮಾತ್ರವೇ ಸಿಮೀತವಾಗಿದೆ.)
ಕನಿಕರ ತೋರುವದು (ಲೂಕ 10:37; ಕೊಲೊಸ್ಸೆ 3:12).

ನಮಗೆ ಯಾವ ವರವಿದೆಯೆಂದು ನಿರ್ಧರಿಸುವದಕ್ಕಿಂತಲೂ ಕ್ರೈಸ್ತರಾಗಿ ನಾವು ಏನು ಮಾಡತಕ್ಕದ್ದು ಎಂಬದೇ ಒಂದು ಮುಖ್ಯ ವಿಷಯವಾಗಿರುತ್ತದೆ; ಬೈಬಲ್ ನಮಗೆ ಆ ವಿಷಯದಲ್ಲಿ ಸಾಮಾನ್ಯವಾದ ಸೂಚನಾಸಲಹೆಗಳನ್ನು ನೀಡುತ್ತದೆ. ಬದಲಾಗಿ, ಅದು ನಮ್ಮ ಕ್ರೈಸ್ತ ಸೇವೆಯಲ್ಲಿ ಯಾವದಕ್ಕೆ ಒತ್ತುಕೊಡಬೇಕೆಂಬುದನ್ನು ನಿರ್ಧರಿಸುವದೇ ಆಗಿರುತ್ತದೆ. ಬದಲಾಗಿ, ಇದು ನಮ್ಮ ಕ್ರೈಸ್ತ ಸೇವೆಯಲ್ಲಿ ಯಾವುದಕ್ಕೆ ಒತ್ತು ಕೊಡಬೇಕೆಂಬುದನ್ನು ನಿರ್ಧರಿಸುವದರ ವಿಷಯವಾಗಿರುತ್ತದೆ. ನಾನು ಕಾಲೇಜಿಗೆ ಹೋಗುತ್ತಿರುವ ವೇಳೆಯಲ್ಲಿ, ನಾನು ಪದವೀಧರನಾಗಬೇಕೆಂದರೆ ಅನೇಕ ವಿಷಯಗಳನ್ನು—ಆಂಗ್ಲ, ಇತಿಹಾಸ, ಮತ್ತು ವಿಜ್ಞಾನ ಸೇರಿದಂತೆ—ಅಧ್ಯಯನ ಮಾಡಬೇಕಾಗಿತ್ತು. ಹೇಗೂ, ನನ್ನ ಬಹುಪಾಲು ಸಮಯವನ್ನು ಬೈಬಲ್ ಮತ್ತು ಬೈಬಲ್ ಸಂಬಂಧಿತ ವಿಷಯಗಳನ್ನು ಅಧ್ಯಯನ ಮಾಡುವದರಲ್ಲಿಯೇ ಕಳೆಯುತ್ತಿದ್ದೆನು. ಕಾಲೇಜಿನಲ್ಲಿ ಉಪಯೋಗಿಸಿದ ಪದವಾದ "ಬೈಬಲ್" ನನ್ನ "ಪ್ರಧಾನ ಪಠ್ಯ" ವಿಷಯವಾಗಿತ್ತು. ಇದನ್ನ ನಮ್ಮ ಚರ್ಚೆಯ ವಿಷಯಕ್ಕೆ ಅನ್ವಯಿಸುವದಾದರೆ, ನಮ್ಮ ವರ ಅಥವಾ ವರಗಳು ನಮ್ಮ ಆತ್ಮೀಕ "ಪ್ರಧಾನ ಪಠ್ಯವಿಷಯ"ವನ್ನು ನಿರ್ಧರಿಸತಕ್ಕದ್ದು.

*ನಾವು ಏಕೆ ನಮ್ಮ ವರಗಳನ್ನು ಉಪಯೋಗಿಸಬೇಕು?* ದೇವರು ನಮಗೆ ವರಗಳನ್ನು ಅನುಗ್ರಹಿಸಿದ್ದಾನೆ, ಮತ್ತು ನಾವು ಅವುಗಳನ್ನು ಉಪಯೋಗಿಸಬೇಕೆಂದು ಆತನು ನಿರೀಕ್ಷಿಸುತ್ತಾನೆ. ನಿಮ್ಮ ವರಗಳನ್ನು ಕಂಡುಹಿಡಿದು ಅವುಗಳನ್ನು ಉಪಯೋಗಿಸುವದು

ವ್ಯಾಪಕವಾಗಿ ತಲುಪುವ ಫಲಿತಗಳನ್ನು ನೀಡುವದು. ಅದು ಒಬ್ಬ ಕ್ರೈಸ್ತನಾಗಿ ನಿಮಗೆ ಸಂತೋಷವನ್ನುಂಟು ಮಾಡುವದು. (ನನ್ನ ಮನಸ್ಸಿನಲ್ಲಿ, "ಸಭೇಯಲ್ಲಿ ಕೊನೆಗೂ ನಾನು ನನ್ನ ಸ್ಥಾನವನ್ನು ಕಂಡುಕೊಂಡಿದ್ದೇನೆ!" ಎಂದು ನನಗೆ ಹೇಳಿರುವವರ ಮುಖದಲ್ಲಿ ಮಂದಹಾಸವನ್ನು ಕಾಣಬಲ್ಲೆನು) ಅದು ನಿಮ್ಮನ್ನು ಕರ್ತನಿಗೆ ನಂಬಿಗಸ್ತರಾಗಿ ಉಳಿಯುವಂತೆ ಮಾಡುವದು. ಅದು ಸಭೆಯಲ್ಲಿ ಭಕ್ತಿವೃದ್ಧಿ ಮಾಡುವದು (ಎಫೆಸ 4:12). ಅದು ಇತರರ ಜೀವಿತಗಳನ್ನು ಆಶೀರ್ವದಿಸುವದು ಮತ್ತು ಅದು ದೇವರನ್ನು ಮಹಿಮೆ ಪಡಿಸುವದು (1 ಪೇತ್ರ 4:11).

ನಾವು ದೇಹದ "ಅಂಗಗಳು" ಆಗಿದ್ದೇವೆ ಎಂಬುದನ್ನು ಮರೆಯಬೇಡಿರಿ (12:4, 5): "ಕಣ್ಣುಗಳು," "ಕಿವಿಗಳು," "ಕೈಗಳು," "ಪಾದಗಳು," ಮತ್ತು ಇತ್ಯಾದಿ. ಒಂದು ಕಣ್ಣು ನೋಡದಿದ್ದರೆ, ಅದು ತನ್ನ ಅಸ್ತಿತ್ವದ ಉದ್ದೇಶವನ್ನೇ ಕಳೆದುಕೊಂಡದ್ದಾಗಿದೆ; ಒಂದು ಕಿವಿಯು ಆಲಿಸದಿದ್ದರೆ, ಅದು ತನ್ನ ಇರುವಿಕೆಯ ಉದ್ದೇಶವನ್ನೇ ಕಳೆದುಕೊಂಡಿದೆ. ಅಷ್ಟುಮಾತ್ರವಲ್ಲದೆ, ನಮ್ಮ ವಾಕ್ಯಭಾಗದ ಕಡೆಯ ಮೂರು ವಚನಗಳಲ್ಲಿ ಒತ್ತು ಕೊಡಲಾಗಿರುವ ಸಂಗತಿಯೆಂದರೆ ವಿವಿಧ ವರಗಳನ್ನು ಹೊಂದಿರುವಂತಹ ಜನರು ಅವುಗಳನ್ನು *ಉಪಯೋಗಿಸ*ತಕ್ಕದ್ದು ಎಂಬದೆ.

*ನಮ್ಮ ವರಗಳು ಹೇಗೆ ಉಪಯೋಗಿಸಲ್ಪಡಬಹುದು?* ಪೌಲನು ಪ್ರತಿಯೊಂದು ವರವನ್ನು ಉಪಯೋಗಿಸುವ ಕಾರ್ಯವಿಧಾನದ ಕುರಿತು ವಿವರಿಸುವದರಲ್ಲಿ ಹೆಚ್ಚು ಸಮಯವನ್ನು ಕಳೆಯಲಿಲ್ಲ. ಬದಲಾಗಿ, ಆತನು ನಮ್ಮ ಸಾಮರ್ಥ್ಯಗಳನ್ನು ಉಪಯೋಗಿಸುವ ವೇಳೆಯಲ್ಲಿ ನಮಗಿರಬೇಕಾದ *ಮನೋವೃತ್ತಿಗಳ* (ವರ್ತನೆಗಳ) ಮೇಲೆ ಗಮನವನ್ನು ಹರಿಸಿದನು. ಪೌಲನು ಆ ವರಗಳಲ್ಲಿ ನಾಲ್ಕರ ಕುರಿತಾಗಿ ನೀಡಿದ ಸಲಹಾಸೂಚನೆಗಳು ಯಾವದೇ ವರದ ಉಪಯೋಗಿಸುವಿಕೆಯಲ್ಲಿ ಉತ್ತಮ ಸಲಹೆಯನ್ನು ಹೊಂದಿರುತ್ತದೆ:

> ನಿಮ್ಮ ವರವು ಏನೇ ಆಗಿದ್ದರೂ, ದೇವರ ವಾಕ್ಯದೊಂದಿಗೆ ನೆಲೆಗೊಂಡಿರ್ರಿ ಮತ್ತು ಅದು ವಿಧಿಸುವ ಮಿತಿಗಳನ್ನು ಸ್ವೀಕರಿಸಿಕೊಳ್ಳಿರಿ.
> ನಿಮ್ಮ ವರವನ್ನು ಮನುಷ್ಯರಿಂದ ನೋಡಲ್ಪಡಬೇಕು ಮತ್ತು ಮೆಚ್ಚಿಕೆಯನ್ನು ಪಡೆಯಬೇಕೆಂದು ಉಪಯೋಗಿಸಬೇಡಿರಿ.
> ನಿಮ್ಮ ವರವನ್ನು ಉಪಯೋಗಿಸುವದರಲ್ಲಿ ಆಸಕ್ತವಾಗಿರ್ರಿ.
> ನಿಮ್ಮ ವರದ ಬಗ್ಗೆ ಉಲ್ಲಾಸವಾಗಿರ್ರಿ ಮತ್ತು ಅದನ್ನು ಸಂತೋಷದಿಂದ ಉಪಯೋಗಿಸಿರಿ.

ದೇವರು ನಮಗೆ ಅನುಗ್ರಹಿಸುವ ಬೇರೆ ಬೇರೆ ವರಗಳಿಗೆ ನಾನು ಒಂದು ಟಿಪ್ಪಣಿಯನ್ನು ಸೇರ್ಪಡೆಗೊಳಿಸುವ ಅಗತ್ಯವಿದೆ. ಜನರು ಬೇರೆ ಬೇರೆ ವರಗಳನ್ನು ಹೊಂದಿದ್ದಾರೆಂಬ ವಾಸ್ತವಾಂಶವೇ ಕೆಲವು ಸಾರಿ ಸಭೆಯು ಯಾವ ಕಾರ್ಯಕ್ರಮಗಳ ಯೋಜನೆಯನ್ನು ಮಾಡಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳನ್ನು ಉಂಟುಮಾಡುವದಾಗಿರುತ್ತದೆ. ಬೋಧಿಸುವ ವರವನ್ನು ಹೊಂದಿರುವವರು ಶಿಕ್ಷಣ ಕಾರ್ಯಕ್ರಮವೇ ಎಲ್ಲಕ್ಕಿಂತ ಪ್ರಾಮುಖ್ಯವಾದದ್ದು ಎಂದು ಯೋಚಿಸಬಹುದು; ಕನಿಕರ ತೋರುವ ವರವನ್ನು

ಹೊಂದಿರುವವರು ಇತರರಿಗೆ ಸಹಾಯ ಮಾಡುವದೇ ಸಭೆಯ ಪ್ರಧಾನ ಒತ್ತು ಆಗಿರತಕ್ಕದ್ದೆಂಬ ದೃಢವಾದ ಮನವರಿಕೆ ಹೊಂದಿರಬಹುದು. ಎಲ್ಲರಿಗೂ ಒಂದೇ ರೀತಿಯ ವರವಿರುವದಿಲ್ಲ ಮತ್ತು ಎಲ್ಲಾ ವರಗಳು ಸಹ ಪ್ರಾಮುಖ್ಯವಾದವುಗಳು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ. ನಂತರ ಪ್ರತಿಯೊಬ್ಬರೂ ಅವನಿಗೆ ಅಥವಾ ಅವಳಿಗೆ ಮಾಡಲು ಶಕ್ತವಾದದ್ದನ್ನು ಮಾಡುತ್ತಲಿರುವವರಾಗಿ ಸಾಮರಸ್ಯ ಮತ್ತು ಪ್ರೀತಿಯಲ್ಲಿ ಜೀವಿಸುವದನ್ನು ಕಲಿತುಕೊಳ್ಳೋಣ.

*ಮುಕ್ತಾಯ.* ನಾವು ಪುನಃ ಕೇಳಿಕೊಳ್ಳೋಣ, "ಯಾವ ಸಂಗತಿಯು ಒಬ್ಬನನ್ನು ವಿಶೇಷವಾದವನನ್ನಾಗಿಸುತ್ತದೆ?" ಲೋಕದಲ್ಲಿ, ಶ್ರೀಮಂತರಾಗಿರುವದು, ಶಕ್ತಿಶಾಲಿಯಾಗಿರುವದು, ಅಥವಾ ಪ್ರತಿಭೆಯುಳ್ಳವರಾಗಿರುವದು ಒಬ್ಬನನ್ನು ವಿಶೇಷವಾಗಿಸುತ್ತದೆ. ಹೇಗೂ, ನಿನ್ನ ಐಶ್ವರ್ಯ, ನಿಮ್ಮ ಸ್ಥಾನಮಾನ, ಅಥವಾ ನಿಮ್ಮ ಪ್ರತಿಭೆಯ ಮೇಲೆ ಅವಲಂಭಿತವಾಗದಂತಹ ಒಂದು ಸ್ಥಳವಿರುತ್ತದೆ. ಆ ಸ್ಥಳವು ಕ್ರಿಸ್ತನ ದೇಹವೆಂಬ ಸಭೆಯೇ, ಅದರಲ್ಲಿ ಪ್ರತಿಯೊಬ್ಬ ಸದಸ್ಯನೂ ಅಗತ್ಯವಾದವನು ಮತ್ತು ಎಲ್ಲರೂ ಪ್ರಾಮುಖ್ಯವಾದವರು. ನೀವು ಇನ್ನೂ ಕ್ರಿಸ್ತನ ದೇಹದ ಅಂಗವಾಗಿಲ್ಲವಾದಲ್ಲಿ, ನೀವು ಯೇಸುವಿನಲ್ಲಿ ನಂಬಿಕೆ ಮತ್ತು ವಿಶ್ವಾಸವಿಡುವವರಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಿರೆಂದು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ, ಹೀಗೆ ದೇವರು ನಿಮ್ಮನ್ನು ತನ್ನ ಸಭೆಗೆ ಸೇರ್ಪಡೆಗೊಳಿಸುತ್ತಾನೆ (ಅಪೊಸ್ತಲರ ಕೃತ್ಯಗಳು 2:38, 47; KJV; 1 ಕೊರಿಂಥ 12:13). ಇದಾದ ಬಳಿಕ, ನಿಮಗೆ ದೇವರಿಂದ ಅನುಗ್ರಹಿಸಲ್ಪಟ್ಟಿರುವ ವರವನ್ನು ಕಂಡುಕೊಳ್ಳಿರಿ ಮತ್ತು ನಿಮ್ಮನ್ನು ಪ್ರೀತಿಸುವ ಕರ್ತನಿಗೋಸ್ಕರ ಅದನ್ನು ಉಪಯೋಗಿಸಿರಿ. ಅದೇ ಈ ಭೂಮಿಯ ಮೇಲೆ ಸಂತೋಷದಿಂದ ಬಾಳುವದಕ್ಕೂ ಪರಲೋಕದಲ್ಲಿ ದೇವರ ಸಂಗಡ ನಿತ್ಯನಿತ್ಯಕ್ಕೂ ಜೀವಿಸುವದಕ್ಕೂ ದಾರಿಯಾಗಿರುತ್ತದೆ.

## ನಮ್ಮ ವರಗಳನ್ನು ಕಂಡುಕೊಳ್ಳುವದು (12:3-8)[92]

ರೋಮಾ 12:3-8ರಲ್ಲಿ ಕ್ರೈಸ್ತ ಜೀವನದ ಹಲವಾರು ಪಾರ್ಶ್ವಗಳ ಅರ್ಥನಿರೂಪಣೆ ಮಾಡಲಾಗಿರುತ್ತದೆ. ದೇವರು ಧರ್ಮಶಾಸ್ತ್ರವಿಲ್ಲದೆಯೇ ಕ್ರಿಸ್ತನ ಮೂಲಕವಾಗಿ ದಯಪಾಲಿಸಿದ ಮಹಾ ಕರುಣೆಯ ಕಾರಣದಿಂದಾಗಿ (3:23, 24; 6:3), ನಾವು ಹೊಸ ವಿಧವಾದ ಜೀವಿತವನ್ನು ನಡಿಸುವ ಅಗತ್ಯವಿರುತ್ತದೆ (6:1-5, 12-15). ಆ ಹೊಸ ಜೀವನವನ್ನು ನಡಿಸಬೇಕೆಂದರೆ ನಾವು ನಮ್ಮನ್ನು ಸಂಪೂರ್ಣವಾಗಿ ಕರ್ತನಿಗೆ ಒಪ್ಪಿಸಿಕೊಟ್ಟು ಯಾವದೇ ಸಂಕೋಚವಿಲ್ಲದೆ ಆತನಿಗೋಸ್ಕರ ಜೀವಿಸಬೇಕಾದ ಅಗತ್ಯವಿರುತ್ತದೆ (12:1, 2). ನಮ್ಮನ್ನು ಸಂಪೂರ್ಣವಾಗಿ ಕ್ರಿಸ್ತನಿಗೆ ಒಪ್ಪಿಸಿಕೊಡುವದೆಂದರೆ ನಾವು ನಮಗೆ ದೇವರಿಂದ ಕೊಡಲ್ಪಟ್ಟಿರುವ ವರಗಳನ್ನು ನಮ್ಮ ಸಾಮರ್ಥ್ಯಕ್ಕೆ ತಕ್ಕದಾಗಿ ಆತನ ಸೇವೆಯಲ್ಲಿ ಉಪಯೋಗಿಸಬೇಕು ಎಂದರ್ಥವಾಗಿರುತ್ತದೆ (12:3-8). ಕ್ರೈಸ್ತರಿಗೆ ಲಭ್ಯವಿರುವ ಏಳು ವರಗಳ ಪಟ್ಟಿಯನ್ನು ರೋಮಾ 12ರಲ್ಲಿ ಕೊಡಲಾಗಿರುತ್ತದೆ: (1) ಪ್ರವಾದಿಸುವದು, ನಾನು ಅದನ್ನು ಬೋಧನೆ ಅಥವಾ ಸಾರುವಿಕೆ—"ಕರ್ತನು ಹೀಗನ್ನುತ್ತಾನೆ" ಎಂಬದಾಗಿ ಪ್ರವಾದಿಯ ರೀತಿಯಲ್ಲಿ ಮಾತಾಡುವದು—ಎಂದು ಭಾವಿಸುತ್ತೇನೆ; (2) ಸಭಾಸೇವೆ, ಅಥವಾ ಉಳಿಗ; (3) ಬೋಧನೆ; (4) ಬುದ್ಧಿಹೇಳುವದು,

ಅಥವಾ ಪ್ರೋತ್ಸಾಹಿಸುವದು; (5) ದಾನ ಕೊಡುವದು; (6) ಹಿರೀತನ ನಡಿಸುವದು; ಮತ್ತು (7) ಕಾರುಣ್ಯ, ಅಥವಾ ಉಪಕಾರ ಮಾಡುವದು.

ಸಲಹಾಸೂಚನೆಯು ವ್ಯಕ್ತಿಗತ ಕ್ರೈಸ್ತರಿಗೆ ಹೇಗೆ ಅನ್ವಯವಾಗುತ್ತದೆ ಎಂಬುದು ರೋಮಾ 12:3-8ರಲ್ಲಿ ಸ್ಪಷ್ಟಗೊಳಿಸಲ್ಪಟ್ಟಿರುವದಿಲ್ಲ. ನಾವು ಹೀಗೆ ಚಕಿತಗೊಳ್ಳಬಹುದು, “ನನಗೆ ಯಾವ ಸಾಮರ್ಥ್ಯಗಳಿವೆ?”; “ನನ್ನ ವರಗಳಾವವೆಂದು ನಾನು ಹೇಗೆ ತಿಳಿದುಕೊಳ್ಳಬಲ್ಲೆನು?” ನಾವು ಹೀಗೆ ಸಹ ಕೇಳಿಕೊಳ್ಳಬಹುದು, “ನಾನು ನನ್ನ ಪ್ರತಿಭೆಗಳನ್ನು ದೇವರ ಸೇವೆಯಲ್ಲಿ ಹೇಗೆ ಉಪಯೋಗಿಸಬಲ್ಲೆನು?”; “ಕ್ರಿಸ್ತನ ದೇಹದಲ್ಲಿ ತಮ್ಮ ಪಾತ್ರಗಳನ್ನು ಕಂಡುಕೊಳ್ಳುವಂತೆ ನಾನು ಇತರರಿಗೆ ಹೇಗೆ ಸಹಾಯ ಮಾಡಬಲ್ಲೆನು?” ನಾವು ಈ ವಾಕ್ಯಭಾಗವನ್ನು ಅಧ್ಯಯನ ಮಾಡುತ್ತಾ ಹೋದಂತೆ ಈ ಪ್ರಶ್ನೆಗಳನ್ನು ಪರಿಗಣಿಸಲಿದ್ದೇವೆ.

*ನಮಗೆ ವರಗಳಿರುತ್ತವೋ?* “ದೇವರು ನನಗೆ ಒಂದು ವರವನ್ನು ಕೊಟ್ಟಿದ್ದಾನೆಂದು ನಾನು ಹೇಗೆ ಖಚಿತವಾಗಿ ತಿಳಿದುಕೊಳ್ಳಬಲ್ಲೆನು?” ಎಂಬ ಪ್ರಶ್ನೆಯೊಂದಿಗೆ ಪ್ರಾರಂಭಿಸೋಣ. ಅದಕ್ಕೆ ಉತ್ತರಿಸುವದಕ್ಕೆ ಮುನ್ನ, ದೇವರು ನಿಮಗೆ ಅನುಗ್ರಹಿಸಸಿ ರುವ*ದಿಲ್ಲ* ಎಂದು ನೀವು ಖಚಿತವಾಗಿ ತಿಳಿದುಕೊಳ್ಳಬಹುದಾದ ಎರಡು ಸಂಗತಿಗಳನ್ನು ನಿಮಗೆ ತಿಳಿಸುತ್ತೇನೆ. ದೇವರು ನಿಮಗೆ ಯಾವದೇ ಅದ್ಭುತಗಳ ವರವನ್ನು ಕೊಟ್ಟಿರುವದಿಲ್ಲ, ಯಾಕೆಂದರೆ ಅದ್ಭುತಗಳ ಯುಗವು ಕಳೆದುಹೋಗಿರುತ್ತದೆ. ಪ್ರಥಮ ಶತಮಾನದಲ್ಲಿ ಅದ್ಭುತಕರ ವರಗಳನ್ನು ಹೊಂದಿದ್ದ ಕ್ರೈಸ್ತರ ರೀತಿಯಲ್ಲಿ ಇಂದು ಯಾರೊಬ್ಬರೂ ಜನರನ್ನು ಸ್ವಸ್ಥ ಮಾಡಲಾರರು ಮತ್ತು ಅನ್ಯಭಾಷೆಗಳಲ್ಲಿ ಮಾತಾಡಲಾರರು. ಅಷ್ಟುಮಾತ್ರವಲ್ಲದೆ, ದೇವರು ಇಂದು ಕ್ರೈಸ್ತರಿಗೆ ಲಭ್ಯಗೊಳಿಸಿ ರುವಂತಹ *ಪ್ರತಿಯೊಂದು* ವರವನ್ನೂ ನಿಮಗೆ ಕೊಟ್ಟಿರುವದಿಲ್ಲ. ದೇವರು ಹೊಸ ಒಡಂಬಡಿಕೆಯಲ್ಲಿ ಇದ್ದಂತಹ ಪ್ರತಿಯೊಂದು ವರವನ್ನೂ ಕ್ರೈಸ್ತರಿಗೆ ಅನುಗ್ರಹಿಸಲ್ಲವದಲ್ಲಿ (ನೋಡಿರಿ 1 ಕೊರಿಂಥ 12:29-31), ಆತನು ಈ ದಿನಗಳಲ್ಲಿ ಸಹ ತನ್ನ ಮಕ್ಕಳಿಗೆ ಪ್ರತಿಯೊಂದು ವರವನ್ನೂ ಅನುಗ್ರಹಿಸುವದಿಲ್ಲ. ಕರ್ತನ ಸಭೆಯಲ್ಲಿ ಮಾಡಬೇಕಾದ ಅಗತ್ಯವಿರುವಂಥ ಎಲ್ಲವನ್ನೂ—ಪ್ರತಿಯೊಂದು ಕೆಲಸವನ್ನು ನಡಿಸುವದಕ್ಕೆ—ಮಾಡುವದಕ್ಕೆ ಶಕ್ತನಾಗಿರಬೇಕೆಂದು ನಿರೀಕ್ಷಿಸಬೇಡ.

ದೇವರು ನಮಗೆ *ಎಲ್ಲವನ್ನೂ* ಮಾಡುವ ಸಾಮರ್ಥ್ಯವನ್ನು ಕೊಟ್ಟಿಲ್ಲವಾದಾಗ್ಯೂ, ಆತನು ನಮಗೆ *ಏನನ್ನಾದರೂ* ಮಾಡುವ ಶಕ್ತಿಯನ್ನು ಒದಗಿಸಿರುತ್ತಾನೆ (ಅಥವಾ ಸಾಮರ್ಥ್ಯವನ್ನು ಒದಗಿಸಿರುತ್ತಾನೆ)! ಮತ್ತಾಯ 25:14-30ರಲ್ಲಿ ತಿಳಿಸಲಾಗಿರುವ “ತಲಾಂತುಗಳು” ಹಣದ ಮೊತ್ತಗಳಾಗಿರುತ್ತವೆ, ಹೊರತು ನಾವು ಉಪಯೋಗಿಸುವ ಪದದಂತೆ “ಪ್ರತಿಭೆಗಳು” ಆಗಿರುವದಿಲ್ಲ. ಹೇಗಿದ್ದರೂ, ಆ ಸಾಮ್ಯವು ನಮಗೆ “ಐದು ತಲಾಂತುಗಳು” ಉಳ್ಳ ಜನರು, “ಎರಡು ತಲಾಂತುಗಳು” ಉಳ್ಳ ಜನರು, ಮತ್ತು “ಒಂದು ತಲಾಂತು” ಉಳ್ಳ ಜನರು ರಾಜ್ಯದಲ್ಲಿದ್ದಾರೆ—ಆದರೆ “ಯಾವ ತಲಾತು ಇಲ್ಲದ” ಜನರು ಯಾರೊಬ್ಬರೂ ಇಲ್ಲ—ಎಂಬುದನ್ನು ನಮಗೆ ಕಲಿಸಿ ಕೊಡುತ್ತದೆ. ರಾಜ್ಯದಲ್ಲಿರುವ ಪ್ರತಿಯೊಬ್ಬರಿಗೂ ಒಂದಿಲ್ಲಾ ಒಂದು ಪ್ರತಿಭೆ (ನಾವು ಉಪಯೋಗಿಸುವ ಪದದಂತೆ) ಕೊಡಲ್ಪಟ್ಟಿದೆ; ಪ್ರತಿಯೊಬ್ಬ ಕ್ರೈಸ್ತನು ಒಂದಿಲ್ಲಾ ಒಂದು ಸಾಮರ್ಥ್ಯ, ಒಂದಿಲ್ಲಾ ಒಂದು ವರ ಹೊಂದಿರುತ್ತಾನೆ.

ನಿಮಗೆ ವರವಿದೆಯೆಂಬದನ್ನು ನಿರಾಕರಿಸುವದು ನೀತಿವಂತಿಕೆಯೂ ಅಲ್ಲ ದೀನತೆಯೂ ಆಗಿರುವದಿಲ್ಲ. ನಮಗಿರುವ ಪ್ರತಿಭೆಯನ್ನು ಹೊಂದಿದ್ದರೂ ಹೊಂದಿಲ್ಲವೆಂದು ನಿರಾಕರಿಸುವಂತೆ ನಮ್ಮ ವಾಕ್ಯಭಾಗವು ಕಲಿಸುವದಿಲ್ಲ. ನಾವು ನಮ್ಮನ್ನು ಯೋಗ್ಯತೆಗೆ ಮೀರಿ ಉನ್ನತವೆಂದು ಭಾವಿಸಿಕೊಳ್ಳಬಾರದೆಂದು ಹೇಳುತ್ತದೆ, ಆದರೆ ನಾವು ಭಾವಿಸಿಕೊಳ್ಳತಕ್ಕದ್ದಕ್ಕಿಂತಲೂ "ಅಧಿಕ ದೀನ"ವಾಗಿ ನಮ್ಮನ್ನು ಭಾವಿಸಿಕೊಳ್ಳುವದನ್ನು ಅದು ಶಿಫಾರಸು ಮಾಡುವದಿಲ್ಲ. ಒಬ್ಬ ವ್ಯಕ್ತಿಯು ತನ್ನ ತಪೆಯನ್ನು ತಗ್ಗಿಸಿಕೊಂಡು "ನಾನೇನನ್ನೂ ಮಾಡುವದಕ್ಕಾಗುವದಿಲ್ಲ" ಎಂದು ಗೊಣಗುಟ್ಟಿದರೆ ತನ್ನನ್ನು "ನನಗೊಂದು ಪ್ರತಿಭೆಯಿದ್ದು ಅದನ್ನು ಕರ್ತನ ಸೇವೆಯಲ್ಲಿ ಉಪಯೋಗಿಸಲಿಚ್ಛಿಸುತ್ತೇನೆ" ಎಂದು ಹೇಳುವ ಮತ್ತೊಬ್ಬ ಕ್ರೈಸ್ತನಿಗಿಂತ ಉತ್ತಮನೆಂದು ಸಾಭಿತುಪಡಿಸಿಕೊಂಡತಾಗುವದಿಲ್ಲ.

*ನಮ್ಮ ವರಗಳು ಯಾವವೆಂಬುದನ್ನು ನಾವು ಹೇಗೆ ತಿಳಿದುಕೊಳ್ಳಬಲ್ಲೆವು?* ಅದು ನಮ್ಮನ್ನು ಎರಡನೆಯ ಪ್ರಶ್ನೆಗೆ ನಡಿಸುತ್ತದೆ: "ಪ್ರತಿಯೊಬ್ಬ ಕ್ರೈಸ್ತನು ಒಂದು ಪ್ರತಿಭೆ ಅಥವಾ ವರ ಅಥವಾ ಸಾಮರ್ಥ್ಯವನ್ನು ಹೊಂದಿರುವದಾದರೆ, ನನ್ನದು ಯಾವದೆಂದು ನಾನು ಹೇಗೆ ತಿಳಿಯಬಲ್ಲೆನು?" ದೇವರು ನಿಮಗೆ ಏನನ್ನು ಮಾಡುವಂತೆ ಶಕ್ತಗೊಳಿಸಿದ್ದಾನೆಂಬುದನ್ನು ಎರಡು ದಾರಿಗಳಲ್ಲಿ ನೀವು ಗುರುತಿಸಿಕೊಳ್ಳಬಹುದು.

1. ಒಂದನ್ನು ಕೇಳಿಕೊಳ್ಳುವದು. ಮೊದಲ ಹೆಜ್ಜೆಯೆಂದರೆ ನಿಮ್ಮಲ್ಲಿ ನೀವು, "ನನಗೆ ಯಾವದು ಸ್ವಭಾವತಃವಾಗಿ ಬಂದಿರುತ್ತದೆ?" ಎಂದು ಕೇಳಿಕೊಳ್ಳುವದು. ನೀವು ಯಾವದರಲ್ಲಿ ನಿಪುಣರಾಗಿದ್ದೀರಿ? ನೀವು ಏನನ್ನು ಮಾಡುವದಕ್ಕೆ ಇಷ್ಟಪಡುವಿರಿ? ನೀವು ನಂಬಿಗಸ್ತ ಕ್ರೈಸ್ತರಿಂದ ಮನ್ನನೆಯನ್ನು ಗಳಿಸುವಂತಹ ಯಾವ ಕಾರ್ಯವನ್ನು ಮಾಡುವಿರಿ? ದೇವರು ತನ್ನ ರಾಜ್ಯದಲ್ಲಿ ಉಪಯೋಗಿಸುವಂತೆ ನಿಮಗೆ ಇಂಥಿಂಥ ನಿರ್ದಿಷ್ಟವಾದ ಪ್ರತಿಭೆಯನ್ನು ಕೊಟ್ಟಿದ್ದಾನೆಂಬುದನ್ನು ಇತರರು ಗುರುತಿಸಬಹುದಾಗಿದೆ.

ಕ್ರಿಸ್ತನ ದೇಹದಲ್ಲಿನ ನಿಮ್ಮ ಪಾತ್ರವನ್ನು, ವಿಶೇಷವಾಗಿ ರೋಮಾ 12:3-8ರ ಬೆಳಕಿನಲ್ಲಿ ಗುರುತಿಸಿಕೊಳ್ಳುವಂತೆ ನಿಮಗೆ ಸಹಾಯ ಮಾಡುವದಕ್ಕೆ, ನಾನು ಹಲವಾರು ವರ್ಷಗಳ ಮುಂಚೆ ಕೇಳಿಸಿಕೊಂಡ ಒಂದು ಚಿಕ್ಕ ಪರೀಕ್ಷೆಯು ಇಲ್ಲಿದೆ. ನೀವು ಒಂದು ಹುಟ್ಟುಹಬ್ಬದ ಔತಣಕೂಟದಲ್ಲಿ ಇರುವಿರೆಂದು ಕಲ್ಪಿಸಿಕೊಳ್ಳಿರಿ. ಒಬ್ಬ ಕ್ರೈಸ್ತ ಸ್ತ್ರೀಯು ಕ್ರಿಸ್ತನಲ್ಲಿನ ತನ್ನ ಪ್ರಿಯ ಸಹೋದರಿಯೊಬ್ಬಳಿಗಾಗಿ ಆ ಔತಣಕೂಟವನ್ನು ಏರ್ಪಡಿಸಿದ್ದಾಳೇ. ಸಭೆಯಿಂದ ಆರು ಅಥವಾ ಎಂಟು ದಂಪತಿಗಳು ಅದರಲ್ಲಿ ಭಾಗಿಯಾಗಿದ್ದಾರೆ, ಮತ್ತು ನೀವೆಲ್ಲರೂ ಔತಣದಲ್ಲಿ ಸಂಭ್ರಮದಿಂದ ಇರುವಿರಿ. ಇದುವರೆಗೂ ಔತಣಕೂಟವು ಅದ್ಭುತವಾಗಿಯೇ ಸಾಗಿದೆ. ಅಲಂಕಾರಗಳೆಲ್ಲಾ ಚೆನ್ನಾಗಿಯೇ ಮಾಡಲ್ಪಟ್ಟಿರುತ್ತವೆ. ಸಂಭಾಷಣೆಯೆಲ್ಲಾ ರಸವತ್ತಾಗಿಯೇ ಸಾಗುತ್ತಿದೆ. ಅನ್ಯೋನ್ಯತೆಯು ಆನಂದಕರವಾಗಿರುತ್ತದೆ. ಊಟವೆಲ್ಲಾ ರುಚಿಕರವಾಗಿರುತ್ತದೆ.

ಔತಣಕೂಟದ ಪರಾಕಾಷ್ಠೆಯು ಬಂದು ತಲುಪಿದೆ. ಆನಂದದಿಂದ ಹೊಳೆಯುತ್ತಾ ಇರುವ ಆತಿಥ್ಯಕಾರಿಣಿಯು, ಸುಂದರವಾಗಿ ಶೃಂಗರಿಸಲ್ಪಟ್ಟ ಜನ್ಮದಿನದ ಕೇಕ್ ಎತ್ತಿಕೊಂಡು ಕೋಣೆಯನ್ನು ಪ್ರವೇಶಿಸುತ್ತಾಳೆ. ಅತಿಥಿಗಳೆಲ್ಲರೂ ಸಂತೋಷದಿಂದ ಕೈಗಳನ್ನು ತಟ್ಟುತ್ತಾರೆ. ನೀವೆಲ್ಲರೂ "ಹ್ಯಾಪಿ ಬರ್ತಡೇ ಟು ಯೂ, ಹ್ಯಾಪಿ ಬರ್ತಡೇ ಟು ಯೂ. . ." ಎಂದು ಹಾಡಲಾರಂಭಿಸುವಿರಿ. ಆಗ ಏಕಾಏಕಿಯಾಗಿ, ಆತಿಥ್ಯಕಾರಿಣಿಯು ಎಡವಿ ನೆಲದ

ಮೇಲೆ ಬಿದ್ದು ಬಿಡುತ್ತಾಳೆ. ಕೇಕ್ ತಲೆಕೆಳಗಾಗಿ ಬಿದ್ದು ನೆಲದ ಮೇಲೆಲ್ಲಾ ಅದರ ಕ್ರಿಮ್ ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತದೆ, ಸ್ವಲ್ಪ ಗೋಡೆಯ ಮೇಲೆಯೂ ಹತ್ತಿರದಲ್ಲಿ ನಿಂತಿದ್ದ ಅತಿಥಿಗಳ ಮೇಲೆಯೂ ಬಿದ್ದಿರುತ್ತದೆ. ಎಲ್ಲರೂ ಹಾಡುವದನ್ನು ನಿಲ್ಲಿಸಿ ಬಿಡುತ್ತಾರೆ; ಅಲ್ಲಿ ತಲ್ಲಣಗೊಳಿಸುವಂಥ ನಿಶ್ಯಬ್ದತೆಯಿತ್ತು. ಆಗ ಆತಿಥ್ಯಕಾರಿಣಿಯು, ನೆಲದಲ್ಲಿ ಬಿದ್ದುಕೊಂಡವಳಾಗಿ ತನ್ನ ಹಾಳಾದ ಬಟ್ಟೆಗಳನ್ನು, ತನ್ನ ಹಾಳಾದ ಕೇಕ್? ನ್ನು, ತನ್ನ ಹಾಳಾದ ಔತಣಕೂಟವನ್ನು ನೋಡಿ ಬಿಕ್ಕಿ ಬಿಕ್ಕಿ ಅಳಲಾರಂಭಿಸುತ್ತಾಳೆ. ಆಗ ನೀವು ಏನು ಮಾಡುವಿರಿ?

ಬಹುಶಃ ನೀವು, ಹೆಚ್ಚು ಕಡಿಮೆ ಹಿಂದೆಮುಂದೆ ಯೋಚಿಸದೆ, ನಿಮ್ಮ ಮಿತ್ರಳ ಬಳಿಗೆ ಓಡಿ ಆಕೆಯ ಪಕ್ಕದಲ್ಲಿ ಮಂಡಿಯೂರಿ, ಆಕೆಯ ಸುತ್ತಲು ಬಾಹುಗಳನ್ನು ಹಾಕಿ ಆಕೆಯನ್ನು ಸಂತೈಸುವಿರಿ ಅಥವಾ ಆ ಸ್ಥಿತಿಯಲ್ಲಿಯೂ ಹಾಸ್ಯವನ್ನು ಕಾಣುವಂತೆ ಆಕೆಗೆ ಸಹಾಯ ಮಾಡಬಹುದು.

ಬಹುಶಃ ನೀವು ಆ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಕೇಕ್ ನ್ನು ಕೊಳೆಯನ್ನು ಸ್ವಚ್ಛಗೊಳಿಸುವದಕ್ಕೆ ಚಿಂದಿಬಟ್ಟೆಗಳನ್ನು ಹುಡುಕಬಹುದು. ನೀವು ಹಾಳಾಗಿ ಬಿದ್ದ ಕೇಕ್.ನ ತುಂಡುಗಳನ್ನು ಮತ್ತು ಕ್ರಿಮ್ ನ್ನು ಸ್ವಚ್ಛಗೊಳಿಸಲಾರಂಭಿಸುವಿರಿ.

ಬಹುಶಃ ನೀವು, ವಾಸ್ತವದಲ್ಲಿ ಬಿದ್ದಿರುವ ಆತಿಥ್ಯಕಾರಿಣಿಯ ಬಳಿಗೆ ಹೋಗದೆಯೇ, ಆಕೆಗೆ “ಚಿಂತೆ ಮಾಡಬೇಡ ಬಿಡು, ಎಲ್ಲಾ ಸರಿ ಹೋಗುತ್ತದೆ” ಎಂಬಂತಹ ಪ್ರೋತ್ಸಾಹದ ಮಾತುಗಳನ್ನಾಡಬಹುದು. ನೀವು ಇತರರಿಗೆಲ್ಲಾ ಪ್ರೋತ್ಸಾಹದ ಮಾತುಗಳನ್ನು ಹೇಳುವದಕ್ಕೆ ತಿರುಗಿಕೊಳ್ಳುವಿರಿ. “ಎಂಥ ಅದ್ಭುತವಾದ ಔತಣಕೂಟ ಇದಾಗಿತ್ತು! ನಾವು ಕೇಕ್ ಇಲ್ಲದೆಯೇ ಖುಷಿಪಡುವದನ್ನು ಮುಂದುವರೆಸಬಲ್ಲೆವು.”

ಬಹುಶಃ ನೀವು ಈ ತಕ್ಷಣದ ಸ್ಥಿತಿಯಲ್ಲಿ ಕರ್ತನ ಚಿತ್ತವನ್ನು ಮಾಡುವಂತೆ ಎಲ್ಲಾ ಜನರನ್ನು ಬೇಡಿಕೊಳ್ಳಬೇಕೆಂದು ನಿಮಗೆ ಅನ್ನಿಸಬಹುದು. ನೀವು ಹೀಗೆ ಹೇಳುವಿರಿ, “ನೆನಪಿರಲಿ, ನಾವು ನಮ್ಮ ಸಹೋದರ ಅಥವಾ ಸಹೋದರಿ ಕಷ್ಟದಲ್ಲಿರುವದನ್ನು ನೋಡಿದರೆ, ನಾವು ಅವನಿಗೆ ಅಥವಾ ಅವಳಿಗೆ ಸಹಾಯ ಮಾಡತಕ್ಕದ್ದೆಂದು ಕರ್ತನು ಹೇಳುತ್ತಾನಲ್ಲಾ. ಬೈಬಲ್ ಹೀಗೆ ಹೇಳುತ್ತದೆ. . .” ಬಳಿಕ ನೀವು ಯಾಕೋಬ 2:15-17ನ್ನು ಉಲ್ಲೇಖಿಸುವಿರಿ.

ಬಹುಶಃ ನೀವು ಈ ಘಟನೆಯಲ್ಲಿ ನಾವೆಲ್ಲರೂ ಕಲಿಯಬೇಕಾಗಿರುವ ಒಂದು ಪಾಠವನ್ನು ಕಾಣಬಹುದು. ನೀವು ಈ ವಿಧದಲ್ಲಿ ಹೇಳುವಿರಿ, “ಮೇರಿ, ನಿನಗೆ ಬೇಸರವಾಗಿದೆ ಎಂದು ನನಗೆ ಗೊತ್ತು, ಆದರೆ ಇದರಿಂದ ನಾವೇನನ್ನು ಕಲಿಯಬಲ್ಲೆವು? ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಕೇಕ್ ಅಥವಾ ಹಾಳಾದ ಔತಣಕೂಟ ನಾವು ಅನುಭವಿಸಿರುವ ಎಲ್ಲಕ್ಕಿಂತ ದೊಡ್ಡ ದುರಂತವಲ್ಲ. ನಾವು CAKE ಪಾಠವನ್ನು ನೆನಪಿನಲ್ಲಿಟ್ಟುಕೊಳ್ಳಬಲ್ಲೆವು: ‘Care Always to Keep hold on the Eternal (One)—ನಾವು ಯಾವಾಗಲೂ ನಿತ್ಯವಾದದ್ದನ್ನು ಹಿಡಿದಿರುವದಕ್ಕೆ ಕಲಿತುಕೊಳ್ಳುವದಕ್ಕೆ ಚಿಂತಿಸಬೇಕು’.”

- ಬಹುಶಃ ನೀವು ಕೇಕ್ ಹಾಳಾಗಿ ಹೋಗಿರುವದನ್ನು ನೋಡಿ ಇನ್ನೊಂದು ಕೇಕ್ ಅಗತ್ಯವಿದೆಯೆಂದು ನಿರ್ಧರಿಸಬಹುದು. ನೀವು ಚೀಲದಲ್ಲಿ ಸ್ವಲ್ಪ ಹಣವನ್ನು ಹಾಕುತ್ತೀರಿ. ನಂತರ ಅದನ್ನು ಎಲ್ಲರ ಬಳಿಗೂ ಕಳುಹಿಸಿ ಯಾರಾದರೂ ಹೋಗಿ ಇನ್ನೊಂದು ಕೇಕ್ ಖರೀದಿಸುವಂತಾಗಲು ಹಣವನ್ನು ಸಂಗ್ರಹಿಸುವಂತೆ ಬೇಡಿಕೊಳ್ಳುವಿರಿ.
- ಬಹುಶಃ ನೀವು ತಕ್ಷಣವೇ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ, ಏನು ಮಾಡಬೇಕಾಗಿರುತ್ತದೆಂಬುದನ್ನು ತಿಳಿದುಕೊಂಡು ಅದನ್ನು ಮಾಡಿ ಮುಗಿಸುವದಕ್ಕೆ ಒಂದು ಯೋಜನೆಯನ್ನು ಮಾಡುವಿರಿ. ನೀವು, "Joanna, ನೀನು ಮಾಡುವದು ಸರಿಯೇ, Mary ಯನ್ನು ಸಂತೈಸು. Ruth, ಮತ್ತು Priscilla, ನೀವು ಹೋಗಿ ಈ ಗಲೀಜನ್ನೆಲ್ಲಾ ಸ್ವಚ್ಛಗೊಳಸುವದಕ್ಕೆ ಸಾಮಗ್ರಿಗಳನ್ನು ಹುಡುಕಬಹುದಲ್ಲಾ? John, ನೀನು ಹಣವನ್ನು ಸಂಗ್ರಹ ಮಾಡು, ಮತ್ತು Matthew ಹೋಗಿ ಇನ್ನೊಂದು ಕೇಕ್ ಖರೀದಿಕೊಂಡು ಬರಬಹುದು. ನಾವೆಲ್ಲರೂ ಕೇಕ್ ನೀಡುವಿಕೆ ಮತ್ತು ಉಡುಗೋರೆಗಳನ್ನು ತೆರೆಯುವ ಸಮಯವನ್ನು ಪುನಃ ನಿಗದಿ ಪಡಿಸೋಣ. ಅದೆಲ್ಲಾ ವ್ಯವಸ್ಥೆಯಾಗುವ ವರೆಗೂ, Joseph, ನೀನು ನಮ್ಮನ್ನು ಕೆಲವು ಹಾಡುಗಳನ್ನು ಹಾಡುವಂತೆ ಏಕೆ ನಡೆಸಬಾರದು?"

ಪುನಃ, ನಾನು, ನೀವು ಯಾವುದನ್ನು ಮಾಡುವದಕ್ಕೆ ಒಲವು ತೋರುವಿರಿ? ಎಂದು ಕೇಳುತ್ತೇನೆ. ನಿಮ್ಮ ಉತ್ತರವನ್ನು ಮನಸ್ಸಿನಲ್ಲಿಟ್ಟುಕೊಂಡು, ರೋಮಾ 12:3-8ಕ್ಕೆ ಅನ್ವಯಿಕೆಯನ್ನು ಮಾಡೋಣ:

- ನೀವು ತಕ್ಷಣವೇ ಹೋಗಿ ಸ್ತ್ರೀಯನ್ನು ಸಂತೈಸುವದಕ್ಕೆ ಒಲವು ತೋರುವದಾದರೆ, ನಿಮಗೆ ಉಪಕಾರ ಮಾಡುವ ವರವಿದೆ.
- ನೀವು ಸ್ವಯಂಪ್ರೇರಿತರಾಗಿ ಸ್ವಚ್ಛತೆಯನ್ನು ಆರಂಭಿಸುವದಾದರೆ, ನಿಮಗೆ ಸೇವೆಯ ವರವಿದೆ.
- ನೀವು ನಿಮ್ಮನ್ನು ಕೇಳಿಸಿಕೊಳ್ಳುವಂಥ ಎಲ್ಲರಿಗೂ ಪ್ರೋತ್ಸಾಹದ ಮಾತುಗಳನ್ನು ಹೇಳುವದಕ್ಕೆ ಆರಂಭಿಸಿದರೆ, ನಿಮಗೆ ಬುದ್ಧಿವಾದ ಹೇಳುವ ಅಥವಾ ಪ್ರೋತ್ಸಾಹ ಮಾಡುವ ವರವಿದೆ.
- ನೀವು ಪ್ರಸ್ತುತ ಪರಿಸ್ಥಿತಿಯಲ್ಲಿ ಕರ್ತನ ಚಿತ್ತವನ್ನು ಮಾಡುವಂತೆ ಬೇಡಿಕೊಳ್ಳಲಾರಂಭಿಸಿದರೆ, ನಿಮಗೆ "ಪ್ರವಾದಿಸುವ" ವರವಿದೆ ("ಕರ್ತನಿಗೋಸ್ಕರ ಮಾತಾಡುವದು").
- ಆ ಘಟನೆಯಿಂದ ಕಲಿತುಕೊಳ್ಳುವದಕ್ಕೆ ಪಾಠಗಳನ್ನು ಇರುತ್ತವೆಂದು ನೀವು ಯೋಚಿಸುವದಾದರೆ ಮತ್ತು ಆ ಪಾಠಗಳನ್ನು ಇತತರೊಂದಿಗೆ ಹಂಚಿಕೊಳ್ಳಲಾರಂಭಿಸಿದರೆ, ನಿಮಗೆ ಬೋಧನೆಯ ವರವಿದೆ.
- ನೀವು ಕೊಡುವದರ ಮೂಲಕವಾಗಿ ಒಂದು ಭೌತಿಕ ಅಗತ್ಯತೆಯನ್ನು ಸಂಧಿಸಬಹುದೆಂಬದನ್ನು ನೀವು ಕಾಣುವದಾದರೆ—ಮತ್ತು ನೀವು

ಕೊಡುವದಕ್ಕೆ ಮನಸ್ಸುಳ್ಳವರಾಗಿಯೂ ಕೊಡುವಂತೆ ಮತ್ತೊಬ್ಬರನ್ನು ಬೇಡಿಕೊಳ್ಳಬೇಕೆಂಬ ಒಲವು ತೋರುವವರಾಗಿಯೂ ಇದ್ದರೆ—ನಿಮಗೆ ದಾರಾಳತನದ ವರವಿದೆ.

ನೀವು ಮಾಡಬೇಕಾದ ಅಗತ್ಯವಿರುವದನ್ನೆಲ್ಲಾ ಅರಿತುಕೊಂಡು ಅದನ್ನು ಮಾಡಿ ಮುಗಿಸುವದಕ್ಕೆ ಪ್ರತಿಯೊಬ್ಬರಿಗೂ ಕೆಲಸವನ್ನು ವಹಿಸಿ ಕೊಡುವದಾದರೆ—ಮತ್ತು ಜನರು ನಿಜವಾಗಿಯೂ ನಿಮ್ಮ ಅಪ್ಪಣೆಗಳನ್ನು ಪಾಲಿಸುವದಕ್ಕೆ ಒಲವು ತೋರುವದಾದಲ್ಲಿ—ನಿಮಗೆ ನಾಯಕತ್ವದ ವರವಿದೆ.

ಸಂಕ್ಷೇಪ್ತ ವಿವರಣೆ ನೀಡಿರುವ ಕೆಲವೊಂದು ಪ್ರತಿಕ್ರಿಯೆಗಳ ವಿಷಯದಲ್ಲಿ, ನೀವು "ಅಂಥ ಪರಿಸ್ಥಿತಿಯಲ್ಲಿ ಅದು ನಿಷ್ಪ್ರಯೋಜನಕರವಾದ ಪ್ರತಿಕ್ರಿಯೆ!" ಎಂದು ಯೋಚಿಸಬಹುದು. ನೀವು ಸರಿಯೇ ಇರಬಹುದು. ಎಲ್ಲಾ ವರಗಳು ಮೌಲ್ಯವುಳ್ಳವುಗಳು ಹಾಗೂ ಯಾವದೂ ಮತ್ತೊಂದಕ್ಕಿಂತ ಉತ್ತಮವಲ್ಲ ಎಂಬುದು ನಿಜವಾದರೂ, ಕೆಲವು ವರಗಳು ಕೆಲವೊಂದು ಪರಿಸ್ಥಿತಿಗಳಲ್ಲಿ ಇತರ ವರಗಳಿಗಿಂತಲೂ ಹೆಚ್ಚು ಪ್ರಯೋಜನಕರವಾಗಿರುತ್ತವೆ. ಈಗಷ್ಟೆ ಬಣ್ಣಿಸಲಾದ ಘಟನಾವಳಿಯಲ್ಲಿ, ಉಪಕಾರ ಮಾಡುವಿಕೆಯ ಹಾಗೂ ಸೇವೆಯ ವರಗಳು ಅತ್ಯಂತ ಹೆಚ್ಚು ಪ್ರಯೋಜನಕರವೆಂದು ನೀವು ವಾದಿಸಬಹುದು. ಹೇಗೂ, ನಾವೆಲ್ಲರೂ ಒಂದೇ ರೀತಿಯಲ್ಲಿ ಅಲ್ಲ, ನಮಗೆ ಬೇರೆ ಬೇರೆ ವರಗಳಿವೆ ಎಂಬುದನ್ನು ರೋಮಾ 12ರಿಂದ (ಮತ್ತು ಸಂಬಂಧಿತ ವಾಕ್ಯಭಾಗಗಳಿಂದ) ಕಲಿತುಕೊಳ್ಳಬೇಕಾದ ಅಗತ್ಯವಿರುತ್ತದೆ. ಅದರರ್ಥವೇನೆಂದರೆ ನಾವು ಸಹಜವಾಗಿಯೇ ಒಂದು ಪರಿಸ್ಥಿತಿಯಲ್ಲಿ ಬೇರೆ ಬೇರೆ ರೀತಿಯಾಗಿ ಪ್ರತಿಕ್ರಿಯಿಸುತ್ತೇವೆಂದಾಗಿರುತ್ತದೆ. ಬೇರೆಯವರು ನಮ್ಮಂತೆಯೇ ಪ್ರತಿಕ್ರಿಯಿಸಲಿಲ್ಲ ಎಂಬ ಕಾರಣಕ್ಕಾಗಿ ನಮ್ಮಲ್ಲಿ ಯಾರೊಬ್ಬರೂ ಮತ್ತೊಬ್ಬರನ್ನು ಅಸಡ್ಡೆ ಮಾಡಕೂಡದು.

ಅಂತ ಪರೀಕ್ಷೆಯನ್ನು ಮಾಡಿಕೊಳ್ಳುವ ಮೂಲಕ ಅಥವಾ ನಮ್ಮ ಸ್ವಂತ ಒಲವುಗಳು ಯಾವುದರ ಕಡೆಗೆ ಇರುತ್ತದೆಂಬುದನ್ನು ನೋಡಿಕೊಳ್ಳುವ ಮೂಲಕ, ದೇವರು ನಿಮಗೆ ಅನುಗ್ರಹಿಸಿರುವ ಸಾಮರ್ಥ್ಯಗಳ ಬಗ್ಗೆ ಒಂದು ಉತ್ತಮವಾದ ತಿಳುವಳಿಕೆಯನ್ನು ಪಡೆದುಕೊಳ್ಳಬಲ್ಲಿರಿ. ನಾನು ಏನು ಮಾಡಿರುತ್ತಿದ್ದೆನು? ನನಗೆ ಖಚಿತವಾಗಿ ತಿಳಿಯದು. ನನ್ನ ಹೆಂಡತಿಯು ಯೋಚಿಸುವದೇನೆಂದರೆ ನಾನೇ ಆ ಅಪ್ಪಣೆಗಳನ್ನು ಕೊಡುವ ವ್ಯಕ್ತಿಯಾಗಿರುತ್ತಿದ್ದೆನು, ಮತ್ತು ಅವಳು ಸ್ವಚ್ಛಗೊಳಿಸುವದಕ್ಕೆ ಒರೆಸುವ ಸಾಧನ ಹುಡುಕುವವಳಾಗಿರುತ್ತಿದ್ದಳು ಎಂಬುದೇ.

ಆ ಪರಿಸ್ಥಿತಿಯಲ್ಲಿ ವಿಷಯವು ಏನೇ ಆಗಿದ್ದರೂ, ನನಗೆ ಬೋಧಿಸುವ ವರವಿದೆ ಎಂದು ನನಗೆ ಪೂರಾ ಭರವಸೆಯುಂಟು. "ಬೋಧಿಸುವ ವರ" ಎಂದು ಹೇಳುವಾಗ ನನ್ನ ತಾತ್ಪರ್ಯವೇನೆಂದರೆ ನನಗೆ ಗೊತ್ತಿರುವ (ಅಥವಾ ಗೊತ್ತಿದೆಯೆಂದು ನೆನಸುವ) ಸಂಗತಿಯನ್ನು ಇತತರೊಂದಿಗೆ—ಅವರಿಗೆ ಅದನ್ನು ಕೇಳಿಸಿಕೊಳ್ಳಲು ಮನಸ್ಸಿದ್ದರೂ ಮನಸ್ಸಿಲ್ಲದಿದ್ದರೂ ಸರಿಯೇ—ಹಂಚಿಕೊಳ್ಳುವದಕ್ಕೆ ಒಲವು ಹೊಂದಿರುತ್ತೇನೆ. ಸ್ವಲ್ಪ ಕಾಲದ ಹಿಂದೆ, ಬಾಂಗ್ಲಾ ದೇಶಕ್ಕೆ ಪ್ರಯಾಣವನ್ನು ಮಾಡಿ ಬಂದ ನಂತರದಲ್ಲಿ, ನನ್ನ ಅಳಿಯನಾದ *Dan* ನನಗೆ ಬಾಂಗ್ಲಾ ದೇಶದ ಬಗ್ಗೆ ಒಂದು ಸರಳವಾದ ಪ್ರಶ್ನೆಯನ್ನು ಕೇಳಿದನು—"ಬಾಂಗ್ಲಾ ದೇಶವು ಎಲ್ಲಿರುತ್ತದೆ?" ಎಂಬಂತಹ ಪ್ರಶ್ನೆಯನ್ನು ಕೇಳಿದನು. ಕೆಲವರು ಆ ಪ್ರಶ್ನೆಗೆ

ಒಂದು ಪದಗುಚ್ಛದಲ್ಲಿ ಅಥವಾ, ಹೆಚ್ಚೆಂದರೆ, ಒಂದು ವಾಕ್ಯಸಾಲಿನಲ್ಲಿ ಉತ್ತರಿಸಬಲ್ಲರು ಎಂದು ನಾನು ಭಾವಿಸಿಕೊಳ್ಳುತ್ತೇನೆ. ನನ್ನ ಉತ್ತರವೋ ಬಾಂಗ್ಲಾ ದೇಶದ ಇತಿಹಾಸ, ಭೌಗೋಳಿಕತೆ, ಮತ್ತು ಸಂಸ್ಕೃತಿಯ ಮೇಲೆ ಮೂವತ್ತು ನಿಮಿಷಗಳ ಭಾಷಣವೇ ಆಗಿತ್ತು. *Dan* ನಂತರದಲ್ಲಿ ಕುಟುಂಬದೊಂದಿಗೆ, "ನಾನು ಪ್ರಶ್ನೆಯನ್ನು ಕೇಳಿ ತಪ್ಪು ಮಾಡಿ ಬಿಟ್ಟೆನು, ಮತ್ತು ನಾನು ಬಾಂಗ್ಲಾ ದೇಶದ ಕುರಿತು ಎಂದಾದರೂ ತಿಳಿದುಕೊಳ್ಳಲು ಬಯಸುವದಕ್ಕಿಂತಲೂ ಬಹಳ ಅಧಿಕವಾಗಿಯೇ ಕಲಿತುಕೊಂಡೆನು" ಎಂದು ಹೇಳಿಕೊಂಡನು. ನನ್ನ ಅನಿಸಿಕೆಯಲ್ಲಾದರೋ, ಅದುವೇ ಬೋಧಿಸುವ ವರವಾಗಿದೆ (ಕೆಲವರು ಅದನ್ನು "ಶಾಪ" ಎಂದು ಕರೆಯಬಹುದು). ನಿಜವಾದ ಬೋಧಕನು ಕೇಳುವಂಥ ಯಾವನಿಗಾದರೂ ತನಗೆ ಗೊತ್ತಿರುವದನ್ನು ಹಂಚಿಕೊಳ್ಳಬೇಕೆಂಬ ಒತ್ತಾಸೆಯುಳ್ಳವನಾಗಿ ರುತ್ತಾನೆ—ಒಂದು ಅಭಿಲಾಷೆಯನ್ನು ಹೊಂದಿರುತ್ತಾನೆ.

ಅದು ಕೇವಲ ಒಂದು ಉದಾಹರಣೆಯಷ್ಟೆ. ದೇವರು ತನ್ನ ಮಕ್ಕಳಿಗೆ ಆತನ ಸೇವೆಯಲ್ಲಿ ಉಪಯೋಗಿಸುವದಕ್ಕಾಗಿ ಕನಿಷ್ಠ ಒಂದು ವರವನ್ನಾದರೂ ಕೊಟ್ಟಿರುತ್ತಾನೆ. ನೀನು ನಿಮ್ಮ ಒಲವುಗಳು ಯಾವುದರೆಡೆಗೆ ಇದೆಯೆಂಬುದನ್ನು ಪರಿಗಣಿಸಿಕೊಳ್ಳುವದಾದರೆ ಕರ್ತನ ಸಭೆಗಾಗಿ ನಿಮಗಿರುವ ಸಾಮರ್ಥ್ಯವು ಸ್ಪಷ್ಟವಾಗಿ ನಿಮಗೆ ತಿಳಿದು ಬರತಕ್ಕದ್ದು.

2. ಒಂದು ಪ್ರಯೋಗಿಸಿ ನೋಡುವದು. ನೀವು ಇಂಥಿಂಥ ವರವನ್ನು ಹೊಂದಿರುವಿರೋ ಇಲ್ಲವೋ ಎಂಬುದನ್ನು ಕಂಡುಕೊಳ್ಳುವದಕ್ಕಿರುವ ಎರಡನೆಯ ದಾರಿಯೆಂದರೆ *ಅದನ್ನು ಪ್ರಯೋಗಿಸಿ ನೋಡುವದು*! ನಮ್ಮ ಅಸ್ಟ್ರೇಲಿಯಾದ ಮಿತ್ರರು ಹೇಳುವಂತೆ, "ಒಂದು ಕೈ ನೋಡಿ ಬಿಡಿರಿ!" ಬಹುಶಃ ನೀವು ಒಂದು ಹೊಸ ಸಂಗತಿಯನ್ನು ಪ್ರಯೋಗಿಸಿ ನೋಡುವ ತನಕ ಎಂದಿಗೂ ಕಂಡುಕೊಳ್ಳಲು ಸಾಧ್ಯವಾಗದಂಥ ಒಂದು ಸಾಮರ್ಥ್ಯವು ನಿಮ್ಮಲ್ಲಿ ಇರುವ ಸಾಧ್ಯತೆಯಿದೆ. ಒಬ್ಬನು ಎಂದಿಗೂ ಹಾಡುವ ಪ್ರಯತ್ನವನ್ನೇ ಮಾಡಿಲ್ಲದವನು "ನನಗೆ ಹಾಡುವ ವರವಿರುವದಿಲ್ಲ" ಎಂದು ಹೇಳುವದಕ್ಕೆ ಸಾಧ್ಯವೇ?

ಅನೇಕ ಅತ್ಯುತ್ತಮ ಪ್ರಸಂಗಿಗಳು, ಬೋಧಕರು, ಮತ್ತು ಹಾಡಿನಲ್ಲಿ ನಡಿಸುವವರು ಪ್ರಯತ್ನವನ್ನು ಮಾಡುವ ತನಕ ತಾವು ಆ ಕ್ಷೇತ್ರಗಳಲ್ಲಿ ಸಮರ್ಥರು ಎಂಬ ಬಗ್ಗೆ ಸಂಶಯ ಹೊಂದಿದ್ದರು—ಮತ್ತು, ಕೆಲವರ ವಿಷಯದಲ್ಲಿ, ಅವರು ಸತತವಾಗಿ, ಮತ್ತೇ ಮತ್ತೇ ಪ್ರಯತ್ನಗಳನ್ನು ಮಾಡಿದ್ದಾರೆ! ಕ್ರಮೇಣದಲ್ಲಿ, ತಾವು ಈ ಮುಂಚೆ ಮಾಡಿರದ ಒಂದು ಸಂಗತಿಯಲ್ಲಿ ಪರಿಣಿತರಾಗಬಹುದು ಎಂಬುದನ್ನು ಕಲಿತುಕೊಂಡರು. ವಾಸ್ತವಾಂಶದಲ್ಲಿ, ತಾವು ಎಂದಿಗೂ ಮಾಡಲಾರೆವೇನೋ ಎಂದುಕೊಂಡ ಕಾರ್ಯಗಳಲ್ಲಿ ಬಹಳ ಪರಿಣಿತರಾಗಿರುತ್ತಾರೆ.

ನಿಮ್ಮ ವರ ಅಥವಾ ವರಗಳನ್ನು ಕಂಡುಕೊಳ್ಳಬೇಕೆಂದರೆ, ನಿಮ್ಮಲ್ಲಿ ಯಾವ ಸ್ವಭಾವತಃ ಬಂದಿರುವ ಒಲವುಗಳು ಮತ್ತು ಸಾಮರ್ಥ್ಯಗಳಿರುವದಾಗಿ ನಿಮಗೆ ಮತ್ತು ಇತತರಿಗೆ ಅನ್ನಿಸುತ್ತದೆಂಬುದನ್ನು ಮೊದಲು ಪರಿಗಣಿಸಬೇಕು. ಎರಡನೆಯದಾಗಿ, ಹೊಸ ಚಟುವಟಿಕೆಗಳನ್ನು ಪ್ರಯೋಗಿಸಿ ನೋಡುತ್ತಲೇ ಇರ್ರಿ. ನಿಮ್ಮಲ್ಲಿ ಹೂಣಲ್ಪಟ್ಟದ್ದಾಗಿ ಇರುವಂತಹ ಕುಶಲತೆಗಳಿರಬಹುದಾಗಿದೆ. ನೀವು ನಿಮ್ಮ ಪ್ರತಿಭೆಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಪ್ರಯತ್ನಿಸುತ್ತಲೇ ಇರುವದಾದರೆ ಅವುಗಳನ್ನು ಕಂಡುಕೊಳ್ಳುವಿರಿ.

*ನಿಮ್ಮ ವರಗಳನ್ನು ಉಪಯೋಗಿಸುವದು ಏಕೆ ಪ್ರಾಮುಖ್ಯವಾಗಿರುತ್ತದೆ?*

ಕೇಳಿಕೊಳ್ಳಬೇಕಾದ ಮೂರನೆಯ ಪ್ರಶ್ನೆಯು ಇದೇ: "ದೇವರು ನನಗೆ ಕೊಟ್ಟಿರುವ ವರಗಳನ್ನು ಕಂಡುಕೊಂಡು ಆ ವರಗಳನ್ನು ದೇವರ ಸೇವೆಯಲ್ಲಿ ಉಪಯೋಗಿಸಲಾರಂಭಿಸಿದರೆ ಏನು ಸಂಭವಿಸುವದು?" ನೀವು ದೇವರು ನಿಮ್ಮನ್ನು ಸೇವೆ ಮಾಡುವದಕ್ಕೆ ಸಜ್ಜುಗೊಳಿಸಿರುವ ದಾರಿಯಲ್ಲಿಯೇ ಸೇವೆ ಮಾಡುತ್ತಿರುವಾಗ, ಎರಡು ಕಾರ್ಯಗಳು ಸಂಭವಿಸುತ್ತವೆ. ಆರಂಭದಲ್ಲಿ ನೋಡುವದಾದರೆ, ನೀವು ದೇವರ ರಾಜ್ಯದಲ್ಲಿ ಹೆಚ್ಚು ಫಲ ಕೊಡುವವರಾಗುವಿರಿ. ನೀವು ಮತ್ತೊಬ್ಬರು ಮಾಡುವದಕ್ಕೆ ಸಜ್ಜುಗೊಳಿಸಲ್ಪಟ್ಟಿರುವದನ್ನು ಮಾಡುವದಕ್ಕೆ ಪ್ರಯತ್ನಿಸುವದರ ಬದಲಾಗಿ, ಸ್ವತಃ ನೀವು ಯಾವದನ್ನು ಉತ್ತಮವಾಗಿ ಮಾಡಬಲ್ಲಿರೋ ಅದನ್ನೇ ಮಾಡುವವರಾದರೆ, ನೀವು ಎಂದಾದರೂ ಅಲ್ಪ ಪ್ರತಿಭೆಯಿರುವ ಒಂದು ಸೇವೆಯಲ್ಲಿ ಮಾಡುವದಕ್ಕೆ ಪ್ರಯತ್ನಿಸುವ ಮೂಲಕ ಸಾಧಿಸುವದಕ್ಕಿಂತಲೂ ಅಧಿಕವಾಗಿ ಸಭೆಯ ಬೆಳವಣಿಗೆಗೆ ಕೊಡುಗೆಯನ್ನು ಕೊಡುವದಕ್ಕೆ ಶಕ್ತರಾಗುವಿರಿ. ಅಲ್ಲದೆ, ನೀವು ಹೆಚ್ಚು ಸಂತೋಷಗೊಳ್ಳುವಿರಿ. "ದುಂಡನೆಯ ರಂಧ್ರಗಳಲ್ಲಿ" ಸರಿಹೊಂದಿಸಿಕೊಳ್ಳಲು ಪ್ರಯತ್ನಿಸುವ "ಚತುರ್ಭುಜದ ಬಿರಡೆಗಳು" "ಯಾವಾಗಲೂ ಸಂತೋಷಿಸುವದು" ಕಷ್ಟಕರವಾಗಿರುತ್ತದೆ. ನಾವು ಇಷ್ಟಪಟ್ಟು ಮಾಡುವ ಸಂಗತಿಯನ್ನು, ನಾವೇನು ಮಾಡುವದಕ್ಕೆ ವರವನ್ನು ಹೊಂದಿದ್ದೇವೋ, ನಾವು ಯಾವುದರಲ್ಲಿ ಪರಿಣಿತರಾಗಿದ್ದೇವೋ ಅದನ್ನು ಮಾಡುವದಕ್ಕೆ ಇರುವ ಸಂಗತಿಯನ್ನು ನಿಯತವಾಗಿ ಮತ್ತು ಸ್ಥಿರವಾಗಿ ಮಾಡುವದಕ್ಕೆ ಅನುಮತಿಸಲ್ಪಡುವದು, ಕ್ರೈಸ್ತ ಜೀವಿತವನ್ನು ಒಂದು ಹೊತ್ತುಕೊಳ್ಳಲಾಗಂತಹ ಭಾರದ ಬದಲಾಗಿ ಒಂದು ಆನಂದಿಸಬಹುದಾದ ಸಾಹಸವನ್ನಾಗಿ ಮಾಡುತ್ತದೆ.

*ಇತರ ಕ್ರೈಸ್ತರು ತನ್ನ ವರಗಳನ್ನು ಕಂಡುಕೊಳ್ಳುವಂತೆ ನಾವು ಅವರಿಗೆ ಹೇಗೆ ಸಹಾಯ ಮಾಡಬಲ್ಲೆವು?* ಇನ್ನೊಂದು ಪ್ರಶ್ನೆಯನ್ನು ಪರಿಗಣಿಸಿಕೊಳ್ಳಿರಿ: "ಇತರ ಕ್ರೈಸ್ತರು ತಮ್ಮ ವರಗಳನ್ನು, ರಾಜ್ಯದಲ್ಲಿ ತಮ್ಮ ಸ್ಥಾನಗಳನ್ನು ಕಂಡುಕೊಳ್ಳುವಂತೆ ನಾನು ಹೇಗೆ ಸಹಾಯ ಮಾಡಬಲ್ಲೆನು?" ಮೂರು ಸಲಹೆಗಳು ನನ್ನ ಮನಸ್ಸಿಗೆ ಬರುತ್ತವೆ.

ಮೊದಲನೆಯದಾಗಿ, ಸಹೋದರರಿಗೆ ದೇವರ ವರಗಳ ಕುರಿತ ಸತ್ಯವನ್ನು ಕಲಿಸುವದು. ವಿಶೇಷವಾಗಿ, ದೇವರ ಜನರಲ್ಲಿ ಪ್ರತಿಯೊಬ್ಬರು ದೇವರಿಂದ ಕೊಡಲ್ಪಟ್ಟಿರುವ ಕನಿಷ್ಠ ಒಂದು ವರವನ್ನು ಹೊಂದಿದ್ದಾರೆ, ಸಭೆಯಲ್ಲಿ ಪ್ರತಿಯೊಂದು ಪಾತ್ರವು ಪ್ರಾಮುಖ್ಯವಾದದ್ದೆಂದು, ಮತ್ತೊಬ್ಬರ ಪಾತ್ರವನ್ನು ಯಾರೊಬ್ಬರೂ ಅಸಡ್ಡೆಯಿಂದ ಕಾಣಬಾರದೆಂದು, ಮತ್ತು ನಮಗಿರುವ ಯಾವದೇ ಪ್ರತಿಭೆಗಳನ್ನು ನಾವು ಕರ್ತನ ರಾಜ್ಯದಲ್ಲಿ ಉಪಯೋಗಿಸತಕ್ಕದ್ದೆಂದು ಅರ್ಥಮಾಡಿಕೊಳ್ಳುವಂತೆ ಅವರಿಗೆ ಸಹಾಯ ಮಾಡಬೇಕು.

ಎರಡನೆಯದಾಗಿ, ಜನರಿಗೆ ತಮ್ಮ ವರಗಳನ್ನು ಅನ್ವೇಷಿಸಿಕೊಳ್ಳಲು ಮತ್ತು ಕಂಡುಕೊಳ್ಳುವದಕ್ಕೆ ಅವಕಾಶಗಳು ಒದಗಿಬರುವಂತಾಗಲು ಸಹಾಯ ಮಾಡಬೇಕು. ಸಭೆಯಲ್ಲಿ ವಿವಿಧ ರೀತಿಯ ಸೇವೆಗಳಿಗಾಗಿ ಹೆಚ್ಚೆಚ್ಚು ಅವಕಾಶಗಳು ಇದ್ದಂತೆ, ಪ್ರತಿಯೊಬ್ಬರೂ ತಮ್ಮ ತಮ್ಮ ಸ್ಥಾನವನ್ನು—ಒಂದು ಸೇವೆಯನ್ನು—ಕಂಡುಕೊಂಡು ಸಭೆಯ ಆತ್ಮೀಕವಾದ ಹಾಗೂ ಸಂಖ್ಯಾಬಲವನ್ನು ಹೆಚ್ಚಿಸುವದರಲ್ಲಿ ಬೆಲೆಯುಳ್ಳ ಕೊಡುಗೆಯನ್ನು ಅವನು ಅಥವಾ ಅವಳು ಕೊಡಬಲ್ಲರು.

ಮೂರನೆಯದಾಗಿ, ಯಾರಲ್ಲಿ ಪ್ರತಿಭೆಗಳಿರುವಂತೆ ತೋರಿದರೂ ಅವರಿಗೆ ತಿಳಿಯದೆ ಇರುವ ಅಥವಾ ಇನ್ನು ಅವುಗಳನ್ನು ದೇವರ ಸೇವೆಯಲ್ಲಿ ಉಪಯೋಗಿಸದಂತಿರುವ ಹಾಗೆ ತೋರುವ ಸಭೆಯಲ್ಲಿನ ವ್ಯಕ್ತಿಗಳನ್ನು ಪ್ರೋತ್ಸಾಹಿಸಿರಿ. ನಾವು ಒಬ್ಬ ವ್ಯಕ್ತಿಗೆ, "ನೀನು ಒಬ್ಬ ಪ್ರತಿಭಾವಂತ ಪ್ರಸಂಗಿ ಅಥವಾ ಬೋಧಕ ಆಗಬಲ್ಲೆ" ಅಥವಾ "ನೀನಗಿರುವ ಸಾಮರ್ಥ್ಯ ನೋಡಿದರೆ ನೀನು ಒಬ್ಬ ಉತ್ತಮ ಸಮಲೋಚಕನಾಗಬಲ್ಲೆ ಎಂದು ನನಗನ್ನಿಸುತ್ತದೆ" ಅಥವಾ "ನಿನ್ನಲ್ಲಿ ಒಬ್ಬ ಉತ್ತಮ ಹಿರಿಯನಾಗುವ ಎಲ್ಲಾ ಲಕ್ಷಣಗಳೂ ಇರುತ್ತವೆ" ಎಂದು ಹೇಳುವಾಗ ನಾವು ಕರ್ತನಿಗಾಗಿ ಮತ್ತು ಆ ವ್ಯಕ್ತಿಗೆ ಇಬ್ಬರಿಗೂ ದೊಡ್ಡ ಸೇವೆಯನ್ನು ಮಾಡಿದವರಾಗುತ್ತೇವೆ.

*ಮುಕ್ತಾಯ.* ನನ್ನಲ್ಲಿ ಬೇರೆಯವರು ಹೊಂದಿರುವಂಥ ಕೆಲವು ಕುಶಳತೆಗಳಿಲ್ಲ ಮತ್ತು ಸೇವೆಯ ಕೆಲವೊಂದು ಕ್ಷೇತ್ರಗಳಲ್ಲಿ ನನಗಿಂತಲೂ ಅನೇಕ ಜನರು ಹೆಚ್ಚು ಪರಿಣಾಮಕಾರಿಯಾಗಿ ಇರಬಲ್ಲರಾದರೂ, ನಾನು ಬೋಧಿಸುವಕ್ಕೆ ಶಕ್ತನಾಗಿರುತ್ತೇನೆ. ಕೆಲವರಿಗೆ, ಬೋಧಿಸುವದು ಒಂದು ಸಂಕಷ್ಟದಂತಿರಬಲ್ಲದು. ಆಗಾಗ್ಗೆ, ಬೋಧಿಸುವದು ಕಠಿಣ ಮತ್ತು ಭಾರವೆಂಬಂತಿರುತ್ತದೆ—ಆದರೆ ನನ್ನ ವಿಷಯದಲ್ಲಿ ಸಾಮಾನ್ಯವಾಗಿ ಆ ರೀತಿಯಲ್ಲಿರುವದಿಲ್ಲ. ಸಾಧಾರಣವಾಗಿ, ನನಗೆ ಬೋಧಿಸುವದೆಂದರೆ ಬಹಳ ಇಷ್ಟವಾದದ್ದು. ಕೆಲವು ಸಾರಿ ಸಂಗತಿಗಳು ಸರಿಯಾಗಿ ಸಾಗುತ್ತಿರುವ ವೇಳೆ—ನನಗೆ ವಿಷಯ ಸಾಮಗ್ರಿ ಚೆನ್ನಾಗಿ ಗೊತ್ತಿರುವಾಗ, ಮತ್ತು ಎಲ್ಲರೂ ಗಮನ ಕೊಟ್ಟು ಕೇಳಿಸಿಕೊಳ್ಳುತ್ತಿರುವಂತೆ ಕಾಣುವಾಗ ಮತ್ತು ತರಗತಿಯನ್ನು ಆನಂದಿಸುತ್ತಿರುವಾಗ—ನಾನು ಸ್ಥಳಗಳನ್ನು ಯಾರೊಂದಿಗೂ ವಿನಿಮಯ ಮಾಡಿಕೊಳ್ಳುವದಿಲ್ಲ. ನೀವು ನಿಮ್ಮ ವರ ಅಥವಾ ವರಗಳನ್ನು ಕಂಡುಕೊಳ್ಳುವಿರಿ ಮತ್ತು ಅವುಗಳನ್ನು ನಿಮಗೆ ಸಂತೃಪ್ತಿ ತರುವಂತಹ ಹಾಗೂ ಕರ್ತನಿಗೆ ಮೆಚ್ಚಿಕೆಯಾಗುವಂತಹ ರೀತಿಯಲ್ಲಿ ಉಪಯೋಗಿಸುವಿರೆಂಬುದು ನಿಮಗೋಸ್ಕರ ನಾನು ಮಾಡುವ ಪ್ರಾರ್ಥನೆಯಾಗಿರುತ್ತದೆ.

## ಪ್ರೀತಿಸುವದಕ್ಕೆ ಒಂದು ಸವಾಲು (12:9-13)

12:9-13ರ ಮೇಲೆ ಪ್ರೀತಿಯ ಕುರಿತು ಈ ಕೆಳಗಿನ ಅಂಶಗಳೊಂದಿಗೆ ಒಂದು ಪ್ರಸಂಗವನ್ನು ಸಿದ್ಧಪಡಿಸಬಹುದು:

*ಪ್ರೀತಿಯು ಯಥಾರ್ಥವಾದದ್ದು*—"ಪ್ರೀತಿಯು ನಿಷ್ಕಪಟವಾಗಿರಲಿ" (12:9).
*ಪ್ರೀತಿಯು ನಿಸ್ವಾರ್ಥವುಳ್ಳದ್ದು*—"ಒಬ್ಬರಿಗಿಂತ ಒಬ್ಬರು ಮುಂದಾಗಿರಿ" (12:10).
*ಪ್ರೀತಿಯು ಉತ್ಸಾಹಭರಿತವಾದದ್ದು*—"ಆಸಕ್ತಚಿತ್ತರಾಗಿದ್ದು ಕರ್ತನ ಸೇವೆ ಮಾಡುವವರಾಗಿರ್ರಿ" (12:11).
*ಪ್ರೀತಿಯು ಸ್ಥಿರವಾದದ್ದು*—"ನಿರೀಕ್ಷಿಸುವ ಮಹಾಪದವಿಯನ್ನ ನೆನಸಿ ಉಲ್ಲಾಸವಾಗಿರ್ರಿ" (12:12).
*ಪ್ರೀತಿಯು ಸಹಾಯಕವಾದದ್ದು*—"ದೇವಜನರಿಗೆ ಕೊರತೆ ಬಂದಾಗ ಸಹಾಯ ಮಾಡಿರಿ. ಅತಿಥಿಸತ್ಕಾರವನ್ನು ಅಭ್ಯಾಸಿಸಿರಿ" (12:13).

## ಒಬ್ಬ ಕ್ರೈಸ್ತನ ಲಕ್ಷಣ ನಿರೂಪಣೆ (12:9-16)

ಒಬ್ಬ ಚಿಕ್ಕ ಬಾಲಕನು ಅನೇಕ ಸಾರಿ ತರಗತಿಗಳಲ್ಲಿ ಮತ್ತು ಪ್ರಸಂಗಗಳಲ್ಲಿ "ಕ್ರೈಸ್ತನು" ಎಂಬ ಪದವನ್ನು ಕೇಳಿಸಿಕೊಂಡಿದ್ದನು, ಆದರೆ ಅದರರ್ಥವೇನೆಂಬ ಬಗ್ಗೆ ಅವನಿಗೆ ಖಚಿತವಾಗಿ ಗೊತ್ತಾಗಿರಲಿಲ್ಲ. ಒಂದು ದಿನ ಆತನು ತನ್ನ ತಂದೆಯನ್ನು, "ಅಪ್ಪಾ, ಒಬ್ಬ ಕ್ರೈಸ್ತನು ಅಂದರೆ ಏನು?" ಎಂದು ಕೇಳಿದನು. ಆತನ ತಂದೆಯು ಆತನಿಗೆ ಕ್ರಿಸ್ತನಿಗೆ ಸೇರಿದವನೇ ಒಬ್ಬ ಕ್ರೈಸ್ತನೆಂದು ಮತ್ತು ತಾನು ಹೇಗೆ ಕ್ರೈಸ್ತನಾದೆನು ಎಂಬ ಬಗ್ಗೆ ಹೇಳಿದನು. ಆ ಬಾಲಕನು ಈಗಲೂ ಏನು ಅರ್ಥವಾಗದವನಂತೆ ಕಂಡನು, ಆದ್ದರಿಂದ ಅವನ ತಂದೆಯು ಅವನಿಗೆ, "ಒಬ್ಬ ಕ್ರೈಸ್ತನು ಇಂಥಿಂಥ ರೀತಿಯ ಜೀವನವನ್ನು ನಡಿಸತಕ್ಕದ್ದು. ನಾನು ರೋಮಾ 12ನೇ ಅಧ್ಯಾಯವನ್ನು ಅಧ್ಯಯನ ಮಾಡುತ್ತಿದ್ದೇನೆ, ಮತ್ತು ಅದು ವಿವಿಧ ಪರಿಸ್ಥಿತಿಗಳಲ್ಲಿ ಒಬ್ಬ ಕ್ರೈಸ್ತನು ಹೇಗೆ ವರ್ತಿಸಬೇಕು ಎಂಬುದಕ್ಕೆ ಆ ಅಧ್ಯಾಯವು ಒಂದು ಉತ್ತಮವಾದ ಸಾರಾಂಶವಾಗಿರುತ್ತದೆ" ಎಂದು ಹೇಳಿದನು. ಆತನು ರೋಮಾ 12:9-16ರ ಮೇಲೆ ತಾನು ಮಾಡಿಕೊಂಡಿದ್ದ ಟಿಪ್ಪಣಿಗಳನ್ನು ಎತ್ತಿಕೊಂಡು ಹೀಗೆ ಓದಿದನು, "ಒಬ್ಬ ಕ್ರೈಸ್ತನು ಪ್ರೀತಿ ಮಾಡುವವನು, ನಿಸ್ವಾರ್ಥಿ, ಆಸಕ್ತಿಯುಳ್ಳವನು, ಸ್ಥಿರವಾದವನು, ಉಪಕಾರಿ, ಕೃಪಾವಂತ, ಸಹಾನುಭೂತಿಯುಳ್ಳವನು, ಮತ್ತು ದೀನತೆಯುಳ್ಳವನು." ಬಾಲಕನು ತನ್ನ ತಂದೆಯ ಮಾತುಗಳನ್ನು ಕುರಿತು ಆಲೋಚಿಸಿ ಹೀಗೆ ಕೇಳಿದನು, "ನಾನು ಅಂಥವರನ್ನು ಎಂದಾದರೂ ನೋಡಿದ್ದೇನಾ?"

## ಸಾಮರಸ್ಯದಿಂದ ಜೀವಿಸುವದು (12:16)

ರೋಮಾ 12:16 ಹೀಗೆ ಹೇಳುತ್ತದೆ, "ನಿಮ್ಮ ನಿಮ್ಮೊಳಗೆ ಏಕಮನಸ್ಸುಳ್ಳವರಾಗಿರ್ರಿ; ದೊಡ್ಡಸ್ತಿಕೆಯ ಮೇಲೆ ಮನಸ್ಸಿಡದೆ ದೀನರ ಸಂಗಡ ಬಳಿಕೆಯಾಗಿರ್ರಿ. ನಿಮ್ಮನ್ನು ನೀವೇ ಬುದ್ಧಿವಂತರೆಂದು ಎಣಿಸಿಕೊಳ್ಳಬೇಡಿರಿ." ಇತತರ ಸಾಮಾಜಿಕ ಸ್ಥಾನಮಾನ ಏನೇ ಆಗಿದ್ದರೂ ಸರಿಯೇ ಅವರ ಸಂಗಡ ಸಾಮರಸ್ಯದಿಂದ ಜೀವಿಸಬೇಕೆಂದು ಇಲ್ಲಿ ಕರೆ ಕೊಡಲಾಗಿರುತ್ತದೆ.

ಒಬ್ಬ ಹೊಲಸಾದ, ಚಿಂದಿಬಟ್ಟೆ ತೊಟ್ಟಿದ್ದ ವ್ಯಕ್ತಿಯು ಒಂದು ಸಿರಿವಂತ ಸಭೆಗೆ ಹೋದ ಕುರಿತ ಕಥೆಯು ಹೇಳಲ್ಪಡುತ್ತದೆ. ಆತನು ಒಬ್ಬ ಸ್ತ್ರೀಯ ಪಕ್ಕದಲ್ಲಿ ಕುಳಿತನು, ಆಕೆಯ ಉಡುಪುಗಳನ್ನು ಮತ್ತು ಧರಿಸಿದ್ದ ಆಭರಣಗಳೇ ಆಕೆಯ ಐಶ್ವರ್ಯಕ್ಕೆ ಜಾಹಿರಾತಿನಂತಿದ್ದವು. ಆ ಸ್ತ್ರೀಯು ಅತಿಥಿಯಿಂದ ಎಷ್ಟು ಸಾಧ್ಯವೋ ಅಷ್ಟು ದೂರಕ್ಕೆ ಸರಿದು ಕುಳಿತುಕೊಂಡಳು. ಒಬ್ಬ ಸ್ವಾಗತಕಾರನು ಬಂದಾಗ, ಆಕೆಯು ಗಟ್ಟಿಯಾದ ಪಿಸುಮಾತಿನಲ್ಲಿ, "ನನಗೆ ಬರುತ್ತಿರುವ ವಾಸನೆ ನಿನಗೂ ಬರುತ್ತಿದೆಯಾ?" ಸ್ವಾಗತಕಾರನು ಗಾಳಿಯನ್ನೊಮ್ಮೆ ಮೂಸಿನೋಡಿ, "ಹೌದು, ಅದು ಸ್ವ-ಪ್ರಾಮುಖ್ಯತೆ"ಯ ನಾತವೆಂದು ಅನ್ನಿಸುತ್ತದೆ" ಎಂದು ಹೇಳಿದನು.

ಕ್ರೈಸ್ತತ್ವವು ಶ್ರೇಷ್ಠ ಸಮಕಾರಿ ಆಗಿರುತ್ತದೆ (ಗಲಾತ್ಯ 3:28). ಕ್ರಿಸ್ತನು ಅಂತಸ್ತುಗಳ ಅಥವಾ ಜಾತಿಗಳ ವ್ಯವಸ್ಥೆಯನ್ನು ಮನ್ನನೆ ಮಾಡುವದಿಲ್ಲ. ನಾನು Abilene Christian College (ಈಗ ಅದು ವಿಶ್ವವಿದ್ಯಾಲಯ) ಗೆ ಹಾಜರಾಗುತ್ತಿದ್ದ ವೇಳೆ, ಕಾಲೇಜಿನ ಆಧ್ಯಕ್ಷನು College church of Christ ಸಭೆಯ ಹಿರಿಯನಾಗಿದ್ದನು. ಅದೇ ರೀತಿ ಕಾಲೇಜಿನ

ದ್ವಾರಪಾಲಕರಲ್ಲೊಬ್ಬನು ಸಹ ಹಿರಿಯನಾಗಿದ್ದನು. ಅವರಿಬ್ಬರು ಹಿರಿಯರ ಕೂಟದಲ್ಲಿ ಒಟ್ಟಾಗಿ ಕುಳಿತುಕೊಳ್ಳುವಾಗ, ಒಬ್ಬನ ಅಭಿಪ್ರಾಯವು ಮತ್ತೊಬ್ಬನ ಅಭಿಪ್ರಾಯದಷ್ಟೇ ಪ್ರಾಮುಖ್ಯವಾಗಿರುತ್ತಿತ್ತು.

ನಾವು ಎಲ್ಲಾ ಜನರ ವಿಷಯದಲ್ಲಿ ಕ್ರೈಸ್ತರಂತೆ ನಡೆದುಕೊಳ್ಳುವ ಹಾಗೆ ದೇವರು ನಮಗೆ ಸಹಾಯ ಮಾಡಲಿ. ಹೆಚ್ಚುಕಡಿಮೆ ಎಲ್ಲಾ ಸಭೆಗಳಲ್ಲಿ, ತಾನು ಅಲ್ಲಿ ಸೇರಿದವನಲ್ಲವೆಂಬ ಭಾವನೆಯುಳ್ಳ ಅಥವಾ ನೋವುಕರವಾಗಿ ಸಂಕೋಚದಿಂದಿರುವ ಕನಿಷ್ಠ ಒಬ್ಬರಾದರೂ ಇರುತ್ತಾರೆ. ಒಬ್ಬ ಕ್ರೈಸ್ತನು ಪ್ರತಿಯೊಬ್ಬ ವ್ಯಕ್ತಿಗಳನ್ನು ಹುಡುಕುತ್ತಾನೆ, ಆತನನ್ನು ಸಂದರ್ಶಿಸುತ್ತಾನೆ, ಮತ್ತು ಅವರಿಗೆ ಅಂಗೀಕಾರ ಮತ್ತು ಪ್ರೀತಿಯನ್ನು ವ್ಯಕ್ತಪಡಿಸುವ ಮೂಲಕ ಸಹಾಯ ಮಾಡುತ್ತಾನೆ.

ಪೌಲನು ನಿರ್ದಿಷ್ಟವಾಗಿ ನಾವು "ಮೇಲ್ವರ್ಗದವರು" ಎಂದು ಕರೆಯುವ ಜನರ ವಿಷಯದಲ್ಲಿ ಮಾತಾಡಿದನು, ಆದರೆ ಜೀವನದಲ್ಲಿ ಅವರಿಗಿರುವ ಸ್ಥಾನಗಳು ಏನೇ ಆಗಿದ್ದರೂ ಸರಿಯೇ, ರೋಮಾ 12:16ರ ಸಂದೇಶವು ಎಲ್ಲಾ ಜನರಿಗೂ ಅಗತ್ಯವಾಗಿರುತ್ತದೆ ಎಂಬುದು ನನ್ನ ಅನುಭವವಾಗಿದೆ. ಅಲ್ಪ ಹಣವುಳ್ಳವರು ಹಣವುಳ್ಳವರ ಕುರಿತು ಹತಾಶೆಯಿಂದ ಮಾತಾಡುವದನ್ನು ನಾನು ಕೇಳಿಸಿಕೊಂಡಿದ್ದೇನೆ. ಅಲ್ಪವಾದ ಶಿಕ್ಷಣವುಳ್ಳವರು ಉನ್ನತ ಪದವಿಗಳನ್ನು ಪಡೆದಿರುವವರ ಬಗ್ಗೆ ಅಪಹಾಸ್ಯ ಮಾಡುವದನ್ನು ಕೇಳಿಸಿಕೊಂಡಿದ್ದೇನೆ. *ಯಾವದೋ* ಒಂದು ಕಾರಣಕ್ಕಾಗಿ ನಾನು ಮತ್ತೊಬ್ಬನಿಗಿಂತಲೂ ಉತ್ತಮನೆಂದು ಭಾವಿಸಿಕೊಳ್ಳಬೇಕೆಂದು ಹುಟ್ಟು ಗುಣವಿರುತ್ತದೆ: ನಾವು ಜೀವಿಸುವ ಸ್ಥಳದ ಕಾರಣಕ್ಕಾಗಿ, ನಮ್ಮ ವರ್ಣದ ಕಾರಣಕ್ಕಾಗಿ, ನಾವು ಹೊಂದಿರುವ ಕಾರಿನ ಕಾರಣಕ್ಕಾಗಿ— ನೀವು ಪಟ್ಟಿಗೆ ಸೇರಿಸುತ್ತಾ ಹೋಗಬಹುದು. ಅಂಥ ಸಂಗತಿಗಳು ಒಬ್ಬ ಕ್ರೈಸನಿಗೆ ಅಷ್ಟೇನೂ ಪ್ರಾಮುಖ್ಯವಾದವುಗಳಾಗಿರುವದಿಲ್ಲ. ಆತನು ಎಲ್ಲಾ ಜನರನ್ನು ಪ್ರೀತಿಸುತ್ತಾನೆ, ಮತ್ತು ಆತನು ದೀನತೆಯುಳ್ಳವನಾಗಿರುತ್ತಾನೆ.

## ಪ್ರೀತಿಗೆ ಅರ್ಹರಲ್ಲದವರನ್ನು ಹೇಗೆ ಪ್ರೀತಿಸುವದು (12:14, 17-21)

ಶಾಲೆಯಿಂದ ವಿದ್ಯಾಭ್ಯಾಸ ಮುಗಿಸಿ ಪದವಿಧರನಾಗಲಿದ್ದ ಒಬ್ಬ ಯುವಕನು, ಮನೆಯೊಳಗೆ ಓಡಿ ಬರುತ್ತಾ, "ನಾನು ಕಡೇ ಪರೀಕ್ಷೆಯನ್ನು ಮುಗಿಸಿದೆನು!" ಎಂದು ಕೂಗುತ್ತಾ ಬಂದನು. ಆತನ ತಂದೆಯು ತಲೆಯನ್ನು ಅಲ್ಲಾಡಿಸಿದನು ಆದರೆ ಹೀಗಂದುಕೊಂಡನು, "ಅದು ಇದನ್ನು ಮನಗಾಣುವದಿಲ್ಲ, ಆದರೆ ಜೀವನದ ಪರೀಕ್ಷೆಗಳು ಈಗಷ್ಟೆ ಆರಂಭವಾಗುತ್ತಿವೆ!" ನಾವು ನಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದ ಬಳಿಕ, ನಾವು ಅನುದಿನವು ಪರೀಕ್ಷೆಗೊಳಗಾಗುತ್ತಿರುತ್ತೇವೆಂಬುದನ್ನು ನಮ್ಮಲ್ಲಿ ಬಹುತೇಕರು ಬಲ್ಲವರಾಗಿದ್ದೇವೆ. ನಮ್ಮ ದಾರಿಯಲ್ಲಿ ಬರುವ ಎಲ್ಲಾ ಪರೀಕ್ಷೆಗಳೊಳಗೆ, ಬಹುಶಃ ಈಗ ನಾವು ವಾಕ್ಯಭಾಗದಲ್ಲಿ ಅಧ್ಯಯನ ಮಾಡಲಿರುವ ಪರೀಕ್ಷೆಗಿಂತಲೂ ಕಠಿಣವಾದದ್ದು ಯಾವದೂ ಇರುವದಿಲ್ಲ ಎಂದೆಣಿಸುತ್ತದೆ.

ಆ ಪರೀಕ್ಷೆಯು ರೋಮಾ 12:14ರಲ್ಲಿ ಪರಿಚಯಿಸಲ್ಪಟ್ಟಿತು: "ನಿಮ್ಮನ್ನು ಹಿಂಸಿಸುವವರಿಗೆ ಆಶೀರ್ವಾದಮಾಡಿರಿ; ಶಪಿಸದೆ ಆಶೀರ್ವದಿಸಿರಿ." ಅದು 17 ರಿಂದ 21 ವಚನಗಳಲ್ಲಿ ಇನ್ನಷ್ಟು ವಿಸ್ತಾರವಾಗಿ ತಿಳಿಸಲ್ಪಟ್ಟಿದೆ:

ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ. ಎಲ್ಲರ ದೃಷ್ಟಿಯಲ್ಲಿ ಯಾವದು ಗೌರವವಾದದ್ದೋ ಅದನ್ನೇ ಯೋಚಿಸಿ ಸಾಧಿಸಿರಿ. ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ. ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ ಶಿಕ್ಷಿಸುವದನ್ನು ದೇವರಿಗೆ ಬಿಡಿರಿ. ಯಾಕೆಂದರೆ ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆಂಬದಾಗಿ ಬರೆದದೆ. ಹಾಗಾದರೆ ನಿನ್ನ ವೈರಿಯು ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು; ಬಾಯಾರಿದ್ದರೆ ಕುಡಿಯುವದಕ್ಕೆ ಕೊಡು. ಹೀಗೆ ಮಾಡುವದರಿಂದ ಅವನ ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಟ್ಟಂತಾಗುವದು. ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು.

ನಾವು 14ನೇ ವಚನವನ್ನು ಸೇರ್ಪಡೆಗೊಳಿಸಿಕೊಳ್ಳುವದಾದರೆ, ಈ ವಾಕ್ಯಭಾಗವು ನಾಲ್ಕು ನಕಾರಾತ್ಮಕಗಳನ್ನು ಹೊಂದಿದೆ. ಎಲ್ಲಾ ನಾಲ್ಕರ ಸಂದೇಶವು ಮೂಲಭೂತವಾಗಿ ಒಂದೇ ಆಗಿರುತ್ತದೆ.[93]

"[ನಿಮ್ಮನ್ನು ಹಿಂಸಿಸುವವರನ್ನು] ಶಪಿಸಬೇಡಿರಿ" (12:14).
"ಅಪಕಾರಕ್ಕೆ ಅಪಕಾರವನ್ನು ಮಾಡಬೇಡ" (12:17).
"ನೀವೇ ಮುಯ್ಯಿಗೆ ಮುಯ್ಯಿ ತೀರಿಸಬೇಡಿರಿ" (12:19).
"ಕೆಟ್ಟತನಕ್ಕೆ ಸೋತು ಹೋಗದಿರಿ" (12:21).

ಆ ನಾಲ್ಕು ನಕಾರಾತ್ಮಕಗಳು ಸಕಾರಾತ್ಮಕಗಳಿಂದ ಸಮತೋಲನಗೊಳಿಸಲ್ಪಟ್ಟಿರುತ್ತವೆ. ನಿಮ್ಮ ವೈರಿಗಳನ್ನು ಆಶೀರ್ವದಿಸಿರಿ (12:14). ಯಾವದು ಸರಿಯೋ ಅದನ್ನು ಮಾಡಿರಿ, ಮತ್ತು ಎಲ್ಲರ ಸಂಗಡ ಸಮಾಧಾನದಿಂದಿರಿ (12:17, 18). ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವ ವಿಷಯವನ್ನು ದೇವರ ಕೈಗಳಲ್ಲಿ ಬಿಡಿರಿ, ಮತ್ತು ನಿಮ್ಮ ವೈರಿಗಳಿಗೆ ಪ್ರೀತಿ ತೋರಿಸವದರ ಕಡೆಗೆ ಗಮನ ಕೊಡಿರಿ (12:19, 20). ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸಿರಿ (12:21).

ರೋಮಾ 12:14, 17-21 ಪರಸ್ಪರ ಸಂಬಂಧದ ಕುರಿತ ಬೈಬಲಿನಲ್ಲಿಯೇ ಅತ್ಯಂಥ ಪುಷ್ಕಳವಾದದ್ದಾಗಿದೆ. ಪೌಲನು ಮನಸ್ಸಿನಲ್ಲಿ ನಿಮ್ಮನ್ನು ನೋವು ಪಡಿಸಲು ಪ್ರಯತ್ನಿಸುವ ವಿಶ್ವಾಸಿಗಳೇತರರನ್ನಿಟ್ಟುಕೊಂಡು—ಹಿಂಸಕರು (12:14), ವೈರಿಗಳು (12:20), ಮತ್ತು ದುಷ್ಟರು (12:21)—ಈ ಮಾತುಗಳನ್ನಾಡಿದನು. ಹೇಗೂ, ಭಿನ್ನಾಭಿಪ್ರಾಯ ಹೊಂದಿರಬಹುದಾದ ಸಹೋದರರ ಜೊತೆಯಲ್ಲಿ ಹೊಂದಿಕೊಂಡು ಹೋಗುವದರ ಕುರಿತು ಸಹ ವಾಕ್ಯಭಾಗವನ್ನು ಅನ್ವಯಿಸಿಕೊಳ್ಳಬಹುದು. ಇದು ಪ್ರಕ್ಷುಬ್ಧತೆಯಿಂದ ತುಂಬಿರುವ ಕುಟುಂಬಗಳಿಗೆ ಸಹಾಯವಾಗಬಲ್ಲದು. ನಾನು ಈ ಅಧ್ಯಯನಕ್ಕೆ "ಪ್ರೀತಿಗೆ ಅರ್ಹರಲ್ಲದವನನ್ನು ಹೇಗೆ ಪ್ರೀತಿಸುವದು" ಎಂಬ ಶೀರ್ಷಿಕೆಯನ್ನು ಕೊಡುತ್ತಿದ್ದೇನೆ. ನಾವು ಈ ವಚನಗಳಲ್ಲಿ ಸಿಕ್ಕುವ ಬುದ್ಧಿವಾದಗಳ ಕುರಿತು ನೋಡಲಿದ್ದೇವೆ.

*ಅವನಿಗೋಸ್ಕರ ಪ್ರಾರ್ಥಿಸಿರಿ* (12:14). ನಾವು 14ನೇ ವಚನದಲ್ಲಿ, "ನಿಮ್ಮನ್ನು ಹಿಂಸಿಸುವವರಿಗೆ ಆಶೀರ್ವಾದ ಮಾಡಿರಿ; ಶಪಿಸದೆ ಆಶೀರ್ವದಿಸಿರಿ" ಎಂದು ಓದಿದೆವು. "ಆಶೀರ್ವದಿಸು" ಎಂದರೆ "ಅವರನ್ನು ಆಶೀರ್ವದಿಸುವಂತೆ ದೇವರನ್ನು ಕೇಳಿಕೊಳ್ಳುವದು."

ನಾವು ಮೊದಲನೆಯದ್ದನ್ನು ಮಾಡತಕ್ಕದ್ದು; ಎರಡನೆಯದ್ದನ್ನು ನಾವು ಮಾಡಕೂಡದು. 14ನೇ ವಚನವನ್ನು ಸರಳವಾಗಿ ಹೇಳುವದಾದರೆ ನಾವು ನಮ್ಮ ವೈರಿಗಳಿಗೋಸ್ಕರ *ಪ್ರಾರ್ಥನೆ* ಮಾಡಬೇಕು ಎಂಬದೆ.

ನಾನು ಆರಾಧನೆ ಕೂಟಗಳಿಗೆ ಹಾಜರಾಗುತ್ತಿದ್ದಂಥ ಆದರೆ ಪಟ್ಟಣದಲ್ಲಿಯೇ ಅತ್ಯಂಥ ಕುಂದಿದ ವ್ಯಕ್ತಿಯಂತೆ ಕಾಣಿಸುತ್ತಿದ್ದ ಒಬ್ಬನ ಕುರಿತು ಓದಿದೆನು.[94] ಒಂದು ದಿನ ಆತನು ಬೋಧಕನ ಕಚೇರಿಗೆ ಬಂದು, "ಮಿಕ್ಕ ಸದಸ್ಯರೆಲ್ಲರೂ ನಿಜವಾಗಿಯೂ ಸಂತೋಷದಿಂದಲೇ ಇರುತ್ತಾರೋ, ಅಥವಾ ಸುಮ್ಮನೇ ನಟಿಸುತ್ತಿದ್ದಾರೋ?" ಎಂದು ಕೇಳಿದನು.

ಅದಕ್ಕೆ ಬೋಧಕನು, "ಅವರಲ್ಲಿ ಬಹುತೇಕರು ನಿಜಕ್ಕೂ ಸಂತೋಷವಾಗಿಯೇ ಇದ್ದಾರೆಂದು ನನಗನ್ನಿಸುತ್ತದೆ" ಎಂದನು.

ಆಗ ಆ ಮನುಷ್ಯನು ಹೀಗೆ ಹೇಳಿದನು, "ಸರಿ, ನಾನಂತೂ ಇಲ್ಲ. ನಾನು ಸಂಕಟಕ್ಕೊಳಗಾದವನು."

ಅವರು ಆ ಮನುಷ್ಯನ ಚಿಂತೆಗೆ ಕಾರಣವಾದದ್ದರ ಬಗ್ಗೆ ಮಾತಾಡಿದರು. ಆಗ ತಿಳಿದು ಬಂದಿದ್ದೇನೆಂದರೆ ಅವನು ದ್ವೇಷ ಮಾಡುತ್ತಿದ್ದ ಐದು ಜನ ಪ್ರತಿಸ್ಪರ್ಧಿಗಳು ಆತನಿಗಿದ್ದರು. "ಅವರೊಂದು ಮೋಸಗಾರರ ಗುಂಪಾಗಿದ್ದಾರೆ. ಅವರೆಲ್ಲಾ ಸತ್ತಿದ್ದರೆ ಚೆನ್ನಾಗಿರುತ್ತಿತ್ತೆಂದು ಹಾರೈಸುತ್ತೇನೆ" ಎಂದು ಆತನು ಹೇಳಿದನು.

ಆಗ ಬೋಧಕನು ಆತನಿಗೆ, "ನೀನು ಸಂತೋಷವಾಗಿರಬೇಕೆಂದರೆ ಏನು ಮಾಡಬೇಕೆಂದು ನಿನಗೆ ಹೇಳಬಲ್ಲೆನು, ಆದರೆ ನೀನು ಅದನ್ನು ಮಾಡಲಾರಿ" ಎಂದನು.

"ಖಂಡಿತ, ನಾನು ಮಾಡುವೆನು," ಎಂದನು ಆ ವ್ಯಕ್ತಿ.

ಬೋಧಕನು ತನ್ನ ತಲೆಯನ್ನಾಡಿಸಿದನು. "ಇಲ್ಲ, ನೀನು ಮಾಡುವದಿಲ್ಲ."

"ಖಂಡಿತ, ನಾನು ಮಾಡುವೆನು. ಏನು ಮಾಡಬೇಕೆಂದಷ್ಟೆ ನನಗೆ ಹೇಳು ಸಾಕು" ಎಂದು ಆ ವ್ಯಕ್ತಿಯು ಪಟ್ಟು ಹಿಡಿದನು.

ಆಗ ಬೋಧಕನು ಹೀಗೆ ಹೇಳಿದನು, "ಪ್ರತಿ ರಾತ್ರಿ, ನೀನು ಮಲಗುವದಕ್ಕೆ ಹೋಗುವ ಮುನ್ನ, ನಿನ್ನ ಮೊಣಕಾಲೂರಿ ನಿನ್ನ ಪ್ರತಿಸ್ಪರ್ಧಿಗಳಿಗೋಸ್ಕರ ಹೆಸರು ಹೇಳಿ ಪ್ರಾರ್ಥನೆ ಮಾಡು. ಅವರನ್ನು ಹೊಸ ಆಶೀರ್ವಾದಗಳಿಂದ ಆಶೀರ್ವದಿಸುವಂತೆ ದೇವರನ್ನು ಬೇಡಿಕೋ."

ಆ ಮನುಷ್ಯನು ಆಶ್ಚರ್ಯಚಕಿತಗೊಂಡು "ಏನಂದಿರಿ! ನಾನಂತೂ ಅದನ್ನು ಮಾಡಲಾರೆನು!" ಎಂದನು.

ಅದಕ್ಕೆ ಬೋಧಕನು, "ನಾನು ಅದನ್ನು ಮಾಡಲಾರಿ ಎಂದು ಆಗಲೇ ಹೇಳಿದೆನಲ್ಲಾ" ಎಂದನು.

ಆ ಮನುಷ್ಯನು ಗುಣುಗುಟ್ಟುತ್ತಾ, "ಮತ್ತು ನಾನು ಮಾಡುವೆನು ಎಂದೆನು, ಅಲ್ಲವೇ? ನೀನು ನನ್ನನ್ನು ತಂತ್ರಹೂಡಿ ಸಿಕ್ಕಿಸಿ ಬಿಟ್ಟೆ" ಎಂದನು.

ವಾರಗಳು ಗತಿಸಿದಂತೆ, ಆ ವ್ಯಕ್ತಿಯ ಮುಖಚಹರೆಯು ಕ್ರಮೇಣದಲ್ಲಿ ಬದಲಾಗುವದನ್ನು ಬೋಧಕನು ಕಂಡನು. ಒಂದು ದಿನ, ಆ ವ್ಯಕ್ತಿಯು ಪುನಃ ಬೋಧಕನ ಕಚೇರಿಗೆ ಬಂದನು. "ಸರಿ, ಬೋಧಕರೇ, ಅದು ಕಾರ್ಯ ಮಾಡಿತು. ನಾನು ಈಗ ನನ್ನ ಪ್ರತಿಸ್ಪರ್ಧಿಗಳ ಸಂಗಡ ಉತ್ತಮ ಬಾಂದವ್ಯವನ್ನು ಹೊಂದಿರುತ್ತೇನೆ. ಆದರೆ ನಾನೊಂದು

ಅರಿಕೆಯನ್ನಂತೂ ಮಾಡಲೇಬೇಕು. ನಾನು ಅವರಿಗೋಸ್ಕರ ಪ್ರಾರ್ಥಿಸುವದಕ್ಕೆ ಆರಂಭಿಸಿದಾಗ, ನಾನು ನಿಲ್ಲಿಸಿ ಬಿಟ್ಟು ಮೇಲಕ್ಕೆ ನೋಡಿ 'ಕರ್ತನೇ, ಆ ಮಾತುಗಳಲ್ಲಿ ಒಂದೂ ನನ್ನ ಮನಃಪೂರ್ವಕವಾಗಿ ಬಂದದ್ದಲ್ಲ ಎಂದು ನಿನಗೆ ಗೊತ್ತು' ಎಂದು ಹೇಳುತ್ತಿದ್ದೆನು. ಕ್ರಮೇಣದಲ್ಲಿ, ನಾನು ಮನಃಪೂರ್ವಕವಾಗಿ ಹೇಳಲಾರಂಭಿಸಿದೆನು—ಮತ್ತು ಈಗ ನಾನು ಸಂತೋಷದಿಂದ ಇದ್ದೇನೆ" ಎಂದು ಹೇಳಿದನು.

ನೀವು ಒಬ್ಬ ಪ್ರೀತಿಗೆ ಅರ್ಹನಲ್ಲದವನನ್ನು ಹೇಗೆ ಪ್ರೀತಿಸಬಲ್ಲಿರಿ? ನೀವು ಮಾಡಬಹುದಾದ ಮೊದಲ ಸಂಗತಿಯೆಂದರೆ ಆತನಿಗೋಸ್ಕರ ಪ್ರಾರ್ಥಿಸುವದು.

*ಆ ವ್ಯಕ್ತಿಯೊಂದಿಗೆ ಅನುಸರಿಸಿಕೊಂಡು ಬಾಳುವದಕ್ಕೆ ಪ್ರಯತ್ನಿಸಿರಿ* (12:17, 18). ಪರೀಕ್ಷೆಯ ಮೊದಲ ಭಾಗವು ಕಷ್ಟಕರವಾಗಿತ್ತು, ಆದರೆ 17 ಮತ್ತು 18 ವಚನಗಳಲ್ಲಿ ಪರೀಕ್ಷೆಯು ಅದಕ್ಕಿಂತಲೂ ಹೆಚ್ಚು ಕಷ್ಟಕರವಾಗುತ್ತಾ ಸಾಗುತ್ತದೆ: "ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ ಎಲ್ಲರ ದೃಷ್ಟಿಯಲ್ಲಿ ಯಾವದು ಗೌರವವಾದದ್ದೋ ಅದನ್ನೇ ಯೋಚಿಸಿ ಸಾಧಿಸಿರಿ. ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ." ಸೇಡು ತೀರಿಸಿಕೊಳ್ಳುವದು, ಮಾಡಿದ್ದಕ್ಕೆ ಪ್ರತಿಯಾಗಿ ನಾವು ಪ್ರತಿದಾಳಿ ಮಾಡುವದು ನಮ್ಮ ಪ್ರವೃತ್ತಿಯಾಗಿರುತ್ತದೆ. ಹೇಗೂ, ಕ್ರಿಸ್ತನು ನಮ್ಮನ್ನು ಜೀವನದ ಒಂದು ಎತ್ತರವಾದ ನೆಲೆಗೆ ಬರುವಂತೆ ಕರೆಕೊಡುತ್ತಾನೆ (ಮತ್ತಾಯ 5:38-42).

ಬಲೆಯಲ್ಲಿ ಸಿಕ್ಕಿಕೊಂಡಿದ್ದ ಒಂದು ಕಾಡು ಪ್ರಾಣಿಯನ್ನು ಬಿಡುಗಡೆಗೊಳಿಸಲು ಪ್ರಯತ್ನಿಸುತ್ತಿದ್ದ ಒಬ್ಬ ಮನುಷ್ಯನ ಕುರಿತ ಕಥೆಯು ಹೇಳಲ್ಪಡುತ್ತದೆ. ಆತನು ಹಾಗೆ ಮಾಡುತ್ತಿರುವಾಗ, ಪ್ರಾಣಿಯು ಬುಸುಗುಟ್ಟುತ್ತಾ ಆತನನ್ನು ಪರಚುವದಕ್ಕೆ ನೋಡುತ್ತಿತ್ತು. ದಾರಿ ಹೋಗುವವನೊಬ್ಬನು, "ನೀನೇಕೆ ಆ ಪ್ರಾಣಿಗೆ ಸಹಾಯ ಮಾಡುವ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರುವಿ? ಅದು ನಿನಗೆ ಗಾಯ ಮಾಡಬಲ್ಲದು" ಎಂದು ಕೇಳಿದನು. ಅದಕ್ಕೆ ಆ ವ್ಯಕ್ತಿಯು ಉತ್ತರಿಸಿ, "ಬುಸುಗುಟ್ಟುವದು ಮತ್ತು ಉಗುರುಗಳಿಂದ ಪರಚುವದು ಅದರ ಹುಟ್ಟುಸ್ವಭಾವ ಮತ್ತು ಸಹಾಯ ಮಾಡುವದು ನನ್ನ ಸ್ವಭಾವ. ಈ ಪ್ರಾಣಿಯು ತನ್ನ ಸ್ವಭಾವವನ್ನು ಬದಲಾಯಿಸಿಕೊಳ್ಳುವದಿಲ್ಲ ಎಂಬ ಒಂದೇ ಕಾರಣಕ್ಕಾಗಿ ನಾನೇಕೆ ನನ್ನದನ್ನು ಬದಲಾಯಿಸಿಕೊಳ್ಳಬೇಕು?" ಎಂದು ಕೇಳಿದನು.[95]

*ಆತನಿಗೆ ಸಹಾಯ ಮಾಡಿರಿ* (12:19, 20). ಪರೀಕ್ಷೆಯು ಮುಂದಕ್ಕೆ ಹೆಚ್ಚೆಚ್ಚಾಗಿ ಕಠಿಣಗೊಳ್ಳುತ್ತಲೇ ಸಾಗುತ್ತದೆ. 19 ಮತ್ತು 20 ವಚನಗಳಲ್ಲಿ, ಪೌಲನು ನಮಗೆ ಇತರರು ನೋವುಂಟು ಮಾಡುವದಕ್ಕೆ ಪ್ರಯತ್ನಿಸಿದಾಗ್ಯೂ ಅವರಿಗೆ *ಸಹಾಯ ಮಾಡಿರಿ* ಎಂದು ಕರೆ ಕೊಡುತ್ತಾನೆ.

ಜನಮೆಚ್ಚಿಕೆಯುಳ್ಳ ಅಭಿಪ್ರಾಯವೊಂದಕ್ಕೆ ವಿರುದ್ಧವಾಗಿ ಬೈಬಲಿನ ಒಂದು ನೇರವಾದ ತಡೆಯಾಜ್ಞೆ ಎಂಬುದು ಇರುವದೇ ಆದಲ್ಲಿ, ಅದು ಇದೇ ಆಗಿದೆ: "ನೀವೇ ಮುಯ್ಯಿಗೆ ಮುಯ್ಯಿ ತೀರಿಸಬೇಡಿರಿ" (12:19a). ನಾವು ಜೀವಿಸುವ ಈ ಯುಗದಲ್ಲಿ ವೈಯಕ್ತಿಕವಾಗಿ ಸೇಡು ತೀರಿಸಿಕೊಳ್ಳುವದನ್ನು ಪ್ರೋತ್ಸಾಹಿಸಲಾಗುತ್ತದೆ, ಅದರ ಕೊಂಡಾಟವನ್ನು ಸಹ ಮಾಡಲಾಗುತ್ತದೆ. ಸೇಡು ತೀರಿಸಿಕೊಳ್ಳುವದೇ ಅನೇಕ ಪುಸ್ತಕಗಳ, ಸಿನಿಮಾಗಳ, ಮತ್ತು ಟಿವಿ ದಾರಾವಾಹಿಗಳ ಪ್ರಮುಖ ಕಥಾಹಂದರವಾಗಿರುತ್ತದೆ. ಬಂಪರ್ ಸ್ಟೀಕರ್.ಗಳು, ಪೋಸ್ಟರುಗಳು, ಮತ್ತು ಟಿ—ಶರ್ಟುಗಳು ಹೀಗೆ ಘೋಷಣೆಯನ್ನು ಹೊಂದಿರುತ್ತವೆ, "ನಾನು

ಬುದ್ಧಿಸ್ಥಿಮಿತ ಕಳೆದುಕೊಳ್ಳುವದಿಲ್ಲ. ನಾನು ಪ್ರತೀಕಾರ ಮಾಡುತ್ತೇನೆ." ಕೆಲವು ಸಾರಿ ಪ್ರತೀಕಾರಕ್ಕೆ ಒಂದು ವೇಷವನ್ನು ಹಾಕಿ ಅದನ್ನು "ವೈಯಕ್ತಿಕವಾಗಿ ನ್ಯಾಯವನ್ನು ಪಡೆಯುವದು" ಎಂದು ಕರೆಯುವ ಪ್ರಯತ್ನ ಮಾಡಲಾಗುತ್ತದೆ. ಇನ್ನು ಕೆಲವರು "ಕಣ್ಣಿಗೆ ಪ್ರತಿಯಾಗಿ ಕಣ್ಣು, ಹಲ್ಲಿಗೆ ಪ್ರತಿಯಾಗಿ ಹಲ್ಲು ಪ್ರತಿದಂಡನೆ" ಎಂಬ ಹಳೆಯ ಒಡಂಬಡಿಕೆಯ ಶಾಸನವನ್ನು ತಮ್ಮ ಸೇಡು ತೀರಿಸಿಕೊಳ್ಳುವಿಕೆಗೆ ಒಂದು ನೆವವಾಗಿ ಬಳಸಿಕೊಳ್ಳುವ ಪ್ರಯತ್ನವನ್ನು ಸಹ ಮಾಡುತ್ತಾರೆ (ನೋಡಿರಿ ವಿಮೋಚನಕಾಂಡ 21:24; ಯಾಜಕಕಾಂಡ 24:20).[96] ಮನುಷ್ಯರು ಅದಕ್ಕೆ ಯಾವ ರೀತಿಯಲ್ಲಿ ಮರುವೇಷ ಹಾಕುವದಕ್ಕೆ ಪ್ರಯತ್ನಿಸಿದರೂ ಅದನ್ನು ಹಿತಕರವೆಂದು ಕಾಣಿಸುವಂತೆ ಮಾಡುವದಕ್ಕೆ ಪ್ರಯತ್ನಿಸಿದರೂ ಸರಿಯೇ, ಅದು ಆಗಲೂ ಅಪಕಾರಕ್ಕೆ ಅಪಕಾರ, ಆಗಲೂ ಮುಯ್ಯಿಗೆ ಮುಯ್ಯಿ ತೀರಿಸುವಿಕೆಯೇ ಆಗಿರುತ್ತದೆ; ಪೌಲನು ಆಗಲೂ ಹೀಗೆ ಹೇಳಿದನು, "ಅದನ್ನು ಮಾಡಬೇಡ!"

ಮುಂದಿನ ಬುದ್ಧಿವಾದ, "ಶಿಕ್ಷಿಸುವದನ್ನು ದೇವರಿಗೆ ಬಿಡಿರಿ" (12:19b), ಎಂಬುದರರ್ಥವೇನೆಂದರೆ ದೇವರಿಗೆ ಸೇರಿದ ಕೆಲಸವನ್ನು ನಾವು ಮಾಡಕೂಡದು, ಅಂದರೆ ನಾವು ಪಕ್ಕಕ್ಕೆ ಸರಿದು ಕೆಟ್ಟದ್ದನ್ನು ದಂಡಿಸುವ ಕೆಲಸವನ್ನು ಮಾಡುವಂತೆ ಕರ್ತನಿಗೆ ದಾರಿ ಮಾಡಿಕೊಡಬೇಕು ಎಂದಾಗಿರುತ್ತದೆ. Taylor Cave ಒಮ್ಮೆ ದಕ್ಷಿಣ ಅಮೆರಿಕದ ದೇಶದಲ್ಲಿ ನಡೆದ ಒಂದು ಘಟನೆಯ ಕುರಿತು ಹೇಳಿದನು.[97] ಒಬ್ಬ ಮನುಷ್ಯನು ತನ್ನ ಜಮೀನನಲ್ಲಿದ್ದ ಮರಗಳನ್ನು ಕಳ್ಳತನ ಮಾಡುತ್ತಿದ್ದ ಇಬ್ಬರನ್ನು ಹಿಡಿದನು. ಆತನು ಅವರನ್ನು ವಿರೋಧಿಸಿ ಅಲ್ಲಿಂದ ಹೊರಟು ಹೋಗುವಂತೆ ಗದರಿಸಿದನು. ಅವರು ಹೊರಡುವಾಗ, ಅವನ ಮೇಲೆ ಸೇಡು ತೀರಿಸಿಕೊಳ್ಳುವದಾಗಿ ಆಣೆಯಿಟ್ಟರು. ನಂತರದಲ್ಲಿ, ಅವರು ಆ ವ್ಯಕ್ತಿಯನ್ನು ಮತ್ತು ಆತನ ಮಗನನ್ನು ಕೊಲೆ ಮಾಡಿದರು. ಆ ಇಬ್ಬರು ವ್ಯಕ್ತಿಗಳು ಪೋಲಿಸರಿಂದ ಬಂಧಿಸಲ್ಪಟ್ಟರು. ಪೋಲಿಸರು ಹತ್ಯೆಯಾಗಿದ್ದ ವ್ಯಕ್ತಿಯ ಕಿರಿಯ ಮಗನನ್ನು ಆ ಇಬ್ಬರು ವ್ಯಕ್ತಿಗಳ ಹತ್ತಿರ ಕರೆದೊಯ್ದು ಅವನಿಗೆ, "ಇಗೋ, ಈ ಗನ್ ತೆಗೆದುಕೋ. ನಾವು ಒಂದು ಬದಿಯಲ್ಲಿ ನಿಂತುಕೊಳ್ಳುತ್ತೇವೆ. ನೀನು ಇಷ್ಟಬಂದದ್ದನ್ನು ಮಾಡು" ಎಂದು ಹೇಳಿದರು. ಆ ಯುವಕನು ಗನ್ ಹಿಂದಿರುಗಿಸಿ, "ಇಲ್ಲ, ಅದು ದೇವರು ಮಾಡಬೇಕಾದ ಕೆಲಸ" ಎಂದು ಹೇಳಿಬಿಟ್ಟನು.

ನ್ಯಾಯತೀರ್ಪು ದೇವರಿಗೆ ಸೇರಿದ್ದು. "ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆಂಬದಾಗಿ ಬರೆದದೆ" (12:19c). ನಾವು ಸೇಡು, ಪ್ರತೀಕಾರ ಮಾಡುವದರಿಂದ ದೂರವಿರಬೇಕು, ಯಾಕೆಂದರೆ ಈ ವಿಷಯಗಳನ್ನು ನಿಭಾಯಿಸುವದರಲ್ಲಿ ದೇವರು ನಮಗಿಂತ ಉತ್ತಮ ಸ್ಥಾನದಲ್ಲಿದ್ದಾನೆ. ಆತನಿಗೆ ಎಲ್ಲವೂ ಗೊತ್ತಿದೆ, ಆದರೆ ನಮಗೆ ತಿಳಿಯದು. ಆತನು ಸಮಸ್ತವನ್ನೂ ನೋಡುತ್ತಾನೆ, ಆದರೆ ನಾವು ನೋಡುವದಿಲ್ಲ. ಆತನಿಗೆ ಸಮಸ್ತ ಶಕ್ತಿಯಿದೆ, ಆದರೆ ನಮಗಿಲ್ಲ. ನಾವು ನಮ್ಮ ವೈರಿಗಳಿಗೆ ದಂಡನೆಯನ್ನು ಕೊಡುವದಕ್ಕೆ ಪ್ರಯತ್ನಿಸುವಾಗ, "ನಮ್ಮ ಪಾಪದಿಂದ ಸುತ್ತಲ್ಪಟ್ಟ, ಭಾವೋದ್ರೇಕದಿಂದ ಆವರಿಸಲ್ಪಟ್ಟ ಯೋಚನೆ," ನಮ್ಮ "ಪಕ್ಷಪಾತದ ಜ್ಞಾನ," ಮತ್ತು "ಹೃದಯಗಳನ್ನು ತಿಳಿಯುವ ಅಸಮರ್ಥತೆಯು ಅದನ್ನು ನ್ಯಾಯವಾದ ರೀತಿಯಲ್ಲಿ ಮಾಡುವದರಿಂದ ತಡೆಯುತ್ತದೆ" ಎಂಬದಾಗಿ Bell ಅಭಿಪ್ರಾಯ ಪಡುತ್ತಾನೆ.[98]

ವಾಕ್ಯಭಾಗವು ಮುಂದುವರೆದು, "ನಿನ್ನ ವೈರಿಯು ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು; ಬಾಯಾರಿದ್ದರೆ ಕುಡಿಯುವದಕ್ಕೆ ಕೊಡು" ಎಂದು ಹೇಳುತ್ತದೆ (12:20). ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನಿಗೆ ಸಹಾಯ ಮಾಡಿರಿ. ಕೆಲ ಕಾಲದ ಹಿಂದೆ, ನಾನು ಕರ್ತನ ಸಭೆಯ ಸದಸ್ಯರಾಗಿದ್ದ ಒಬ್ಬ ವಿವಾಹಿತ ದಂಪತಿಯ ಬಗ್ಗೆ ಒಂದು ಪುಸ್ತಕವನ್ನು ಓದಿದೆನು. ಅವರ ಹದಿವಯಸ್ಸಿನ ಮಗನು ಒಬ್ಬ ಕುಡಿದು ವಾಹನ ಚಲಾಯಿಸಿದವನಿಂದ ಕೊಲ್ಲಲ್ಪಟ್ಟಿದ್ದನು, ಆ ಯುವಕನು ಸಹ ಸುಮಾರು ಅವರ ಮಗನ ವಯಸ್ಸಿನವನೇ ಆಗಿದ್ದನು. ಅವರು ಬಹಳ ಮನಸ್ಸು ಒಡೆದುಹೋದವರಾಗಿ ಹೋಗಿದ್ದರು, ಮತ್ತು ಮೊದಮೊದಲಲ್ಲಿ, ಬಹಳ ಕಹಿಭಾವನೆಯಿಂದ ತುಂಬಿದ್ದರು. ಹೇಗೂ, ಯೇಸು ಹಾಗೂ ಪೌಲನು ಏನು ಕಲಿಸಿ ಕೊಟ್ಟರೆಂಬುದನ್ನು ಅವರು ಅರಿತುಕೊಂಡಿದ್ದರು. ದೇವರ ಸಹಾಯದಿಂದ, ಅವರು ಆ ಯುವಕನೊಂದಿಗೆ ಗೆಳೆತನ ಮಾಡಿಕೊಂಡರು ಮತ್ತು ಅವನಿಗೆ ಪುನರ್ವಸತಿ ಕಲ್ಪಿಸುವಲ್ಲಿ ಸಹಾಯ ಮಾಡಿದರು. ಅಂತ್ಯದಲ್ಲಿ, ಅವನ ಜೀವನವು ಆಶೀರ್ವದಿಸಲ್ಪಟ್ಟಿತು ಮತ್ತು ಅವರ ಜೀವಿತಗಳು ಸಹ ಆಶೀರ್ವದಿಸಲ್ಪಟ್ಟವು.[99]

ಒಬ್ಬ ವೈರಿಗೆ ಉಪಕಾರವನ್ನು ಮಾಡುವದು ಆ ವ್ಯಕ್ತಿಯನ್ನು *ಯಾವಾಗಲೂ* ಪಶ್ಚಾತ್ತಾಪಕ್ಕೆ ನಡಿಸಿ ಸಂಧಾನವನ್ನುಂಟು ಮಾಡುವಂತೆ ಮಾಡುವದೋ? ಇಲ್ಲ—ಆದರೆ ಉಪಕಾರವನ್ನು ಮಾಡುವದು ಸಾಮಾನ್ಯವಾಗಿ *ನಿಮಗೆ* ಸಹಾಯ ಮಾಡುವದಾಗಿದೆ. ನೀವು ನಿಮಗೆ ಸಾಧ್ಯವಾದದ್ದನ್ನೆಲ್ಲಾ ಮಾಡಿರುವಿರಿ, ಮತ್ತು ನೀವಿ ನಿಮ್ಮ ಹೃದಯದಿಂದ ಕಹಿಭಾವನೆಯನ್ನು ತೊಲಗಿಸಿಕೊಳ್ಳುವಿರಿ ಎಂಬುದನ್ನು ನೀವು ತಿಳಿಯಬಲ್ಲಿರಿ.

ಅಪಕಾರಕ್ಕೆ ಉಪಕಾರವನ್ನು ಮಾಡುವದು *ಕೆಲವು ಸಾರಿ* ಅಪಕಾರವನ್ನು ಮಾಡಿದವನ ಮೇಲೆ ಸಕಾರಾತ್ಮಕವಾದ ಪರಿಣಾಮವನ್ನು ಬೀರಬಹುದಾಗಿದೆ. ಒಬ್ಬ ನೆರೆಯವನು ಸಾರ್ವಜನಿಕ ಧ್ವನಿವರ್ಧಕದಲ್ಲಿ ಹಿಂದು ಹಾಡುಗಳನ್ನು ಬಹಳ ಶಬ್ದದಿಂದ ನುಡಿಸುವದರ ಮೂಲಕ ಸಭೆಯ ಸಾರ್ವಜನಿಕ ಕೂಟಗಳಿಗೆ ಅಡಚಣೆಯನ್ನುಂಟು ಮಾಡುವದಕ್ಕೆ ಪ್ರಯತ್ನಿಸಿದ್ದರ ಕುರಿತು India Report ನಲ್ಲಿ ಬರೆಯಲಾಗಿತ್ತು. ಒಂದು ದಿನ ಆ ಪ್ರಾಂತ್ಯದಲ್ಲಿ ಒಂದು ಭಯಂಕರವಾದ ಚಂಡಮಾರುತ ಅಪ್ಪಳಿಸಿತು. ಆ ನೆರೆಯವನು ಮತ್ತು ಇತರರು ಸಭೆಯ ಕಟ್ಟಡದಲ್ಲಿ ಆಶ್ರಯವನ್ನು ಪಡೆದರು. ಸಭೆಯ ಸದಸ್ಯರು ಅವರಿಗೆಲ್ಲಾ ಮೂರು ದಿನಗಳ ಕಾಲ ಆಹಾರವನ್ನು ಒದಗಿಸಿದರು. ಅನಂತರದಲ್ಲಿ, ಆ ವ್ಯಕ್ತಿಯು ಸುವಾರ್ತೆಗೆ ವಿಧೇಯನಾದನು.[100]

*ಮುಕ್ತಾಯ.* ಹೌದು, ಕ್ರೈಸ್ತರಾಗಿ ನಮಗೆ ಎದುರಾಗುವ ಅತ್ಯಂಥ ಕಠಿಣವಾದ ಪರೀಕ್ಷೆಗಳಲ್ಲೊಂದೆಂದರೆ ಪ್ರೀತಿಗೆ ಅರ್ಹರಲ್ಲದವರನ್ನು ಪ್ರೀತಿಸುವದೇ. ಎಲ್ಲಾ ಪರೀಕ್ಷೆಗಳಂತೆಯೇ, ಇದು ಕೆಲವರಿಗೆ ಮಿಕ್ಕವರಿಗಿಂತಲೂ ಹೆಚ್ಚು ಸವಾಲುಕರವಾಗಿರುತ್ತದೆ. ಕೆಲವರು, ಅವರ ಮನೋಧರ್ಮ ಹಾಗೂ ಪಾಲನೆಮಾಡಲ್ಪಟ್ಟ ರೀತಿಯ ಕಾರಣದಿಂದ, ಸ್ವಾಭಾವಿಕವಾಗಿಯೇ ತಮಗೆ ನೋವುಂಟು ಮಾಡುವವರಿಗೆ ಪ್ರತಿಯಾಗಿ ನೋವುಂಟು ಮಾಡಲು ಪ್ರಯತ್ನಿಸುತ್ತಾರೆ. ಹೇಗೂ, ಇದು ಪ್ರತಿಯೊಬ್ಬರಿಗೂ ಒಂದು ಸುಲಭವಾದ ಪರೀಕ್ಷೆಯಾಗಿರುವದಿಲ್ಲ.

ಎಲ್ಲಾ ಪರೀಕ್ಷೆಗಳಂತಯೇ, ನಾವು ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳುವದಾದಲ್ಲಿ ಸುಲಭವಾಗಿರುವದಾಗಿದೆ. ಸಿದ್ಧತೆ ಮಾಡಿಕೊಳ್ಳಬೇಕೆಂದರೆ, ಪೌಲನು ರೋಮಾ 12:14, 17–

21ರಲ್ಲಿ ಆಜ್ಞಾಪಿಸಿರುವಂತೆಯೇ ಸರಿಯಾಗಿ ಮಾಡುವದಕ್ಕೆ ತೀರ್ಮಾನವನ್ನು ತೆಗೆದುಕೊಳ್ಳತಕ್ಕದ್ದು. ನಂತರ ಕರ್ತನು ನಮಗೆ ಅದನ್ನು ಮಾಡುವಂತಾಗಲು ಸಹಾಯ ಒದಗಿಸುವಂತೆ ಆತನಿಗೆ ನಿಟಕವಾಗಿ ಬಾಳತಕ್ಕದ್ದು.

ನಾವು ಸಿದ್ಧತೆ ಮಾಡಿಕೊಂಡಾಗ್ಯೂ, ನಾವು ಯಾವಾಗಲು ಈ ಪರೀಕ್ಷೆಯನ್ನು ಯಶಸ್ವಿಯಾಗಿ ಮುಗಿಸುವೆವೋ? ಬಹುಶಃ ಇಲ್ಲ. ಹೇಗೂ, ನಾವು ವಿಫಲರಾದರೆ, ನಾವು (ಒಂದು ಅರ್ಥದಲ್ಲಿ) ಎರಡನೆಯ ಸಾರಿ ಆ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ನಾವು ನಮ್ಮ ವಿಫಲತೆಗಾಗಿ ಪಶ್ಚಾತ್ತಾಪ ಪಟ್ಟು ನಮ್ಮನ್ನು ಕ್ಷಮಿಸುವಂತೆ ದೇವರನ್ನು ಕೇಳಿಕೊಳ್ಳಬಹುದು. ನಾವು ನಮ್ಮ ಹಿಂಸಕನ ಬಳಿಗೆ ಹೋಗಿ, "ನಾನು ಒಬ್ಬ ಕ್ರೈಸ್ತನು ಪ್ರತಿಕ್ರಿಯಿಸಬೇಕಾದ ರೀತಿಯಲ್ಲಿ ನಡೆದುಕೊಳ್ಳಲಿಲ್ಲ. ನನ್ನ ಕ್ರಿಯೆಗಳಿಗಾಗಿ ನಾಚಿಕೆಯಾಗುತ್ತದೆ, ಮತ್ತು ನಾನು ನಿನ್ನ ಕ್ಷಮೆಯನ್ನು ಕೇಳುತ್ತೇನೆ" ಎಂದು ಹೇಳಿರಿ.

---

**ಅಡಿಟಿಪ್ಪಣಿಗಳು**

[1]John R. W. Stott, *The Message of Romans: God's Good News for the World*, The Bible Speaks Today (Downers Grove, Ill.: Inter-Varsity Press, 1994), 317. [2]Warren W. Wiersbe, *The Bible Exposition Commentary*, vol. 1 (Wheaton, Ill.: Victor Books, 1989), 553. [3]R. C. Bell, *Studies in Romans* (Austin, Tex.: Firm Foundation Publishing House, 1957), 133. [4]J. D. Thomas, Class Notes, *Romans*, Abilene Christian College (1955). [5]NASBಯ ಈ ವಚನಗಳಲ್ಲಿ "ಆದದರಿಂದ" ಎಂಬುದು ಕಾಣಿಸಿಕೊಳ್ಳುತ್ತದೆ. ಕೆಲವು ಸಾರಿ ಇದು ಗ್ರೀಕ್.ನ *oun* ಎಂಬದನ್ನು ಅನುವಾದಿಸುವದಕ್ಕಾಗಿ ಉಪಯೋಗಿಸಲ್ಪಟ್ಟಿರುತ್ತದೆ; ಇನ್ನು ಕೆಲವು ಸಮಯಗಳಲ್ಲಿ ಇದು ಗ್ರೀಕ್.ನ ಬೇರೆ ಪದವನ್ನು ಪ್ರತಿನಿಧಿಸುತ್ತದೆ. [6]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 62. [7]Dale Hartman, sermon preached at Eastside church of Christ, Midwest City, Oklahoma, c. 2004. [8]Marvin R. Vincent, *Word Studies in the New Testament*, vol. 3, *The Epistles of Paul* (Grand Rapids, Mich.: Wm. B. Eerdmans Publishing Co., 1965), 153. [9]F. F. Bruce, *The Letter of Paul to the Romans*, 2d ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 212. [10]Thomas, Class Notes, *Romans*.

[11]William Barclay, *The Letter to the Romans*, rev. ed., The Daily Study Bible (Philadelphia: Westminster Press, 1975), 156. [12]Stott, 322. [13]Vine, 509. [14]Barclay, 156-57. [15]ಈ ಮುಂಚೆ, 9:4ರಲ್ಲಿ, *latreia* ಗೆ NASB ಯು "ಸೇವೆ" ಎಂದು ಸೂಚಿಸಿರುತ್ತದೆ, ಅದರ ಮುಂದುಗಡೆಯಲ್ಲಿ "ದೇವಾಲಯ" ಎಂದು ಸೇರ್ಪಡೆಗೊಳಿಸಿರುತ್ತದೆ. ಒಂದು ನಂಟಸ್ತಿಕೆಯ ಪದವಾಗಿದ್ದು, λειτουργία (*leitourgia*), ಎಂಬುದರಿಂದಲೇ "liturgy" ಎಂಬ ಪದವು ಬಂದಿರುತ್ತದೆ, ಇದು ಇಂದು ಕೆಲವು ಪಂಗಡಗಳಲ್ಲಿ ಆಯ್ಕೆಮಾಡಿಕೊಳ್ಳಲ್ಪಡುವಂಥ ಒಂದು ಪೂರ್ವನಿಯೋಜಿತವಾದ ಆರಾಧನಾ ವಿಧಿಗಳನ್ನು ಸೂಚಿಸುತ್ತದೆ. [16]Anonymous; quoted in Bruce Barton, David Veerman, and Neil Wilson, *Romans*, Life Application Bible Commentary (Wheaton, Ill.: Tyndale House Publishers, 1992), 232. [17]ಪೌಲನು 12:2ದಲ್ಲಿ "ರೂಪ" ಎಂಬುದಕ್ಕೆ ಎರಡು ಬೇರೆ ಬೇರೆ ಪದಗಳನ್ನು ಉಪಯೋಗಿಸಿದನು: "ಅನುಸರಿಸದೆ" ಎಂಬುದರಲ್ಲಿ σχῆμα (*schēma*) ಎಂಬ ಪದವನ್ನು (ಅದು ನಿರಂತರವಾಗಿ ಬದಲಾಗುವ ಬಹಿರಂಗದ ರೂಪಕ್ಕೆ ಸಂಬಂಧಿಸಿದ್ದು) ಮತ್ತು "ನೂತನ ಮನಸ್ಸನ್ನು ಹೊಂದಿಕೊಂಡು" ಎಂಬದರಲ್ಲಿ μορφή (*morphē*) ಎಂಬ ಪದವನ್ನು (ಅದು ಒಂದು ವಸ್ತುವಿನ ಜೀವಾಳವಾದ ಸ್ವಭಾವವನ್ನು ಸೂಚಿಸುತ್ತದೆ) ಉಪಯೋಗಿಸಿದನು. ಪೌಲನು ವಿರುದ್ಧ ಹೋಲಿಕೆಯನ್ನು ತೋರ್ಪಡಿಸುವದಕ್ಕೆ ಬೇಕೆಂದೇ ಬೇರೆ ಬೇರೆ ಪದಗಳನ್ನು ಬಳಸಿದನೆಂದು ಕೆಲವರು

ಅಭಿಪ್ರಾಯ ಪಡುತ್ತಾರೆ. ಈ ದೃಷ್ಟಿಕೋನಕ್ಕೆ TEV ಯು ಒಂದು ಉದಾಹರಣೆಯನ್ನು ಒದಗಿಸುತ್ತದೆ: "ಈ ಲೋಕದ ಮಾನದಂಡಗಳನ್ನು ಬಾಹ್ಯದಲ್ಲಿ ಅನುಸರಿಸದಿರಿ, ಆದರೆ ದೇವರು ನಿಮ್ಮನ್ನು ಅಂತರ್ಯದಲ್ಲಿ ರೂಪಾಂತರಗೊಳಿಸುವಂತೆ ಅನುಮತಿಸಿರಿ." ಇನ್ನು ಕೆಲವು ಬರಹಗಾರರು ನಂಬುವದೇನೆಂದರೆ ಪೌಲನು ಈ ಎರಡು ಪದಗಳನ್ನು ಇಂದಿಬ ಭಾಷಣಕಾರರು ಹಾಗೂ ಬರಹಗಾರರ ರೀತಿಯಲ್ಲಿಯೇ ವೈವಿಧ್ಯಕ್ಕೋಸ್ಕರ ಪರ್ಯಾಯ ಪದಗಳಾಗಿ ಉಪಯೋಗಿಸಿದನು ಎಂಬದೆ. ಎರಡರಲ್ಲಿ ಯಾವದೇ ಅರ್ಥನಿರೂಪಣೆಯು ಸಾಧ್ಯವಿರುತ್ತದೆ. ಯಾವ ಪದವನ್ನೇ ಉಪಯೋಗಿಸಿದ್ದಾಗ್ಯೂ, ಪೌಲನ ಮೂಲಭೂತ ಸಂದೇಶವಂತೂ ಬದಲಾಗುವದಿಲ್ಲ. [18]ಮತ್ತಾಯ 17:2 ಮತ್ತು ಮಾರ್ಕ 9:2ರಲ್ಲಿ *metamorphoō* ಎಂಬ ಒಂದು ರೂಪವು "ರೂಪ ಬೇರೆಯಾಯಿತು" ಎಂಬುದರಲ್ಲಿ ಉಪಯೋಗಿಸಲ್ಪಟ್ಟಿದೆ. ಆತನ ಶರೀರದ ಮೂಲಕ ಆತನ ದೇವತ್ವವು ಪ್ರಕಾಶಗೊಂಡಾಗ ಕ್ರಿಸ್ತನ ರೂಪವು ನಾಟಕೀಯವಾಗಿ ಮಾರ್ಪಟ್ಟಿತು. [19]ಆಂಗ್ಲದಲ್ಲಿ ಕೇವಲ ಎರಡು ಸ್ವರಗಳಿರುತ್ತವೆ: ಸಕ್ರಿಯ (ನಾವು ಮಾಡುವಂತದ್ದು) ಮತ್ತು ಕರ್ಮಣಿ (ನಮಗೆ ಮಾಡಲ್ಪಡುವಂತದ್ದು). ಗ್ರೀಕ್.ನಲ್ಲಿ ಮೂರನೆಯ ಸ್ವರ ಇರುತ್ತದೆ: ಮಧ್ಯಮ (ನಮಗೆ ಅಥವಾ ನಮಗೋಸ್ಕರ ನಾವು ಮಾಡಿಕೊಳ್ಳುವಂತದ್ದು). [20]ಮೂಲ ವಾಕ್ಯದಲ್ಲಿ "is" ಎಂಬುದು ಕಾಣಿಸಿಕೊಳ್ಳುವದಿಲ್ಲ; ಅದು ಅನುವಾದಕರಿಂದ ಒದಗಿಸಲ್ಪಟ್ಟಿರುತ್ತದೆ.

[21]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 255. [22]Barclay, 155. [23]Vine, 583. [24]C. G. Wilke and Wilibald Grimm, *A Greek-English Lexicon of the New Testament*, trans. and rev. Joseph Henry Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 408. [25]ಪಟ್ಟಿಯಲ್ಲಿ ಅದ್ಭುತಕರವಾದ ವರಗಳು ಮತ್ತು ಅದ್ಭುತಕರವಲ್ಲದ ವರಗಳು ಎರಡೂ ಸೇರಿರುತ್ತವೆಂದು ಬಹುತೇಕ ಬರಹಗಾರರು ಒಮ್ಮತ ವ್ಯಕ್ತಪಡಿಸುತ್ತಾರೆ, ಆದರೆ ಯಾವವು ಅದ್ಭುತಕರವಾದ ವರಗಳು ಮತ್ತು ಯಾವವು ಅದ್ಭುತಕರವಾದ ವರಗಳಲ್ಲ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿರುತ್ತವೆ. [26]Bell, 136. [27]*The Analytical Greek Lexicon* (London: Samuel Bagster & Sons, 1971), 354. [28]Ibid., 23. [29]Vine, 494. [30]Stott, 327; citing C. E. B. Cranfield, *A Critical and Exegetical Commentary on the Epistle to the Romans*, vol. 2, The International Critical Commentary (Edinburgh: T. & T. Clark, 1983), 621.

[31]Vine, 619. [32]*The Analytical Greek Lexicon*, 265. [33]Bauer, 104. [34]Ibid. [35]O. Bauernfeind, "*haplótēs*," in *Theological Dictionary of the New Testament*, ed. Gerhard Kittel and Gerhard Friedrich, trans. and abr. Geoffrey W. Bromiley (Grand Rapids, Mich.: Wm. B. Eerdmans Publishing Co., 1985), 65. [36]Vine, 169. [37]Ibid., 404. [38]Ibid., 98. [39]D. Stuart Briscoe, *Romans*, The Communicator's Commentary (Waco, Tex.: Word Books, 1982), 222. [40]Anders Nygren, *Commentary on Romans* (Philadelphia: Fortress Press, 1949), 424.

[41]Vine, 316. [42]Ibid., 1. [43]Jim McGuiggan, *The Book of Romans*, Looking Into The Bible Series (Lubbock, Tex.: Montex Publishing Co., 1982), 367. [44]ಕೆಟ್ಟದ್ದನ್ನು ದ್ವೇಷಿಸುವ ಕುರಿತ ಹೆಚ್ಚುವರಿ ವಾಕ್ಯಭಾಗಗಳಿಗಾಗಿ, ನೋಡಿರಿ ಕೀರ್ತನೆ 97:10, 119:104; ಜ್ಞಾನೋಕ್ತಿ 8:13; ಇಬ್ರಿಯ 1:9. [45]Vine, 104. KJV ಯಲ್ಲಿ "ಅಂಟಿಕೋ" ಎಂದಿರುತ್ತದೆ. ಮತ್ತಾಯ 19:5ರಲ್ಲಿ ಗಂಡ ಮತ್ತು ಹೆಂಡತಿಯರು ಒಟ್ಟಾಗಿ ಸೇರಿಕೊಳ್ಳುವರು ಎಂಬುದನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಟ್ಟಿರುವ ಗ್ರೀಕ್.ನ ಅದೇ ಪದವಾಗಿರುತ್ತದೆ. [46]"ಪ್ರೀತಿ" ಎಂಬುದಕ್ಕಿರುವ ಗ್ರೀಕ್.ನ ನಾಲ್ಕನೆಯ ಪದ ἔρως (*erōs*), ಇದು ದೈಹಿಕ ಪ್ರೀತಿಯನ್ನು (ಲೈಂಗಿಕ ಸೇರಿದಂತೆ) ಸೂಚಿಸುತ್ತದೆ. ಬೈಬಲಾಧಾರಿತವಾದ ವಿವಾಹದಲ್ಲಿ ದೈಹಿಕ ಪ್ರೀತಿಯು ಸರಿಯಾದದ್ದು ಹಾಗೂ ಪ್ರೋತ್ಸಾಹ ಸಹ ಮಾಡಲ್ಪಡುತ್ತದೆ (1 ಕೊರಿಂಥ 7:2, 3; ಇಬ್ರಿಯ 13:4), ಆದರೆ *erōs* ಎಂಬುದಕ್ಕೆ ಬಹಳಷ್ಟು ಕೆಟ್ಟ ಅಧಿಕಾರ್ಥಗಳಿದ್ದದರಿಂದ ಹೊಸ ಒಡಂಬಡಿಕೆಯ ಬರಹಗಾರರು ಅದನ್ನು ಉಪಯೋಗಿಸಲಿಲ್ಲ. [47]"ಪ್ರೀತಿ" ಎಂಬುದಕ್ಕೆ ಗ್ರೀಕ್.ನಲ್ಲಿರುವ ಪದಗಳ ಕುರಿತ ಹೆಚ್ಚಿನ ಮಾಹಿತಿಗಾಗಿ, ನೋಡಿರಿ David Roper, *Getting Serious About Love* (Searcy, Ark.: Resource Publications, 1992), 13-29. [48]Vine, 310. [49]Ibid., 483. [50]Barclay, 164.

[51]*The Analytical Greek Lexicon*, 286. [52]Vine, 233. [53]Barclay, 163. [54]Leon Morris, *The Epistle to the Romans* (Grand Rapids, Mich.: Wm. B. Eerdmans Publishing Co., 1988),

447. [55]Vine, 17. [56]Ibid., 462. [57]NASB 10 ಮತ್ತು 12 ಎರಡೂ ವಚನಗಳಲ್ಲಿ ಆಂಗ್ಲದ “devoted” (ನಿಷ್ಠೆಯಿಂದಿರಿ) ಎಂಬ ಪದವನ್ನು ಬಳಸಿರುತ್ತದೆ; ಆದರೆ 12ನೇ ವಚನದಲ್ಲಿ 10ನೇ ವಚನದಲ್ಲಿರುವದಕ್ಕಿಂತಲೂ ವ್ಯತ್ಯಾಸವಾದ ಗ್ರೀಕ್ ಪದವನ್ನು ಬಳಸಲಾಗಿರುತ್ತದೆ. [58]W. Grundmann, “*karteréō*,” in *Theological Dictionary of the New Testament*, 417. [59]Vine, 177, 233. [60]Luke Hartman, “God’s Call to Love,” sermon preached at Eastside church of Christ, Midwest City, Oklahoma, 17 July 2005.

[61]ಅತಿಥಿಸತ್ಕಾರದ ಚರ್ಚೆಗಾಗಿ, ನೋಡಿರಿ David Roper, “The Man Who Gave Life (2 Kings 4:8-17),” *Truth for Today* 24, no. 11 (April 2004): 28-29. [62]A. Oepke, “*diṓkō*,” in *Theological Dictionary of the New Testament*, 177. [63]“ನೀನು” ಎಂಬುದರ ಗ್ರೀಕ್ ಪದವು ಹಲವರು ಪ್ರಾಚೀನ ಹಸ್ತಪ್ರತಿಗಳಲ್ಲಿ ಕೈಬಿಡಲ್ಪಟ್ಟಿರುತ್ತದೆ, ಆದ್ದರಿಂದ ಪೌಲನ ಬುದ್ಧಿವಾದವು ಒಟ್ಟಾರೆಯಾಗಿ ಹಿಂಸಕರಿಗೆ ಅನ್ವಯವಾಗುತ್ತದೆಂದು ಕೆಲವು ವ್ಯಾಖ್ಯಾನಕಾರರು ಅಭಿಪ್ರಾಯ ಪಡುತ್ತಾರೆ. [64]Adapted from Vine, 69. [65]ಬೇರೊಂದು ಕಡೆಯಲ್ಲಿ ಆ ವಿಧವಾದ ಭಾಷೆಯನ್ನು ಖಂಡಿಸಲಾಗಿರುತ್ತದೆ. ಉದಾಹರಣೆಗೆ, ಕೊಲೊಸ್ಸೆ 3:8 “ಬಾಯಿಂದ ಹೊರಡುವ ದುರ್ಭಾಷೆ” (“ಕೆಟ್ಟ ಸಂಭಾಷಣೆ”; KJV) ಖಂಡಿಸುತ್ತದೆ. [66]Morris, 451. [67]Stott, 333. [68]Richard A. Batey, *The Letter of Paul to the Romans*, The Living Word Commentary (Austin, Tex.: R. B. Sweet Co., 1969), 155. [69]Barton, Veerman, and Wilson, 243. [70]Douglas J. Moo, *Romans*, The NIV Application Commentary (Grand Rapids, Mich.: Zondervan Publishing House, 2000), 417.

[71]Vine, 274. KJVಯಲ್ಲಿ “ಎಲ್ಲರ ದೃಷ್ಟಿಯಲ್ಲಿ ಪ್ರಾಮಾಣಿಕವಾದ ಸಂಗತಿಗಳನ್ನು ಒದಗಿಸಿರಿ” ಎಂದಿರುತ್ತದೆ. “ಸರಿಯಾದದ್ದನ್ನು ಮಾಡುವದು” (*kalos*) ಪ್ರಾಮಾಣಿಕವಾಗಿರುವದನ್ನು ಒಳಗೊಂಡಿರುತ್ತದೆ, ಆದರೆ ಅದರಲ್ಲಿ ಅದಕ್ಕಿಂತಲೂ ಹೆಚ್ಚಿನದ್ದು ಅಡಕವಾಗಿರುತ್ತದೆ. NKJVಯು ಹೇಳುತ್ತದೆ, “ಎಲ್ಲಾ ಮನುಷ್ಯರ ದೃಷ್ಟಿಯಲ್ಲಿ ಒಳ್ಳೇ ಕಾರ್ಯಗಳಿಗೋಸ್ಕರ ಗೌರವವನ್ನು ಹೊಂದಿದವರಾಗಿರ್ರಿ.” [72]John Kachelman, “How to Handle Hostility,” *Truth for Today* 9, no. 12 (May 1989): 27. [73]ಹಲವಾರು ತರ್ಜುಮೆಗಳು “ಮಿತ್ರರು” ಅಥವಾ “ಪ್ರಿಯ ಮಿತ್ರರು” ಎಂಬ ಪದಗಳನ್ನು ಬಳಸುತ್ತವೆ, ಆದರೆ *agapētos* ಯು ಕೇವಲ ಸ್ನೇಹಕ್ಕಿಂತಲೂ ಅಧಿಕ ಬಲವಾದ ಹಾಗೂ ಅರ್ಥಗರ್ಭಿತವಾದದ್ದು. [74]Lewis Copeland, ed., *Popular Quotations for All Uses*, rev. ed. (Garden City, N.Y.: Doubleday & Co., 1961), 391. [75]Dale Hartman, sermon preached at the Eastside church of Christ, Midwest City, Oklahoma, 24 October 2004. [76]ಪೌಲನು ಹಿಂಸೆಗೊಳಗಾದವನ ಅಥವಾ ಹಿಂಸಕನ ಕೋಪದ ಬಗ್ಗೆ ಸೂಚಿಸಿದನೆಂದು ಅಭಿಪ್ರಾಯ ಪಡಲಾಗುತ್ತದೆ, ಆದರೆ ಆತನು ದೇವರ ಕೋಪವನ್ನು ಸೂಚಿಸಿ ಮಾತಾಡಿನೆಂಬುದನ್ನು ಸನ್ನಿವೇಶವು ತೋರಿಸುವದಾಗಿದೆ. [77]Jimmy Allen, *Survey of Romans*, 7th ed. (Searcy, Ark.: By the author, 1994), 105. [78]Adapted from McGuiggan, 373. [79]Benjamin Franklin, *Poor Richard’s Almanack* (October 1749). [80]Morris, 454.

[81]Jim Townsend, *Romans*: *Let Justice Roll Down* (Elgin, Ill.: David C. Cook Publishing Co., 1988), 86. [82]Bruce, 217-18. [83]Allen, 105. [84]Thomas R. Schreiner, ಹೇಗೂ, “ಉರಿಯುವ ಕೆಂಡಗಳು” ಎಂಬುದನ್ನು ದೇವರ ನ್ಯಾಯತೀರ್ಪು ಎಂಬದಾಗಿ ಅರ್ಥನಿರೂಪಣೆ ಮಾಡಿದನು. (Thomas R. Schreiner, *Romans*, Baker Exegetical Commentary on the New Testament [Grand Rapids, Mich.: Baker Academic, 1998], 674-76.) [85]Barclay, 170. [86]Stott, 337. [87]*Latreia* ಎಂಬುದು “ಆರಾಧನೆ” ಎಂಬುದಕ್ಕೆ ಹೊಸ ಒಡಂಬಡಿಕೆಯ ಪ್ರಾಥಮಿಕ ಪದಗಳಲ್ಲೊಂದಾಗಿರುವದಿಲ್ಲ, ಆದರೆ ಆರಾಧನೆಯು ಆ ಪದದ ಅರ್ಥದೊಳಗಿಂದ ಹೊರಗಿಡಲ್ಪಟ್ಟಿದೆ ಎಂಬುದು ಅದರರ್ಥವಾಗುವದಿಲ್ಲ. [88]Halford E. Luccock, *Preaching Values in the Epistles of Paul*, vol. 1, *Romans and First Corinthians* (New York: Harper & Brothers, 1959), 77. [89]University of Illinois, Urbana-Champaign, “Atmospheric Pressure” (http://ww2010.atmos.uiuc.edu/(Gh)/guides/mtr/fw/prs/def.rxml; Internet; accessed 19 September 2013). [90]Joe Barnett, “You Are Someone Special” (tract) (N.p., n.d.), 6.

[91]James O. Baird, “Going to Heaven from the Pew,” sermon preached at Macquarie church of Christ, Sydney, Australia, July 1976. [92]Adapted from a talk made by Coy Roper

during a faculty retreat at Heritage Christian University in Florence, Alabama, 25 August 2004. [93]Adapted from Stott, 334-35. [94]Adapted from C. Roy Angell, *Iron Shoes* (Nashville: Broadman Press, 1953), 52-53ರಿಂದ ಆಯ್ದುಕೊಳ್ಳಲ್ಪಟ್ಟಿದೆ. [95]Adapted from Robert J. Morgan, *Nelson's Complete Book of Stories, Illustrations, & Quotes* (Nashville: Thomas Nelson Publishers, 2000), 267-68. [96]ಇದು ದುರುಪಯೋಗ ಪಡಿಸಲ್ಪಟ್ಟಿದೆ, ಮೊದಲನೆಯದಾಗಿ, ಹಳೆ ಒಡಂಬಡಿಕೆಯ ಶಾಸನವು ಅಷ್ಟಾಗಿ ವೈಯಕ್ತಿಕ ಸೇಡು ತೀರಿಸಿಕೊಳ್ಳುವಿಕೆಯ ಕುರಿತಾಗಿರುವದಿಲ್ಲ, ಅದು ಸಮಾಜದಿಂದ ದಂಡನೆಗೊಳಗಾಗುವದರ ಕುರಿತಾಗಿರುತ್ತದೆ. ಎರಡನೆಯದಾಗಿ, ಈಗಿನ ಕಾಲದಲ್ಲಿ ನಾವು ಹೊಸ ಒಡಂಬಡಿಕೆಯ ಮಾನದಂಡಗಳ ಪ್ರಕಾರ ಜೀವಿಸುತ್ತಿದ್ದೇವೆ (ನೋಡಿರಿ ಮತ್ತಾಯ 5:38-42). [97]Taylor Cave, class taught at Eastside church of Christ, Midwest City, Oklahoma, 14 July 2005. [98]Bell, 141-42. [99]Bob Stewart, *Revenge Redeemed* (Old Tappan, N.J.: Fleming H. Revell Co., 1991). [100]*India Report*, Central church of Christ, Lufkin, Texas, 15 July 2002.